ತೆರೆದ-ಅಂಚೆ / Book-Post

Krishi Kayaka Kannada Quarterly,
October to December 2016
MAG(3)/NPP/100/2011-2012
RNI No. - KARKAN/2011/38704

ಗೆ,

ಸ್ಥಾಪನೆ: 1904 ನೋಂದಣಿ ಸಂಖ್ಯೆ : 96/76-77 ದಿನಾಂಕ: 5-7-1976

## ಅಖಿಲ ಭಾರತ ವೀರಶೈವ ಮಹಾಸಭಾ (ರಿ.)

ನಂ. 17/4, 'ವೀರಶೈವ-ಲಿಂಗಾಯತ ಭವನ', ರಮಣಮಹರ್ಷಿ ರಸ್ತೆ, ಸದಾಶಿವನಗರ, ಬೆಂಗಳೂರು-560 080
Ph: 080-23602177, Tele Fax:080-23618400,
e-mail: info@veerashaivamahasabha.com, www.veerashaivamahasabha.org

### ಅಖಿಲ ಭಾರತ ವೀರಶೈವ ಮಹಾಸಭೆಯ ಪದಾಧಿಕಾರಿಗಳು

**ಅಧ್ಯಕ್ಷರು :**
ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವರು
ದಾವಣಗೆರೆ, ಮೊ-98440-97399

**ಹಿರಿಯ ಉಪಾಧ್ಯಕ್ಷರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಘಟಕ :**
ಶ್ರೀ ಎನ್. ತಿಪ್ಪಣ್ಣ, ಮಾಜಿ ಸಭಾಪತಿಗಳು
ಬಳ್ಳಾರಿ, ಮೊ-98452-21373

**ಉಪಾಧ್ಯಕ್ಷರುಗಳು :**
ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್
ಮಾಜಿ ಮಂತ್ರಿಗಳು,
ಸಂಕೇಶ್ವರ, ಬೆಳಗಾವಿ ಜಿಲ್ಲೆ, ಮೊ-94481-12378

ಡಾ. ಪ್ರಭಾಕರ ಕೋರೆ, ಸಂಸದರು
ಬೆಳಗಾವಿ, 98453-54747

ಶ್ರೀ ವೀರಣ್ಣ ಚರಂತಿಮಠ, ಮಾಜಿ ಶಾಸಕರು
ಬಾಗಲಕೋಟೆ, ಮೊ-98452-25757

ಶ್ರೀ ಎ.ಸಿ. ಜಯಣ್ಣ
ದಾವಣಗೆರೆ, ಮೊ-98444-97399

ಶ್ರೀ ಎ.ಎಸ್. ವೀರಣ್ಣ
ದಾವಣಗೆರೆ, ಮೊ-98457-41670

ಶ್ರೀ ಎಸ್.ಎಸ್. ಗಣೇಶ್
ದಾವಣಗೆರೆ, ಮೊ-98450-53538

ಶ್ರೀ ಎಂ.ಎನ್. ರಾಜಶೇಖರಪ್ಪ
ದಾವಣಗೆರೆ, ಮೊ. 94481-14684

ಶ್ರೀ ಲಿಂಗನಗೌಡ ಮಲಹಾರ್ ಕಾರಡ್ಡಿ
ರಾಯಚೂರು, ಮೊ-94481-20620

ಶ್ರೀ ದೇವರಾಯ ನಾಡೇಪಲ್ಲಿ
ಗುಲ್ಬರ್ಗಾ, ಮೊ-94481-24503

ಶ್ರೀಮತಿ ವಿಲಾಸವತಿ ಎಸ್. ಖೂಬಾ
ಗುಲ್ಬರ್ಗಾ, ಮೊ-98866-49017

ಶ್ರೀಮತಿ ಗುರಮ್ಮಾ ಸಿದ್ದಾರೆಡ್ಡಿ
ಬೀದರ್, ಮೊ. 98866-59849

ಶ್ರೀಮತಿ ಮಧುರಾ ಅಶೋಕಕುಮಾರ
ಬೆಂಗಳೂರು, ಮೊ-98452-73085

ಶ್ರೀ ಗುರುರಾಜ ಇ. ಹುಣಸಿಮರದ
ಧಾರವಾಡ, ಮೊ-94480-66863

ಶ್ರೀ ಬಿ.ಎಸ್. ಸಚ್ಚಿದಾನಂದ ಮೂರ್ತಿ
ಬೆಂಗಳೂರು, ಮೊ-94487-68576

ಶ್ರೀ ವೆಂಕಟರಡ್ಡಿ ಮುದ್ನಾಳ್
ಯಾದಗಿರಿ, ಮೊ-98807-17666

**ಮಹಾಪ್ರಧಾನ ಕಾರ್ಯದರ್ಶಿ :**
ಶ್ರೀ ಈಶ್ವರ ಖಂಡ್ರೆ, ಸಚಿವರು
ಭಾಲ್ಕಿ, ಮೊ-94481-18458

**ಕಾರ್ಯದರ್ಶಿಗಳು :**
ಶ್ರೀಮತಿ ಸುವರ್ಣ ಚೆನ್ನಣ್ಣ
ಬೆಂಗಳೂರು, ಮೊ-98452-15830

ಶ್ರೀ ಕೆ.ಎನ್. ಜಯಲಿಂಗಪ್ಪ
ಬೆಂಗಳೂರು, ಮೊ-98454-31535

ಶ್ರೀ ಎನ್.ಎಸ್. ಬಸವರಾಜು, S.P. (Retd.)
ಮೈಸೂರು, ಮೊ-94498-57330

ಶ್ರೀ ಜಿ. ಗುರುಬಸಪ್ಪ
ಬೆಂಗಳೂರು, ಮೊ-98457-37662

ಶ್ರೀ ಕಲ್ಯಾಣರಾವ್ ಜಿ. ಮುಚಲಾಂಬೆ
ಬೆಳಗಾವಿ, ಮೊ-94481-40533

ಶ್ರೀ ಹೆಚ್.ಎಂ. ರೇಣುಕ ಪ್ರಸನ್ನ
ಬೆಂಗಳೂರು, ಮೊ-98440-43791

**ಕೋಶಾಧ್ಯಕ್ಷರು :**
ಶ್ರೀಮತಿ ಸುನಂದ ಗಿರೀಶ್
ಬೆಂಗಳೂರು, ಮೊ-94481-35589

### ಕರ್ನಾಟಕ ರಾಜ್ಯ ಘಟಕದ ಪದಾಧಿಕಾರಿಗಳು

**ಅಧ್ಯಕ್ಷರು :**
ಶ್ರೀ ಎನ್. ತಿಪ್ಪಣ್ಣ, ಮಾಜಿ ಸಭಾಪತಿಗಳು
ಬಳ್ಳಾರಿ, ಮೊ-98452-21373

**ಉಪಾಧ್ಯಕ್ಷರುಗಳು :**
ಶ್ರೀ ಕೆ. ಮಹದೇವಪ್ಪ, ವಕೀಲರು
ರಾಯಚೂರು, ಮೊ-98455-46640

ಶ್ರೀ ಕೆ.ಎಸ್. ನಾಗರಾಜಪ್ಪ
ಚಾಮರಾಜನಗರ,ಮೊ-94480-79894

ಶ್ರೀ ವೈ.ಎಸ್. ಪಾಟೀಲ್, ಕೆ.ಎ.ಎಸ್.(ನಿ.)
ಬೆಳಗಾವಿ, ಮೊ-94483-83818

ಡಾ. ಗಂಗಾಂಬಿಕಾ ಪಾಟೀಲ್
ಬೀದರ್, ಮೊ-94484-10770

**ಪ್ರಧಾನ ಕಾರ್ಯದರ್ಶಿ :**
ಶ್ರೀ ಬಿ.ಎಸ್. ವಾಗೀಶ್ ಪ್ರಸಾದ್
ಬೆಂಗಳೂರು, ಮೊ-98450-50021

**ಕಾರ್ಯದರ್ಶಿಗಳು :**
ಶ್ರೀ ಗಂಗಾಧರ ಎಸ್. ನರೇಗಲ್, ವಕೀಲರು
ಗುಳೇದಗುಡ್ಡ, ಜಿಲ್ಲಾ ಬಾಗಲಕೋಟೆ
ಮೊ-94805-01562

ಶ್ರೀ ನಟರಾಜ್ ಸಾಗರನಹಳ್ಳಿ
ಸಾಗರನಹಳ್ಳಿ, ಜಿಲ್ಲಾ ತುಮಕೂರು
ಮೊ-98454-63631

**ಕೋಶಾಧ್ಯಕ್ಷರು**
ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ, ಮಾಜಿ ಶಾಸಕರು
ಶಿವಮೊಗ್ಗ, ಮೊ-99807-40937



Printed at : Sneha Printers, # 16, 1st 'B' Cross, Sri Raghavendra Mutt Road, Papareddypalya, 11th Block, Nagarbhavi II Stage, Bengaluru-560 072. Mob : 99860 50012
Published by : All India Veerashaiva Mahasabha, Bengaluru. Editor : Padma Bhushan Dr. M. Mahadeveppa

# ಕೃಷಿ ಕಾಯಕ

Volume - 6 Issue - 4 October to December 2016 Quarterly ₹ 20/-



## ಬರದಲ್ಲೂ ದಾಖಲೆ ನಿರ್ಮಿಸಿದ ಕೃಷಿ ಮೇಳ ೨೦೧೬



**ಸಂಪಾದಕ ಮಂಡಳಿ**

**ಸಂಪಾದಕರು :**
ಎಂ. ಮಹದೇವಪ್ಪ

**ಸಹ ಸಂಪಾದಕರು :**
ಎಂ. ರುದ್ರಾರಾಧ್ಯ

**ಸದಸ್ಯರು :**
ಮಲೆಯೂರು ಗುರುಸ್ವಾಮಿ
ಚಿದಾನಂದ ಪಿ. ಮನ್ಸೂರ್
ಟಿ.ಎಂ. ಮಂಜುನಾಥ್
ಶೋಭಾ. ಹಾ.ಗ.
ಅರುಣ್ ಬಳಮಟ್ಟಿ
ಚಿದಾನಂದ, ಎಸ್. ಮಠದ
ಎಸ್.ಬಿ. ದಂಡಿನ್
ಎ.ಎಸ್. ಸದಾಶಿವಯ್ಯ
ಎನ್. ಕೃಷ್ಣಮೂರ್ತಿ
ಎನ್.ಜಿ. ಮಲ್ಲೇಶಿ
ವಸಂತಕುಮಾರ್ ತಿಮಕಾಪುರ
ಬಿ.ಎಸ್. ಹುಂಬರವಾಡಿ
ಎಂ.ಬಿ. ರಾಜೇಗೌಡ
ನಿರ್ಮಲ ಎಲಿಗಾರ್
ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ
ಕೆ.ಎನ್. ಪುಟ್ಟಬುದ್ಧಿ
ಸಿದ್ದಲಿಂಗಯ್ಯ ಬನ್ನಂಗಾಡಿ
ನಿರಂಜನಮೂರ್ತಿ

**ಕಲೆ :**
ಮೋಹನ್ ಕುಮಾರ ಎನ್.ಜಿ. ಮತ್ತು
ಇ.ಎಂ. ಕೃಷ್ಣಮೂರ್ತಿ

**ಚಂದಾ ದರ**

| | | |
|---|---|---|
| ಒಂದು ವರ್ಷಕ್ಕೆ | ರೂ. | 100.00 |
| ಐದು ವರ್ಷಕ್ಕೆ | ರೂ. | 500.00 |
| ಆಜೀವ ಸದಸ್ಯತ್ವ | ರೂ. | 2,000.00 |
| ಪೋಷಕರು | ರೂ. | 5,000.00 |
| ಬಿಡಿ ಸಂಚಿಕೆ | ರೂ. | 25.00 |

**ಜಾಹೀರಾತು ದರ**

| | | |
|---|---|---|
| ಮುಖಪುಟ 4 | ರೂ. | 10,000.00 |
| ಮುಖಪುಟ 2 & 3 | ರೂ. | 5,000.00 |
| ಒಳಪುಟ | ರೂ. | 3,000.00 |
| ಒಳ ಅರ್ಧಪುಟ | ರೂ. | 2,000.00 |

(ಕೃಷಿ ಕಾಯಕದಲ್ಲಿ ಲೇಖನ, ವಿಚಾರ, ವಿಶ್ಲೇಷಣೆಗಳಿಗೆ ಲೇಖಕರೇ ಜವಾಬ್ದಾರರು – ಸಂ.)

# ಈ ಸಂಚಿಕೆಯ ಅಂತರ್ಯದಲ್ಲಿ.....

1 ಸಂಪಾದಕೀಯ — **ಡಾ॥ ಎಂ. ಮಹದೇವಪ್ಪ** 2–3

2 ವಚನ ಸಾಹಿತ್ಯದಲ್ಲಿ ಕೃಷಿ ವಿಜ್ಞಾನ –ಒಂದು ಅಪೂರ್ವ ಪ್ರಯೋಗ — **ಶ್ರೀ ಗೊ.ರು. ಚನ್ನಬಸಪ್ಪ** 4–5

3. ಬರದಲ್ಲೂ ದಾಖಲೆ ನಿರ್ಮಿಸಿದ ಕೃಷಿ ಮೇಳ–2016 — ಬಿ.ಎಸ್.ಜನಗೌಡ, ಅನಿಲ್‌ಕುಮಾರ್ ಮುಗಳ್ ಮತ್ತು ಶ್ಯಾಮರಾವ್ ಜಾಗಿರ್‌ದಾರ್ 6–7

4. ಐ.ಸಿ.ಎ.ಆರ್. – ಕೇಂದ್ರೀಯ ಕರಾವಳಿ ಕೃಷಿ ಸಂಶೋಧನಾ ಸಂಸ್ಥೆ, ಗೋವಾ — **ಸಂಗ್ರಹ: ಡಾ॥ ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ** 8

5. ನಿವೃತ್ತಿಯಾಯಿತು, ಆದರೆ ಆಯಾಸವಾಗಿರುವುದಿಲ್ಲ — **ಸಂಗ್ರಹ: ಡಾ॥ ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ** 9

6. ಶೂರ ಸಂಗೊಳ್ಳಿ ರಾಯಣ್ಣ — **ಮಹಾದೇವ ಬಿರಾದಾರ, ಅಥಣಿ** 10

7. ಹವಾಮಾನದ ಬದಲಾವಣೆಯ ಸವಾಲನ್ನು ಎದುರಿಸಲು ಕೃಷಿ ಸಂಶೋಧನೆಯಲ್ಲಿ ಜಿ ಎಂ ಟೆಕ್ನಾಲಜಿ ನೆರವು ಅತ್ಯಗತ್ಯ — **ಡಾ॥ ಎಂ. ಮಹದೇವಪ್ಪ** 11–13

8. ಮೈಸೂರಿನ ಭತ್ತದ ತಳಿ ಸಂರಕ್ಷಕ ರೈತರಿಗೆ ರಾಷ್ಟ್ರ ಪ್ರಶಸ್ತಿ — **ಡಾ॥ ಅರುಣ್ ಬಳಮಟ್ಟಿ ಮತ್ತು ಶ್ರೀಮತಿ ಹೆಚ್.ವಿ. ದಿವ್ಯ** 14

9. ಕೃಷಿ ಜೀವವೈವಿಧ್ಯತೆ ನಿರ್ವಹಣೆ ಮೇಲಿನ ದೆಹಲಿ ಘೋಷಣೆ — **ಡಾ॥ ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ** 15–16

10 ತರಕಾರಿಗಳ ಮೌಲ್ಯವರ್ಧನೆ — **ನೇತ್ರಾವತಿ ಎಮ್. ಎತ್ತಿನಮನಿ ಮತ್ತು ದಿವ್ಯಾ ಹೆಚ್. ವಿ.,** 18–21

11. ರೈತರ ಆದಾಯ ದ್ವಿಗುಣ ಹಾಗೂ ನಗದುರಹಿತ ಬ್ಯಾಂಕಿಂಗ್ — **ಎನ್ ಕುಮಾರಸ್ವಾಮಿ, ಶ್ರೀಮತಿ ಹೆಚ್.ವಿ. ದಿವ್ಯಾ, ಅರುಣ್ ಬಳಮಟ್ಟಿ** 22–23

12. ಒಂದು ಯಶೋಗಾಥೆ: ಗುಜರಾತ್ ರಾಜ್ಯವು ಕೃಷಿಯ ನಂದನವನ ಹೇಗಾಯಿತು? — **ಡಾ॥ ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ.** 24–25

13. ವಚನ ವಾಙ್ಮಯದಲ್ಲಿ ವೈಜ್ಞಾನಿಕ ಕೃಷಿಯ ಪ್ರತಿಪಾದನೆ — **ಪ್ರೊ॥ ಎಂ. ರುದ್ರಾರಾಧ್ಯ** 26–28


14. ನಿಮ್ಮ ಕೃಷಿ ಜ್ಞಾನಕ್ಕಿಷ್ಟು ಕಸರತ್ತು — **ಪ್ರೊ॥ ಎಂ. ರುದ್ರಾರಾಧ್ಯ ಮತ್ತು ಮೋಹನ್ ಕುಮಾರ ಎನ್.ಜಿ.** 29–31

**Printed and Published by :**
**All India Veerashaiva Mahasabha (R.)**
No.17/4, "Veerashaiva-Lingayath Bhavan", Ramanamaharshi Road,
Sadashivanagar, Bengaluru-560 080

**Printed at :**
**Sneha Printers**
No. 114, 4th Cross, B.C.C. Layout,
Vijayanagar 2nd Stage,
Bengaluru-560 040

**Editor :**
**Dr. M. Mahadevappa**
"Samarasa", No.1576, 1st Cross
Chandra Layout,
Bengaluru-560 040

"KRISHI KAYAKA" Kannada Quarterly, Oct, Nov & Dec 2016. Reg.MAG(3)NPP/397/2010-2011



## ಸಂಪಾದಕೀಯ.....

### ಉದ್ದಿಮೆಗಳ ಸ್ಥಾಪನೆಗಾಗಿ ಕೃಷಿ ಭೂಮಿಯ ಪರಿವರ್ತನೆ ಅವೈಜ್ಞಾನಿಕ

ಭಾರತೀಯ ಅರ್ಥವ್ಯವಸ್ಥೆಯು ಕೃಷಿ ಆಧಾರಿತವಾದದ್ದು, ಸದ್ಯಕ್ಕಂತೂ ಇದನ್ನು ಬದಲಾಯಿಸುವ ಯಾವುದೇ ಸಂಭವನೀಯತೆ ಕಾಣುತ್ತಿಲ್ಲ. ವಾಸ್ತವವಾಗಿ, ಹಾಗೇನಾದರೂ ಬದಲಾವಣೆ ಮಾಡುವ ಪ್ರಯತ್ನ ಮಾಡಿದಲ್ಲಿಅದೊಂದು ಉತ್ಪಾದಕತೆಯ ವಿರುದ್ಧದ ಪ್ರಯೋಗವಾಗುತ್ತದೆ. ಹಾಗೆಂದು ಔದ್ಯಮಿಕ ಪ್ರಯೋಜನಗಳನ್ನು ಕೈ ಬಿಡಬೇಕೆಂದಿಲ್ಲ. ಫಲವತ್ತಾದ ಪ್ರದೇಶಗಳನ್ನು ಕಾಯ್ದಿಡಬೇಕಾದದ್ದು ಭವಿಷ್ಯತ್ತಿನ ಆರ್ಥಿಕ ಸುಭದ್ರತೆಗೆ ಅನಿವಾರ್ಯಆದ್ದರಿಂದ ವಿಶೇಷ ಕೃಷಿ ವಲಯ (ಎಸ್‌ಎಜೆಡ್) ಮತ್ತು ವಿಶೇಷ ಆರ್ಥಿಕ ವಲಯ (ಎಸ್‌ಇಜೆಡ್) ಇವೆರಡನ್ನೂ ಸಮತೋಲನವಾಗಿ ಯೋಜಿಸಿ ಮುಂದುವರಿಯುವುದು ವೈಜ್ಞಾನಿಕ ಹಾಗೂ ಎಲ್ಲಾ ದೃಷ್ಟಿಯಿಂದಲೂ ಒಳಿತು. ಇಂತಹ ವಲಯಗಳನ್ನು ನಿರ್ಮಿಸುವಾಗ ಮುಖ್ಯವಾಗಿ ಗಮನಿಸಬೇಕಾದ ಒಂದು ಅಂಶವೆಂದರೆ, ವಿಶೇಷ ಆರ್ಥಿಕ ವಲಯ ನಿರ್ಮಾಣ ಮಾಡುವ ಮೊದಲು, ವಿಶೇಷ ಕೃಷಿ ವಲಯಗಳನ್ನು ಗುರುತಿಸಿ ಅವುಗಳನ್ನು ಸಂರಕ್ಷಿಸಿ ಕೃಷಿ ಉತ್ಪಾದನೆಗಷ್ಟೇ ಉಪಯೋಗಿಸಬೇಕೆಂಬುದು ಸರ್ವರಿಗೂ ಮನದಟ್ಟಾಗಬೇಕು.

ಪ್ರಸ್ತುತ, ದೇಶದ ಹಲವು ರಾಜ್ಯಗಳಲ್ಲಿ ಬೃಹತ್ ಪ್ರಮಾಣದಕೃಷಿ ಭೂಮಿಗಳನ್ನು ಔದ್ಯಮಿಕ ಬಳಕೆಗೆ ಪರಿವರ್ತಿಸಿ ಬೃಹತ್ ಉದ್ಯಮಗಳನ್ನು ಸ್ಥಾಪಿಸಲಾಗುತ್ತಿದೆ. ಇದರಿಂದ ಔದ್ಯಮಿಕ ಬೆಳವಣಿಗೆಯ ಸಾಧನೆ ಸಾಧ್ಯವೆಂಬುದು ಸತ್ಯ. ಔದ್ಯಮಿಕ ಬೆಳವಣಿಗೆ ಅನಿವಾರ್ಯ ಮತ್ತು ಸ್ವಾಗತಾರ್ಹ. ಆದರೆ ಜೈವಿಕ ವೈವಿಧ್ಯತೆ ಮತ್ತು ವೈಶಿಷ್ಟ್ಯಪೂರ್ಣ ಪ್ರಾಚೀನ ಕೃಷಿ ವೈವಿಧ್ಯತೆ ಇವುಗಳನ್ನು ಸಂರಕ್ಷಿಸದೆ ಹೀಗೆಯೇ ಮುಂದುವರಿದಲ್ಲಿ ಭಾರತದಲ್ಲಿನ ಕೃಷಿ ಸಾಮರ್ಥ್ಯ ಕುಂಠಿತಗೊಳ್ಳುವ ಸಂಭವವಿದೆ. ತಿಳಿದೋ ತಿಳಿಯದೆಯೋ ಹೀಗೆ ಮಾಡುವುದರಿಂದ ಇದು ಭವಿಷ್ಯದಲ್ಲಿ ಭಾರತದ ಅರ್ಥ ವ್ಯವಸ್ಥೆ ಸಾಮಾಜಿಕ ಸ್ಥಿತಿಗತಿಗಳ ಅಸಮತೋಲನೆಗೆ ಕಾರಣವಾಗುವುದಲ್ಲದೆ ವೈವಿಧ್ಯಮಯ ಪರಿಣಾಮಗಳನ್ನು ಮುಂದಿಡುತ್ತದೆ.ಆದ್ದರಿಂದ ಈ ದಿಕ್ಕಿನಲ್ಲಿ ವೈಜ್ಞಾನಿಕ ವಿಶ್ಲೇಷಣೆ ಅತ್ಯವಶ್ಯಕ. ಇಲ್ಲದಿದ್ದರೆ ಹೆಚ್ಚಿನ ಜನಸಂಖ್ಯೆ ಇರುವ ನಮ್ಮದೇಶದಲ್ಲಿ ಶೇ. 70ಕ್ಕಿಂತ ಹೆಚ್ಚು ಜನ ಪ್ರತ್ಯಕ್ಷ/ ಪರೋಕ್ಷವಾಗಿ ಕೃಷಿ ಕಾರ್ಯಾಚರಣೆಗಳಲ್ಲಿ ಭಾಗಿಯಾಗಿದ್ದು, ಇದರಲ್ಲಿ ಬಹುಸಂಖ್ಯಾತ ಗ್ರಾಮೀಣ ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತದೆ. ಜನರಲ್ಲಿತೀವ್ರ ಹತಾಶೆಯನ್ನುಂಟು ಮಾಡುವ ಮೂಲಕ ಸಾಮಾಜಿಕಅಶಾಂತಿಯನ್ನು ಹುಟ್ಟಿಹಾಕುತ್ತದೆ. ಜತೆಗೆಗ್ರಾಮೀಣ–ನಗರ ಪ್ರದೇಶಗಳ ನಡುವೆ ದೊಡ್ಡಕಂದರವನ್ನು ಉಂಟುಮಾಡುತ್ತದೆ.

**ಕುಗ್ಗುತ್ತಿರುವ ಭೂಮಿ**:–ದೇಶದಲ್ಲಿ ಉದ್ಯಮಗಳಿಗಾಗಿ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುತ್ತಿರುವ ರೀತಿ ನೋಡಿದರೆ ಕೃಷಿಕರನ್ನು ಬೇರೆಡೆಗೆ ವರ್ಗಾಯಿಸಿ ಅವರಿಗೆ ಪರಿಹಾರ ನೀಡುವುದಷ್ಟೇ ಅವರ ಉದ್ದೇಶವಾದಂತಿದೆ. ಆದರೆಜನರ ವಸತಿಯನ್ನು ವರ್ಗಾಯಿಸುವುದು ತೀವ್ರತರ ಪರಿಣಾಮ ಬೀರುವ ಸಾಮಾಜಿಕ ಸಂಗತಿಯಾಗಿದೆ. ಇದರಿಂದಾಗಿ ಕೃಷಿ ಉತ್ಪಾದನೆಯ ಕುಸಿತ, ಪ್ರಚಲಿತವಿರುವ ಪರಂಪರಾಗತ ಪದ್ಧತಿಗಳು ಮತ್ತು ತಿಳಿವಳಿಕೆಗಳೊಂದಿಗೆ ಬಲವಾದ ಕೃಷಿ ಆಧಾರಿತಅರ್ಥ ವ್ಯವಸ್ಥೆಯನ್ನು ಸೃಜಿಸುವ ಒಂದು ಅವಕಾಶವನ್ನೇ ಕಳೆದುಕೊಳ್ಳುತ್ತಿದ್ದೇವೆ ಎಂಬುದನ್ನು ಮನಗಂಡಂತಿಲ್ಲ !

ದೇಶದಲ್ಲಿ ಲಭ್ಯವಿರುವ ಒಟ್ಟು ಭೂ ಪ್ರದೇಶವೆಂದರೆ ಸುಮಾರು 73.5 ಕೋಟಿ ಎಕರೆ. ಇತ್ತೀಚಿನ ದಿನಗಳಲ್ಲಿ ಆಂಧ್ರಪ್ರದೇಶ, ಛತ್ತೀಸ್‌ಗಢ, ಜಾರ್ಖಂಡ್ ಮತ್ತುಒರಿಸ್ಸಾ ರಾಜ್ಯಗಳಲ್ಲಿಯೇ 1.97 ಕೋಟಿಎಕರೆ ಪ್ರದೇಶವನ್ನು ಔದ್ಯಮಿಕ ಪ್ರಾಯೋಜನೆಗಳಿಗಾಗಿ ವಶಪಡಿಸಿಕೊಂಡು



ಸುಮಾರು ಒಂದು ಕೋಟಿ ಜನವಸತಿಯನ್ನು ಸ್ಥಳಾಂತರಿಸಲಾಗಿದೆ. ಇದರಲ್ಲಿ ಆಂಧ್ರ ಪ್ರದೇಶದ 51.45 ಲಕ್ಷ, ಛತ್ತೀಸ್‌ಗಡ್‌ನ 15.18 ಲಕ್ಷ, ಜಾರ್ಖಂಡ್‌ನ 1.1 ಕೋಟಿ ಹಾಗೂ ಒರಿಸ್ಸಾದ 16.44 ಲಕ್ಷ ಎಕರೆ ಪ್ರದೇಶಗಳು ಸೇರಿವೆ. ತಮಿಳುನಾಡಿನ ರಾಜ್ಯ ಔದ್ಯಮಿಕ ಪ್ರವರ್ತನ ನಿಗಮ ಭೂಬ್ಯಾಂಕ್ ಸ್ಥಾಪಿಸುವುದಕ್ಕಾಗಿ ಗುರುತಿಸಿರುವ ಭೂಪ್ರದೇಶವು ಹತ್ತು ಸಾವಿರ ಎಕರೆಗಳಿಗಿಂತ ಹೆಚ್ಚು. ತಮಿಳುನಾಡಿನ ಟುಟಿಕೋರಿನ್ ಪ್ರದೇಶದಲ್ಲಿ ಟೈಟಾನಿಯಂ ಡೈಯಾಕ್ಸೈಡ್ ಪ್ರಾಯೋಜನೆಗಾಗಿ ವಶಪಡಿಸಿ ಕೊಳ್ಳಲು ಉದ್ದೇಶಿಸಿರುವ ಭೂಪ್ರದೇಶ ಸುಮಾರು 10 ಸಾವಿರಎಕರೆ.

ಇಂತಹ ಕ್ರಮಗಳು ಸ್ಥಳಾಂತರಗೊಳ್ಳುವ ಹಾಗೂ ನೆಲೆ ಕಳೆದುಕೊಳ್ಳುವ ಬಡ ನಾಗರಿಕರಲ್ಲಿತೀವ್ರ ಹಾಹಾಕಾರವನ್ನುಂಟು ಮಾಡಿವೆ. ಇದರಿಂದಾಗುವ ಕೃಷಿ ಉತ್ಪಾದನೆಯ ಹಾನಿಯನ್ನು ರಾಜ್ಯ ಸರಕಾರಗಳು ಮತ್ತು ಯೋಜನಾ ಆಯೋಗಗಳು ಅಂದಾಜು ಮಾಡಬೇಕಾಗಿದೆ. ಪ್ರಸ್ತುತ ಈ ಅಂಶವನ್ನು ಸಂಪೂರ್ಣವಾಗಿ ಉಪೇಕ್ಷಿಸಲಾಗಿದೆ. ಗೋವಾ ರಾಜ್ಯದಲ್ಲಿ ಈ ಬಗ್ಗೆ ಮರುಚಿಂತನೆ ನಡೆಸಿರುವುದು ಅನುಕರಣೀಯ ಸಂಗತಿ.

ಭೂಮಿಯನ್ನು 'ಒಣ' ಅಥವಾ 'ಬಂಜರು' ಎಂದು ಹೇಳಿ ಅದರ ಸ್ವಾಧೀನವನ್ನು ಸರಕಾರಿ ಏಜೆನ್ಸಿಗಳು ಸಮರ್ಥಿಸಿಕೊಂಡಿರುವುದೂ ಉಂಟು. ಇದುಯಾವಾಗಲೂ ನಿಜವಾಗಿರುವುದಿಲ್ಲ. ಅಲ್ಲದೆ, ಇಂದಿನ ತಂತ್ರಜ್ಞಾನದಲ್ಲಿ 'ಒಣ ಭೂಮಿ' ಎಂಬುದು ಇಲ್ಲವೇ ಇಲ್ಲ ಎಂಬುದು ನುರಿತ ರೈತರು ಮತ್ತು ಕೃಷಿ ವಿಜ್ಞಾನಿಗಳಿಗೆ ಮಾತ್ರ ತಿಳಿದಿರುವ ಸತ್ಯ. ಸೂಕ್ತ ಬೆಳೆಗಳಿಗೆ ಅದನ್ನು ಕೃಷಿಯೋಗ್ಯ ಭೂಮಿಯನ್ನಾಗಿ ಪರಿವರ್ತಿಸ


ಬಹುದು. ರಾಜಸ್ಥಾನ್ ಮತ್ತು ಗುಜರಾತ್ ರಾಜ್ಯಗಳಲ್ಲಿ ಕೆಲವು ಪ್ರಯೋಗಗಳು ನಡೆದಿವೆ. ಇಸ್ರೇಲ್ ನಂತಹ ದೇಶಗಳು ರುಜುವಾತುಪಡಿಸಿವೆ.

ಹೆಚ್ಚುತ್ತಿರುವ ಜನಸಂಖ್ಯೆಗೆ ಮುಂಬರುವ ವರ್ಷಗಳಲ್ಲಿ ಬಹುಪಾಲು ಸ್ಥಿರಗೊಂಡ ಆಹಾರ ಉತ್ಪಾದನೆಯಿಂದಾಗಿ ಆಹಾರ ಒದಗಿಸುವುದೇ ಸಮಸ್ಯೆಯಾಗುತ್ತದೆ. ಇಂದಿಗೂ 300 ದಶಲಕ್ಷಕೋಟಿ ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟು ಜನಸಂಖ್ಯೆಯು ಬಡತನರೇಖೆಗಿಂತ ಕೆಳಗಿದೆ. ಅಂದರೆ ಅವರಿಗೆ ಸಾಕಷ್ಟು ಸಸಾರಜನಕ ಹಾಗೂ ಪೋಷಕಾಂಶಗಳಿರುವ ಒಪ್ಪೊತ್ತಿನ ಊಟ ಸಿಗುವುದೂ ಕಷ್ಟ. ಆರೋಗ್ಯಕರ ಜೀವನ ನಡೆಸಲು ಬೇಕಾಗುವಷ್ಟು ಆಹಾರ ಸೇವನೆ ಈ ಮೂರನೇಒಂದು ಭಾಗದಷ್ಟು ಜನರಿಂದ ಸಾಧ್ಯವಾದರೂ ಈ ದೇಶ ಈಗಲೇ ಆಹಾರದ ಕೊರತೆಯನ್ನು ಎದುರಿಸಬೇಕಾಗುತ್ತದೆ. ಅಂತಹ ಆತಂಕಕಾರಿ ಪರಿಸ್ಥಿತಿ ಇರುವಾಗ, ಕೃಷಿ ಭೂಮಿಯ ಅಥವಾ ಕೃಷಿಯೋಗ್ಯ ಭೂಮಿಯ ಬಹಳಷ್ಟು ಭಾಗವನ್ನು ಕೈಗಾರಿಕಾ ಪ್ರಾಯೋಜನೆಗಳಿಗೆ ಬಳಸಿದರೆ ಎದುರಿಸಬೇಕಾಗುವ ತೀವ್ರ ಪರಿಸ್ಥಿತಿಗಳನ್ನು ಊಹಿಸಿ?! ಭಾರತದ ಸಮಸ್ಯೆಗಳನ್ನು ಕೈಗಾರಿಕೆಗಳ ಸ್ಥಾಪನೆ ಏಕೈಕವಾಗಿ ನೀಗಿಸಲಾರದು. ಕೃಷಿ ವಿರುದ್ಧ ಕೈಗಾರಿಕೆಯಾಗಿರಬಾರದು; ಕೃಷಿ ಜತೆ ಕೈಗಾರಿಕೆ ಕೈಜೋಡಿಸಬೇಕು. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಕೈಗಾರಿಕೆಗಳಲ್ಲಿ ಆದ್ಯತೆ. ರಫ್ತಿನ ವಿಚಾರದಲ್ಲಿ ಸಣ್ಣ ಪ್ರಮಾಣದ ಗ್ರಾಮೀಣ ಗೃಹ ಕೈಗಾರಿಕೆಗಳಿಗೆ ಆದ್ಯತೆ ಇರಬೇಕು. ಇದರಿಂದ ಗ್ರಾಮೀಣ ಜನರು ಪಟ್ಟಣಕ್ಕೆ ವಲಸೆ ಹೋಗುವುದನ್ನು ಗಣನೀಯವಾಗಿ ಇಳಿಸಬಹುದು.

**ಸ್ಥಳಾಂತರ ಪರಿಹಾರವಲ್ಲ** : ದೇಶದ ಬಹುಪಾಲು ಜನ ಕೃಷಿಕರಾಗಿದ್ದು, ಅವರಿಗೆ ಸೂಕ್ತ ಪರಿಹಾರಧನ ನೀಡಿ ಅವರನ್ನು ಸ್ಥಳಾಂತರ ಮಾಡಿಸಿದರೂ ಅವರು ನಿರುದ್ಯೋಗಿಗಳಾಗಿರಬೇಕಾಗುತ್ತದೆ. ಇದರಿಂದ ದೇಶದ ಸಾಮಾಜಿಕ ಆತಂಕಗಳು ಮತ್ತಷ್ಟು ಹೆಚ್ಚುವ ಸಾಧ್ಯತೆಇದೆ.


ಮುಂದಿನ ಕೆಲವು ದಶಕಗಳಲ್ಲಿ ಕೃಷಿ ಉತ್ಪಾದನೆ ಎಷ್ಟಿರಬೇಕು? ಹಾಗೂ ಅದಕ್ಕೆ ಅವಶ್ಯಕವಿರುವ ಕೃಷಿ ಭೂಮಿ, ತಂತ್ರಜ್ಞಾನ ಪರಿಕರಗಳ ಬಗೆಗೆ ಯಾವುದೇ ಎಚ್ಚರಿಕೆಯ ಮೌಲ್ಯಮಾಪನ ಮಾಡಿರುವ ಸೂಚನೆಗಳಿಲ್ಲ. ಆದ್ದರಿಂದ ತ್ವರಿತವಾಗಿ ವೈಜ್ಞಾನಿಕ ವಿಶ್ಲೇಷಣೆ ಕೈಗೊಂಡುತಡಮಾಡದೆ ವಿಶೇಷ ಕೃಷಿ ವಲಯಗಳನ್ನು ಗುರುತಿಸಿ, ಸಂರಕ್ಷಿಸಬೇಕು. ತದನಂತರ ವಿಶೇಷ ಆರ್ಥಿಕ ವಲಯಗಳ ನಿರ್ಮಾಣವನ್ನು ದೇಶದ ಭವಿಷ್ಯದ ದೃಷ್ಟಿಯಿಂದ ಗಂಭೀರವಾಗಿ ಪರಿಶೀಲಿಸಿ, ಯಾವುದೇ ದೇಶವು ವಾಹನಗಳ, ಉಕ್ಕಿನ ಅಥವಾ ಟೈಟಾನಿಯಂ ಡೈಆಕ್ಸೈಡ್ ಉತ್ಪಾದನೆ ಹೆಚ್ಚಿಸುವ ಮೊದಲು ಪ್ರಾಥಮಿಕವಾಗಿ ಆಹಾರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿದರೆ ಕ್ಷೇಮ. ಇಂತಹ ಕೈಗಾರಿಕೆಗಳ ನಿರ್ಮಾಣಕ್ಕಾಗಿ ವಿಶೇಷ ಸಾಮರ್ಥ್ಯ ಹೊಂದಿರುವ ಕೃಷಿ ಭೂಮಿಯನ್ನು ಬಲಿಕೊಡುವುದರಿಂದ ಭವಿಷ್ಯತ್ತಿನ ಯೋಜನೆಯ ಕೊರತೆಯಾಗುವುದಲ್ಲದೆ, ದೇಶದ ಬೆನ್ನೆಲುಬಾಗಿರುವ ಲಕ್ಷಾಂತರ ಕೃಷಿ ಕಾರ್ಮಿಕರನ್ನು ಅತಂತ್ರ ಸ್ಥಿತಿಗೆ ದೂಡಿದಂತಾಗುತ್ತದೆ.

ಡಾ॥ ಎಂ. ಮಹದೇವಪ್ಪ



ಅಪರೂಪಕ್ಕೆ ಅವಶ್ಯವಿರುವ ವೈದ್ಯರು, ಎಂಜಿನಿಯರುಗಳು, ವಕೀಲರುಗಳಿಗೆ, ಅಧಿಕಾರಿಗಳಿಗೆ, ಕೊಡುವಷ್ಟು ಗೌರವವನ್ನು ದಿನವೂ ಬೇಕಾಗಿರುವ ರೈತರಿಗೂ ಕೊಡೋಣ

# ವಚನ ಸಾಹಿತ್ಯದಲ್ಲಿ ಕೃಷಿ ವಿಜ್ಞಾನ –ಒಂದು ಅಪೂರ್ವ ಪ್ರಯೋಗ



ಶ್ರೀ ಗೊ. ರು. ಚನ್ನಬಸಪ್ಪ

ಈ ಸಲದ ಅಕ್ಟೋಬರ್ 2ರ ಗಾಂಧಿ ಜಯಂತಿಯಂದು ಶಿವಮೊಗ್ಗದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಶಿವಮೊಗ್ಗದ ಕೃಷಿ ಸಂಶೋಧನೆ ಶಿಕ್ಷಣ ವಿಸ್ತರಣೆ ಅಭಿವೃದ್ಧಿ ಸಂಸ್ಥೆ, ಶಿವಮೊಗ್ಗ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಮತ್ತು ಅಲ್ಲಿನ ಕೃಷಿ ತಂತ್ರಜ್ಞರ ಸಹಯೋಗದಲ್ಲಿ ಅಪೂರ್ವವಾದ ಒಂದು ಚಿಂತನ ಸಂಕಿರಣವನ್ನು ಏರ್ಪಡಿಸಿತ್ತು. ಚಿಂತನದ ಪ್ರಧಾನ ವಿಷಯ : "ವಚನ ಸಾಹಿತ್ಯದಲ್ಲಿ ಕೃಷಿ ವಿಜ್ಞಾನ".

ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಖ್ಯಾತಿ ಪಡೆದಿರುವ ಹಿರಿಯ ಕೃಷಿ ವಿಜ್ಞಾನಿ ಪದ್ಮಭೂಷಣ ಡಾ|| ಎಂ.ಮಹದೇವಪ್ಪ ಅವರ ಮಾರ್ಗದರ್ಶನದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ|| ಸಿ. ವಾಸುದೇವಪ್ಪನವರೂ ಸೇರಿದಂತೆ ನೂರಕ್ಕೂ ಹೆಚ್ಚು ಕೃಷಿ ಸಂಶೋಧಕರು, ಅಧ್ಯಯನಕಾರರು ಮತ್ತು ಕೃಷಿ ವಿಜ್ಞಾನಾಸಕ್ತರು ಪಾಲುಗೊಂಡಿದ್ದರು. ಡಾ|| ಮಹದೇವಪ್ಪನವರು "ಇಂತಹ ವಿಸ್ತೃತ ಪ್ರಮಾಣದ ವಿಚಾರ ಸಂಕಿರಣ ಇದೇ ಮೊದಲು" ಎಂದ ಕಾರಣದಿಂದ ನಾನು 'ಅಪೂರ್ವ ಪ್ರಯೋಗ' ಎಂದೇ ಕರೆದಿದ್ದೇನೆ.

ವಿಚಾರ ಸಂಕಿರಣದ ಉದ್ಘಾಟನೆಯಾದುದೇ ಓರ್ವ ಕೃಷಿಯೋಗಿಯಿಂದ. ಆ ಕೃಷಿಯೋಗಿ ಮತ್ತಾರೂ ಅಲ್ಲ, ಅಕ್ಷರ ವಿದ್ಯೆಯ ಜ್ಞಾನಕ್ಕೆ ಹೊರತಾದ, ಅನಿಭವ ವಿದ್ಯೆಯ ಜ್ಞಾನದಿಂದ ನಾಡಿನ ಪ್ರಗತಿಪರ ಕೃಷಿಕರಾಗಿ, ಧಾರವಾಡದ ಕೃಷಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದಿರುವ ಹುನಗುಂದದ ಶ್ರೀ ಮಲ್ಲಣ್ಣ ಶಂಕರಪ್ಪ ನಾಗವಾಳ ಅವರು "ಹೊಲವೇ ನನ್ನ ಬ್ಯಾಂಕು, ಹೊಲದ ಮಣ್ಣೇ ನನ್ನ ಡಿಪಾಸಿಟ್, ಹೊಲಕ್ಕೆ ಹಾಕಿರುವ ಒಡ್ಡುಗಳೇ ನನ್ನ ಲಾಕರುಗಳು" ಎನ್ನುವ ಡಾ|| ಮಲ್ಲಣ್ಣ ಶಂಕರಪ್ಪ ನಾಗವಾಳ ಅವರು ಪ್ರಗತಿಪರ ಕೃಷಿಕರಾಗಿರುವಂತೆ ಪ್ರಭಾವಪೂರ್ಣ ವಚನಕಾರರೂ ಆಗಿದ್ದಾರೆ. ಅವರ ಒಂದು ಕೃಷಿ ವಚನ : "ಒಂದು ಎಕರೆ ಕ್ಷೇತ್ರದ ಮಣ್ಣು ಕಣ್ಣಿಗೆ ಸಣ್ಣದಾದರೂ ಲೆಕ್ಕಕ್ಕೆ ಸಣ್ಣದಲ್ಲವಯ್ಯಾ; ಒಂದು ವರ್ಷದ ಮಳೆಗೆ ನೂರು ಚಕ್ಕಡಿ ಮಣ್ಣು ಸೋರಿ ಹೋಗುವುದಯ್ಯಾ; ಮಣ್ಣು ಹೋದರೆ ಕಣ್ಣು ಹೋದಂತಲ್ಲವೇನಯ್ಯಾ? ಮಣ್ಣಿನ ಮಹತ್ವ ವನರಿತು ಚೆನ್ನಾಗಿ ಒಡ್ಡುಕಟ್ಟಿ ಮಣ್ಣ ಕಾಪಾಡೆಂದ ಚಿತ್ತರಗಿ ಮಹಾಂತೇಶ".

ಸಂಕಿಣದ ದಿಕ್ಸೂಚಿ ನುಡಿಗಳನ್ನಾಡಿದ ನಾನು, ಡಾ|| ಮಲ್ಲಣ್ಣ ನಾಗರಾಳ ಅವರನ್ನು ಕೃಷಿ ಋಷಿ, ಹೊಲದ ಗಾಂಧಿ, ಕೃಷಿ ಶರಣ ಎಂದೆಲ್ಲ ಅಭಿಮಾನದಿಂದ ಕರೆದು, "ಅವರು ಉದ್ಘಾಟಿಸಿದ ಈ ವಿಚಾರ ಸಂಕಿರಣಕ್ಕೆ ಅರ್ಥಪೂರ್ಣತೆಯ ಜೊತೆಗೆ ಪಾವಿತ್ರತೆಯೂ ಉಂಟಾಗಿದೆ" ಎಂದು ಹೇಳಿದೆ.

ಶಿವಮೊಗ್ಗದ ರಾಷ್ಟ್ರೀಯ ಶಿಕ್ಷಣ ಸಮಿತಿಯ ಇಂಜಿನಿಯರಿಂಗ್ ಕಾಲೇಜಿನ ಪ್ರಶಾಂತ ವಾತಾವರಣದಲ್ಲಿ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಚ್.ಎಂ. ಮಲ್ಲಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಆ ಮಹತ್ವದ ಚಿಂತನ ಸಂಕಿರಣದ ಪ್ರಧಾನ ಸಂಚಾಲಕರಾಗಿದ್ದ ಡಾ|| ಸಿ.ಕೆ. ಶಶಿಧರ ಅವರ ಅಪೇಕ್ಷೆಯಂತೆ ನಾನು ಆಡಿದ ದಿಕ್ಸೂಚಿ ನುಡಿಗಳನ್ನು ಇಲ್ಲಿ ಸಂಗ್ರಹಿಸಿ ಹೇಳಬಹುದೆಂದು ಕಾಣುತ್ತದೆ.

ನಾನೇನೂ ವಿಷಯ ತಜ್ಞನಲ್ಲ. ಈ ಸಂಕಿರಣದ ಚಿಂತನೆಗೆ ದಿಕ್ಕು ಸೂಚಿಸುವ ಹಕ್ಕಾಗಲೀ, ಅರ್ಹತೆಯಾಗಲೀ ನನ್ನಲ್ಲಿಲ್ಲ. ವೃದ್ಧಾಪ್ಯದಿಂದಾಗಿ ನಾನೇ ದಿಕ್ಕು ತೋಚದ ಸ್ಥಿತಿಯಲ್ಲಿರುವಾಗ ಇಲ್ಲಿನ ಚಿಂತಕರಿಗೆ ಯಾವ ದಿಕ್ಕು ತೋರಿಸಲು ಸಾಧ್ಯವಾದೀತು? ಆದರೂ ಈ ಸಂಕಿರಣದ ಪರಿಷತ್ತಿಗೆ ಸಂಬಂಧಿಸಿರುವ ಕಾರಣ ನಾಲ್ಕು ಮಾತು. ಏನಿದ್ದರೂ ನಾನು 12ನೆಯ ಶತಮಾನದ ಶರಣರು ಬೆಳೆದು ಕೊಟ್ಟಿರುವ ವಚನ ಸಾಹಿತ್ಯದ ಬೆಳೆಯನ್ನು ಕಂಡು ಬೆರಗಾದವ ನೆಂಬುದಂತೂ ನಿಜ.



ಇಲ್ಲಿ ನಡೆಯುವ 'ವಚನ ಸಾಹಿತ್ಯದಲ್ಲಿ ಕೃಷಿ ವಿಜ್ಞಾನ' ಕುರಿತ ಚಿಂತನ ಸಂಕಿರಣವೂ ಕೆಲವರಿಗೆ ಬೆರಗುಂಟು ಮಾಡಿರಬಹುದು. ಏಕೆಂದರೆ, ಇದುವರೆಗೆ ಪ್ರಕಟವಾಗಿರುವ

20 ಸಾವಿರಕ್ಕೂ ಹೆಚ್ಚು ವಚನಗಳಲ್ಲಿ ಎಲ್ಲೂ 'ವಿಜ್ಞಾನ' ಎಂಬ ಶಬ್ದ ಬಳಕೆಯಾಗಿಲ್ಲ. 'ಕೃಷಿ' ಶಬ್ದ ಕೆಲವುಕಡೆ ಬಂದಿದೆ ಅಷ್ಟೆ. ವಾಸ್ತವವಾಗಿ ವಚನ ಸಾಹಿತ್ಯದಲ್ಲಿ 'ವಿಜ್ಞಾನ' ಶಬ್ದ ಕಂಡುಬರದಿದ್ದರೂ ಅದು ವೈಜ್ಞಾನಿಕ ಮತ್ತು ವೈಚಾರಿಕ. ಅಲ್ಲಿ 'ಮೌಲ್ಯ' ಶಬ್ದ ಕಂಡು ಬರದಿದ್ದರೂ ಅದು ಮೌಲಿಕ. ಅಲ್ಲಿ 'ಕ್ರಾಂತಿ' ಶಬ್ದ ಕಾಣದಿದ್ದರೂ ಅದು ಕ್ರಾಂತಿಕಾರಕ.

ವಚನಕಾರರ ಅನುಭಾವದ ಪರಿಭಾಷೆಯನ್ನೇ ಬಳಸಿ ಹೇಳುವುದಾದರೆ, ಅವರ ವಿಚಾರಧಾರೆ ನೆಲದ ಮರೆಯ ನಿಧನ, ಜಲದೊಡಲಿನ ಅಗ್ನಿ, ಶಿಲೆಯೊಳಗನ ಪಾವಕ, ಕತ್ತಲೆಯ ನುಂಗಿದ ಬೆಳಕು, ಬೀಜದೊಳಗಣ ವೃಕ್ಷ, ಬೇರಿಲ್ಲದ ಮರ – ಹಿಗೆನೂರಾರು ರೂಪಗಳಲ್ಲಿ ಕರೆಯಬಹುದು.

"ಲೋಕಕ್ಕೆ ಅನ್ನ ನೀಡಿ ಸಾಕಿ ಸಲಹುತ್ತಿರುವ ನಮ್ಮ ರೈತರು ಸದಾ ಮಣ್ಣಿನ ಮೇಲೆಯೇ ಕಣ್ಣಿಟ್ಟುಕೊಂಡಿರುವ ಕಾಯಕ ಯೋಗಿಗಳು. ಒಕ್ಕಲಿಕ ಮುದ್ದಣ್ಣ ಹೇಳುವಂತೆ "ನೀ ಕೊಟ್ಟ ಭೂಮಿಗೆ ಮುಂದೆ ಕರಲು, ಹಿಂದೆ ಇಗ್ಗರಲು, ಅಲ್ಲಿಂದ ಆಚೆ ಮಧ್ಯಭೂಮಿ. ಈ ಮೂರು ನೆಲದ ಭೂಮಿಯ ಆರ್‍ಯೆದು ಬೆಳೆದಿಹೆನೆಂದರೆ ಇದಾರ ವಶವೂ ಅಲ್ಲ." ಅನುಭಾವದ ನೆಲೆಯ ವಚನ ನಮ್ಮ ಕೃಷಿಕರ ಅನುಭಾವವೇ ಆಗಿದೆ. ಕೃಷಿಕಾಯಕದ ಅರಿವಿದ್ದ ಕಾರಣ ಅನೇಕ ಶರಣರು ತಮ್ಮ ವಚನಗಳಲ್ಲಿ ಕೃಷಿಗೆ ಸಂಬಂಧಿಸಿದ ಅಂಶಗಳನ್ನು ಸಂದರ್ಭೋಚಿತವಾಗಿ ಬಳಸಿದ್ದಾರೆ. ಆ ವೃತ್ತಿ ಸಂಬಂಧದ ಸಾಧನ ಸಲಕರಣೆಗಳನ್ನು, ವೃತ್ತಿ ವಿಧಾನವನ್ನು ರೂಪಕಗಳಾಗಿ ಬಳಸಿಕೊಂಡಿದ್ದಾರೆ. ಅಲ್ಲಮ ಹೇಳಿರುವ'ಬಯಲಲ್ಲಿ ಬಿತ್ತಲಿಲ್ಲ, ಬೆಳೆಯಲಿಲ್ಲ, ಒಕ್ಕಲಿಲ್ಲ, ತೂರಲಿಲ್ಲ' ಎನ್ನುವ ಮಾತು ಅನುಭಾವ ಸಂಬಂಧದ್ದಾದರೆ; ಭೂಮಿಯ ಮೇಲೆ ಬೆವರು ಹರಿಸಿ ಬೆಳೆ ತೆಗೆಯುವ ಕಾಯಕ ಸಂಬಂಧ ನಮ್ಮ ಕೃಷಿಕರದ್ದು.

"ಯಾವುದೇ ದೇಶವಿರಲಿ, ಯಾವುದೇ ಕಾಲವಿರಲಿ, ಕೃಷಿ ಕಾಯಕ ಮಾನವನ ಜೀವನಾಧಾರ. ಈ ಜೀವನಾಧಾರದ ಕೃಷಿಯ ಬಗೆಗೆ ವಚನಕಾರರ ಜ್ಞಾನ ಎಂತಹುದು? ಅವರ ವಿಚಾರಗಳಲ್ಲಿ ವೈಜ್ಞಾನಿಕ ಅಂಶಗಳು ಎಷ್ಟಿವೆ? ಅವು ಎಷ್ಟು ವಸ್ತುನಿಷ್ಠವಾಗಿವೆ? ಆಧುನಿಕ ಕೃಷಿ ವಿಜ್ಞಾನ ಗಮನಿಸಬೇಕಾದ ಯಾವ ಸುಳುಹುಗಳಿವೆ – ಇತ್ಯಾದಿಗಳನ್ನು ಕಂಡುಕೊಳ್ಳುವ ಒಂದು ಪ್ರಾಮಾಣಿಕ ಪ್ರಯತ್ನ ಈ ವಿಚಾರ ಸಂಕಿರಣ."

ವಿಚಾರ ಸಂಕಿರಣದಲ್ಲಿ ವಚನಕಾರರ ಕಾಲಘಟ್ಟದಲ್ಲಿದ್ದ ಕೃಷಿ ಸ್ಥಿತಿ–ಗತಿ, ವಚನ ವಾಙ್ಮಯದಲ್ಲಿ ವೈಜ್ಞಾನಿಕ ಕೃಷಿ ಪದ್ಧತಿಯ ಪ್ರತಿಪಾದನೆ, ಕಾಯಕ ಮತ್ತು ದಾಸೋಹ ಪ್ರಜ್ಞೆ, ಭೂಸಾರ ಸಂರಕ್ಷಣೆ, ಕೃಷಿ ಸಂಬಂಧದ ಉಪವೃತ್ತಿಗಳು, ಪಶುಪಾಲನೆ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿ ಪ್ರಬಂಧಕಾರರು ಆಧುನಿಕ ತಂತ್ರಜ್ಞಾನದ ಮೂಲಕ ತಮ್ಮ ಶೋಧನೆಗಳನ್ನು ಪ್ರಸ್ತುತಪಡಿಸಿದರು. ಅಲ್ಲಿ ನಡೆದ ಕಲಾಪಗಳನ್ನು ಗಮನಿಸಿದಾಗ ಆ ವಿಚಾರಗೋಷ್ಠಿ ತಾತ್ವಿಕ ಮತ್ತು ತಾಂತ್ರಿಕ, ವೈಚಾರಿಕ, ಪಾರಂಪರಿಕ ಮತ್ತು ಪ್ರಗತಿದಾಯಕ, ಲೌಕಿಕ ಮತ್ತು ಪಾರಮಾರ್ಥಿಕ ಪ್ರಯೋಗಿಕ ಮತ್ತು ಪ್ರಾತ್ಯಕ್ಷಿಕ, ಅನ್ವೇಷಕ ಮತ್ತು ಆನ್ವಯಿಕ –ಹೀಗೆ ಎಲ್ಲ ದೃಷ್ಟಿಯಿಂದಲೂ ಮಹತ್ವಪೂರ್ಣವಾಗಿತ್ತು. ●

---

ಕವನ

## ಭೂಸಾರ ಸಂರಕ್ಷಣೆ

ಒಡ್ಡು ಹಾಕಾಕ ಹೋಗ್ತಿನಿ ಹೊಲಕ
ಮಣ್ಣಿನ ರಕ್ಷಣೆಯನು ಮಾಡುದಕ
ಮಣ್ಣಾಗ ಏನೈತಿ ಅಂತ ಕೇಳಬ್ಯಾಡಾ
ಮಣ್ಣಿನ ಮ್ಯಾಗೇ ನಿಂತದ ಜಗ ನೋಡ
ಮಣ್ಣು ಹೋದರೆ, ಹೋದೇವು ಮಣ್ಣಿನ ಕೂಡ
ಒಡ್ಡು ಹಾಕಾಕ.........

ಹೊನ್ನು, ಹೆಣು, ಮಣ್ಣು ಮೂರರಾಗ
ಮಣ್ಣು ಬಹಳ ಪ್ರಮುಖ ಅದರಾಗ
ಕಾಯೋ ಅದನ್ನ ನೀ ಬಲು ಬೇಗ
ಒಡ್ಡು ಹಾಕಾಕ..........

ಬೆಳಿ ಬೇಳಿಯಾಕ ಮ್ಯಾಗಿನ ಮಣ್ಣೇ ಬೇಕ
ತಯಾರಾಗಾಕ ಸಾವಿರಾರು ವರ್ಷವದಕ
ಹರಿದು ಹೋಗಾಕ ದಿನ ಸಾಕ
ಒಡ್ಡು ಹಾಕಾಕ..........

ಸಮಪಾತಳಿ ಒಡ್ಡು ಹಾಕ್ತಿನಿ
ಹೆಚ್ಚಿನ ನೀರಿಗಿ ಬಚ್ಚಲು ಬಿಡತೀನಿ
ಮುಂದೆ ಅವುಗಳನ್ನು ಕಾಯ್ಕೊಂಡ ಹೋಗ್ತಿನಿ
ಒಡ್ಡು ಹಾಕಾಕ..........

ಸಾವಯವ ಗೊಬ್ಬರ ಹಾಕತೀನಿ
ಇಳುಕಿಲಿಗಡ್ಡ ಬೇಸಾಯ ಮಾಡತೀನಿ
ಪಟ್ಟ ಬೆಳೆಗಳ ನಾ ಬೆಳಿತೀನಿ
ಒಡ್ಡು ಹಾಕಾಕ..........

ಮಿಶ್ರಬೆಳೆಗಳ ನಾ ಬೆಳಿತೀನಿ
ತಕ್ಕ ಕಾಲಗೈಯ ನಾ ಮಡ್ತೀನಿ
ಒಣ ಬೇಸಾಯ ತತ್ವ ಹಿಡಿತೀನಿ
ಒಡ್ಡು ಹಾಕಾಕ..........

ಕಸ ಕಳೆಗಳ ನಾಶ ಮಾಡ್ತೀನಿ
ರೋಗರುಜಿನಗಳ ಬಾಧೆಯ ತಡಿತೀನಿ
ಬೀಜಕ್ಕುಪಚಾರ ನಾ ಮಾಡತೀನಿ
ಒಡ್ಡು ಹಾಕಾಕ..........

ಮಣ್ಣಿನ ರಕ್ಷಣೆಯನು ಮಾಡುದಕ
ಹೊನ್ನಿನ ಬೆಳೆಯನ್ನು ನಾ ಬೆಳೆಯುದಕ
ಭೂಮಿ ಸೇವೆಯ ನಾ ಮಾಡುದಕ
ಒಡ್ಡು ಹಾಕಾಕ..........

**ಸಂಗ್ರಹ –**
**ಉಮೇಶ್ ಜಿ. ಕೆಲಗೊಂಡ**

# ಬರದಲ್ಲೂ ದಾಖಲೆ ನಿರ್ಮಿಸಿದ ಕೃಷಿ ಮೇಳ – 2016

**ಬಿ. ಎಸ್. ಜನಗೌಡ, ಅನಿಲ್ ಕುಮಾರ್ ಮುಗಳ್ ಮತ್ತು ಶ್ಯಾಮರಾವ್ ಜಾಗಿರ್‌ದಾರ್**

ಧಾರವಾಡ ಕೃಷಿ ವಿಶ್ವವಿದ್ಯಾಲಯವು "ಪೌಷ್ಠಿಕ ಆಹಾರ ಭದ್ರತೆಗೆ ಬೇಳೆ ಕಾಳುಗಳು" ಎಂಬ ಘೋಷವಾಕ್ಯದೊಂದಿಗೆ 2016ರ ಸೆಪ್ಟೆಂಬರ್ 24 ರಿಂದ 27 ರವರೆಗೆ ಆಯೋಜಿಸಿದ ನಾಲ್ಕು ದಿನಗಳ 2016 ರ "**ಕೃಷಿ ಮೇಳ**"ಕ್ಕೆ ರಾಜ್ಯದ ಮಾನ್ಯ ಕೃಷಿ ಸಚಿವರು ಹಾಗೂ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಶ್ರೀ ಕೃಷ್ಣ ಬೈರೇಗೌಡ ಅವರು 2016ರ ಸೆಪ್ಟೆಂಬರ್ 25 ರಂದು ಚಾಲನೆ ನೀಡಿದರು. ಅನೇಕ ಸಮಸ್ಯೆಗಳಾದ ಯೋಗ್ಯ ಬೆಲೆ, ಮಳೆಯ ವೈಪರಿತ್ಯ, ಕೃಷಿ ಕಾರ್ಮಿಕರ ಖರ್ಚು ಮುಂತಾದ ಕಾರಣಗಳಿಂದ ರೈತರಿಗೆ ಸರಿಯಾಗಿ ಆದಾಯ ಬರುತ್ತಿಲ್ಲ. ಕೃಷಿ ವಿಶ್ವವಿದ್ಯಾಲಯದ ತಂತ್ರಜ್ಞಾನಗಳು ಹಾಗೂ ಅವುಗಳ ಅಳವಡಿಕೆಯಲ್ಲಿ ಅಂತರ ಬಹಳವಿದ್ದು, ಸರಿಯಾಗಿ ತಲುಪದೇ ರೈತರು ನಷ್ಟ ಅನುಭವಿಸುತ್ತಿದ್ದು ಈ ಹಿನ್ನೆಲೆಯಲ್ಲಿ ಇಂತಹ ಕೃಷಿ ಮೇಳ ಅವಶ್ಯಕ ಮತ್ತು ಅರ್ಥಪೂರ್ಣ ಎಂದು ತಿಳಿಸಿದರು. ಒಂದೇ ಸೂರಿನಡಿಯಲ್ಲಿ ನಾನಾರೀತಿಯ ಕೃಷಿ ವಿಚಾರಗಳನ್ನು ತಿಳಿಸುವಂತಹ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಈ ಕೃಷಿಮೇಳ ಸಾರ್ಥಕವಾಗಬೇಕಾದರೆ ರೈತರು ತಂತ್ರಜ್ಞಾನಗಳನ್ನು ತಮ್ಮ ತಮ್ಮ ಜಮೀನುಗಳಲ್ಲಿ ಅಳವಡಿಸಿಕೊಳ್ಳಬೇಕು. 2015–16 ರಲ್ಲಿ ಸರಕಾರವು ಯಂತ್ರೋಪಕರಣಗಳ ಸಹಾಯಧನ 8.35 ಕೋಟಿ, ಹನಿ ನೀರಾವರಿಗೆ 11.44 ಕೋಟಿ ಬೆಳೆ ಹಾನಿಗೆ ಪರಿಹಾರ 152.8 ಕೋಟಿ ಮತ್ತು ಬೆಳೆ ವಿಮೆ ಪರಿಹಾರಕ್ಕೆ 84 ಕೋಟಿ ಅನುದಾನವನ್ನು ಧಾರವಾಡ ಜಿಲ್ಲೆಗೆ ಸರಕಾರ ಕೊಡಮಾಡಿದೆ ಎಂದು ಸಚಿವರು ತಿಳಿಸಿದರು.

ಕೃಷಿ ಮೇಳ–2016ರ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವ ಹಾಗೂ ಧಾರವಾಡ ಜಿಲ್ಲೆಯ ಉಸ್ತುವಾರಿ ಸಚಿವ ಶ್ರೀ ವಿನಯ ಕುಲಕರ್ಣಿ ವಹಿಸಿದ್ದರು. ಧಾರವಾಡ ಕೃಷಿ ವಿಶ್ವವಿದ್ಯಾಲಯ ಸಿದ್ಧಪಡಿಸಿರುವ ಹವಾಮಾನ ಕೃಷಿ ಮೊಬೈಲ್ ಅಪ್ಲಿಕೇಶನ್‌ನ್ನು ಲೋಕಾರ್ಪಣೆ ಮಾಡಿದರು. ಅಲ್ಲದೇ ಕೆಲವು ತಾಂತ್ರಿಕ ಕೈಪಿಡಿಗಳನ್ನು ಬಿಡುಗಡೆಗೊಳಿಸಿದರು.

ಪ್ರಾರಂಭದಲ್ಲಿ ಎಲ್ಲರನ್ನು ಸ್ವಾಗತಿಸುತ್ತ, ನಾಲ್ಕು ದಿನಗಳ ಕಾಲ ನಡೆಯುವ ಕೃಷಿಮೇಳದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಧಾರವಾಡ ಕೃವಿವಿ ಕುಲಪತಿ ಡಾ|| ಡಿ. ಪಿ. ಬಿರಾದಾರ ವಿವರಿಸಿದರು ಮತ್ತು ವಿಶ್ವವಿದ್ಯಾಲಯವು ರೈತ ಚೇತನ ಸಹಾಯ ವಾಣಿಯ ಮೂಲಕ ಸಾಕಷ್ಟು ರೈತರಿಗೆ ಆತ್ಮಸ್ಥೈರ್ಯ ತುಂಬುತ್ತಿದೆ ಎಂದು ವಿಶ್ವವಿದ್ಯಾಲಯದ ಕೆಲವು ಪ್ರಮುಖ ಸಾಧನೆಗಳ ಬಗ್ಗೆ ತಿಳಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾಮಟ್ಟದ ಶ್ರೇಷ್ಠ ಕೃಷಿಕ ಹಾಗೂ



ಶ್ರೇಷ್ಠ ಕೃಷಿ ಮಹಿಳೆ ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಯಿತು.

**ಕೃಷಿ ಮೇಳದ ವಿಶೇಷತೆ**

ಕೃಷಿ ಮೇಳದ ನಾಲ್ಕೂ ದಿನಗಳಂದು ವೈವಿಧ್ಯಮಯ ಕಾರ್ಯಕ್ರಮಗಳು ಜರುಗಿದವು. ರೈತರಿಂದ ರೈತರಿಗಾಗಿ; ಜಿಲ್ಲಾ ಮಟ್ಟದ, ತಾಲೂಕಾ ಮಟ್ಟದ ಶ್ರೇಷ್ಠ ಕೃಷಿಕ, ಕೃಷಿ ಮಹಿಳೆ ಮತ್ತು ಯುವ ಕೃಷಿಕ, ಕೃಷಿ ಮಹಿಳೆ ಪ್ರಶಸ್ತಿ ಪ್ರದಾನ, ಕೃಷಿ ಮತ್ತು ಕೃಷಿಕರಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ವಿಚಾರ ಸಂಕಿರಣಗಳು ಹಾಗೂ ಉಪನ್ಯಾಸಗಳು ಮತ್ತು ತಜ್ಞರಿಂದ ತಾಂತ್ರಿಕ ಸಲಹೆಗಳು ಮುಂತಾದ ರೈತಸ್ನೇಹಿ ಕಾರ್ಯಕ್ರಮಗಳು ನಿರಂತರವಾಗಿ ನಡೆದು ಅಪಾರ ಜನರನ್ನು ಆಕರ್ಷಿಸಿದವು. ಒಟ್ಟಾರೆ 15 ಲಕ್ಷಕ್ಕೂ ಹೆಚ್ಚು ಜನರು ಕೃಷಿ ಮೇಳದಲ್ಲಿ ಪಾಲ್ಗೊಂಡಿದ್ದರು.

- ದೇಶದಲ್ಲಿ ಪ್ರಪ್ರಥಮ ಬಾರಿಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯವು ರೈತರಿಗಾಗಿ ಕೃಷಿ ಹವಾಮಾನ ಕೃಷಿ ಆ್ಯಪ್ ಅಭಿವೃದ್ಧಿಪಡಿಸಿದ್ದು, ಈ ಮೂಲಕ ರೈತರು ಇನ್ನು ಮುಂದು ಸಂಪೂರ್ಣ ಮಾಹಿತಿಯನ್ನು ಪಡೆಯಲಿದ್ದಾರೆ. ಅಲ್ಲದೆ agrometbijapur.org ವೆಬ್‌ಸೈಟ್ ನಲ್ಲಿರುವ ನಿತ್ಯದ ಮಾಹಿತಿಯನ್ನು ತಮ್ಮ ಮೊಬೈಲ್‌ನ ಪ್ಲೇಸ್ಟೋರ್ ಗೆ ಹೋಗಿ ಈ ಆ್ಯಪ್ ನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
- ವಿವಿಧ ಬೆಳೆಗಳ 18 ಸಂಶೋಧಿತ ನೂತನ ತಳಿಗಳನ್ನು ಕೃಷಿ ಮೇಳದಲ್ಲಿ ಬಿಡುಗಡೆಗೊಳಿಸಿ ಪ್ರದರ್ಶನ ಹಾಗೂ ಅವುಗಳ ಬೀಜಗಳನ್ನು ಮಾರಾಟಕ್ಕೆ ಇಡಲಾಯಿತು.
- ದ್ವಿದಳ ಧಾನ್ಯಗಳ ಉತ್ಪಾದನೆ ಹಾಗೂ ಮೌಲ್ಯವರ್ಧನೆಗೆ ಆದ್ಯತೆ ಕೊಡಲಾಯಿತು.
- ಮಣ್ಣಿನ ಫಲವತ್ತತೆ ಹಾಗೂ ಆರೋಗ್ಯ ಸಂರಕ್ಷಣೆ, ಸವಳು ಮತ್ತು ಜವಳು ಭೂಮಿಗಳ ಸುಧಾರಣೆಗಳ ಪ್ರಾತ್ಯಕ್ಷಿಕೆ ತೋರಿಸಲಾಯಿತು.
- ಒಣ ಬೇಸಾಯ ತಾಂತ್ರಿಕತೆಗಳಿಂದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು
- ಕೃಷಿಯಲ್ಲಿ ಜೈವಿಕ ಹಾಗೂ ನ್ಯಾನೋ ತಂತ್ರಜ್ಞಾನಗಳ ಬಳಕೆಗಳ ಬಗ್ಗೆ ತಿಳಿಸಿಕೊಡಲಾಯಿತು.
- ಮಳೆ ನೀರು ಕೊಯ್ಲು ಮತ್ತು ಅಂತರ್ಜಲ ಮರುಪೂರಣ ಬಗ್ಗೆ ಮಾಹಿತಿ ನೀಡಲಾಯಿತು.
- ಸುಧಾರಿತ ತಳಿ ಬೀಜ, ಸಸಿ ಹಾಗೂ ಕೃಷಿ ಪ್ರಕಟಣೆಗಳ ಮಾರಾಟ ಏರ್ಪಡಿಸಲಾಗಿತ್ತು.
- ಸುಧಾರಿತ ಕೃಷಿ ಯಂತ್ರೋಪಕರಣ ಹಾಗೂ ಸಲಕರಣೆಗಳ ಬಳಕೆ
- ರೈತರ ಆವಿಷ್ಕಾರಗಳು ಮತ್ತು ಕೃಷಿ ತಜ್ಞರೊಂದಿಗೆ ಸಂವಾದ
- ಹೈಟೆಕ್ ತೋಟಗಾರಿಕೆ, ಸುಗಂಧ ಮತ್ತು ಔಷಧಿ ಸಸ್ಯಗಳು ಹಾಗೂ ಫಲ ಪುಷ್ಪಗಳ ಪ್ರದರ್ಶನ
- ಅಲಂಕಾರಿಕ ಮೀನು ಸಾಕಾಣಿಕೆ, ಮತ್ಸ್ಯ ಸಸ್ಯ ಸಂಗಮ, ಮೀನು ಮತ್ತು ಸಿಗಡಿ ಸಾಕಣೆ ಹಾಗೂ ಅಲಂಕಾರಿಕ ಮೀನುಗಳ ಪ್ರದರ್ಶನ
- ಕೃಷಿ ಅರಣ್ಯ, ಜೈವಿಕ ಇಂಧನದ ಬೆಳೆಗಳು ಹಾಗೂ ಜೈವಿಕ ಇಂಧನ ಸಂಸ್ಕರಣೆ
- ಪಶುಸಂಗೋಪನೆ, ಜಾನುವಾರುಗಳ ಪ್ರದರ್ಶನ ಹಾಗೂ ಮೇವಿನ ಬೆಳೆಗಳ ತಾಂತ್ರಿಕತೆ
- ಕೃಷಿ ಕ್ಲಿನಿಕ್, ಕೃಷಿ ವ್ಯವಹಾರ ನಿರ್ವಹಣೆ, ರಫ್ತು ಹಾಗೂ ಕೃಷಿ ಅಂತರ್ಜಾಲದ ಮೂಲಕ ಹುಟ್ಟುವಳಿ ಮಾರಾಟ
- ಗೃಹ ವಿಜ್ಞಾನ ತಾಂತ್ರಿಕತೆಗಳು ಮತ್ತು ಸಿರಿ ಧಾನ್ಯಗಳ ಮೌಲ್ಯವರ್ಧನೆ
- ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮೂಲಕ ಸ್ವಸಹಾಯ ಗುಂಪುಗಳ ಸಬಲೀಕರಣ
- ಕೃಷಿ ಸಮುದಾಯ ಬಾನುಲಿ ಕೇಂದ್ರ FM-90.4 MHz ನಲ್ಲಿ ಕೃಷಿ ಮಾಹಿತಿ ಪ್ರಸಾರ ಮಾಡಲಾಯಿತು.

**ಯುವ ಕೃಷಿಕರಿಗೆ ವಿಶೇಷ ಪ್ರೋತ್ಸಾಹ**

ಯುವ ಪೀಳಿಗೆಯನ್ನು ಕೃಷಿಯತ್ತ ಆಕರ್ಷಿಸಲು ಧಾರವಾಡ ಕೃಷಿ ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಯಲ್ಲಿ ಬರುವ ಏಳು ಜಿಲ್ಲೆಗಳಿಗೆ, ಜಿಲ್ಲಾವಾರು ಹಾಗೂ ತಾಲೂಕಾ ವತಿಯಿಂದ ಯುವ ಕೃಷಿಕ ಮತ್ತು ಕೃಷಿ ಮಹಿಳೆಯರನ್ನು ಗುರುತಿಸಿ ಸನ್ಮಾನ ಮಾಡಲಾಗಿದೆ. ಇಂತಹ ಬರಗಾಲದಲ್ಲಿಯೂ ಕೂಡ ಲಕ್ಷೋಪಲಕ್ಷ ರೈತರು ಕೃಷಿ ಮೇಳದಲ್ಲಿ ಭಾಗವಹಿಸಲು ಈ ಮೇಲೆ ತಿಳಿಸಲಾದ ವಿಶೇಷತೆಗಳೇ ಮುಖ್ಯ ಕಾರಣ.



## ಸೃಷ್ಟಿ

ಸಕಲ ಜೀವಿಗಳ ಸೃಷ್ಟಿಯಾಗಿದೆ ಬದುಕನ್ನು ಬಂಗಾರ ಮಾಡಲು
ಸಸ್ಯಗಳಿವೆ ನೆರಳು, ಹೊಟ್ಟೆ – ಬಟ್ಟೆಗೆ ಕೊಟ್ಟು ತಂಪು ನೀಡಲು
ಇತರೇ ಸಂಪನ್ಮೂಲಗಳಿವೆ ಜಗತ್ತನ್ನು ಸಂಪದ್ಭರಿತವಾಗಿಸಲು
ಮಾನವಾದಿ ಜೀವಿಗಳಿವೆ ಅವೆಲ್ಲವನ್ನೂ ಅನುಭವಿಸಲು,
ಮಾನವನ ಸ್ವಾರ್ಥ ಇದಕ್ಕೆಲ್ಲ ಉಂಟು ಮಾಡಿದೆ ಸೋಲು,
ಹುಟ್ಟಬೇಕಿದೆ ಹೊಸ ಜನಾಂಗ – ಹಾಕಲು ಇದಕ್ಕೆ ಸವಾಲು –

ಡಾ॥ ಎಂ.ಎಂ. "ರೈತಗೀತೆ"

# ಐ.ಸಿ.ಎ.ಆರ್. – ಕೇಂದ್ರೀಯ ಕರಾವಳಿ ಕೃಷಿ ಸಂಶೋಧನಾ ಸಂಸ್ಥೆ, ಗೋವಾ

ಸಂಗ್ರಹ: ಡಾ॥ ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ



1976ರಲ್ಲಿ ಶಿಲ್ಲಾಂಗ್ ನಲ್ಲಿರುವ "ಈಶಾನ್ಯ ಬೆಟ್ಟ ಪ್ರದೇಶಗಳ ಐ.ಸಿ.ಎ.ಆರ್. ಸಂಶೋಧನಾ ಸಂಕೀರ್ಣ"ದ "ಪ್ರಾದೇಶಿಕ ಕೇಂದ್ರ"ವನ್ನು ಹಳೆ ಗೋವಾದಲ್ಲಿ ಸ್ಥಾಪಿಸಲಾಯಿತು. ನಂತರ ಈ ಪ್ರಾದೇಶಿಕ ಕೇಂದ್ರವನ್ನು ಕಾಸರಗೋಡಿನಲ್ಲಿರುವ "ಕೇಂದ್ರೀಯ ಪ್ಲ್ಯಾಂಟೇಷನ್ ಬೆಳೆಗಳ ಸಂಶೋಧನಾ ಸಂಸ್ಥೆ"ಯ ಆಡಳಿತಕ್ಕೊಳ ಪಡಿಸಲಾಯಿತು. ಏಪ್ರಿಲ್ 1989ರಲ್ಲಿ ಇದನ್ನು ಒಂದು ಸ್ವತಂತ್ರ ಸಂಸ್ಥೆಯ ದರ್ಜೆಗೇರಿಸಿ "ಗೋವಾ ಐ.ಸಿ.ಎ.ಆರ್. ಸಂಶೋಧನಾ ಸಂಕೀರ್ಣ" ಎಂದು ಹೆಸರಿಸ ಲಾಯಿತು. ಅನಂತರದ ವರ್ಷಗಳಲ್ಲಿ, ಅಂದರೆ, 1ನೆ ಏಪ್ರಿಲ್ 2014ರಲ್ಲಿ ಇದನ್ನು "ಐ.ಸಿ.ಎ.ಆರ್. – ಕೇಂದ್ರೀಯ ಕರಾವಳಿ ಕೃಷಿ ಸಂಶೋಧನಾ ಸಂಸ್ಥೆ" (ICAR-Central Coastal Agricultural Research Institute, Goa) ಎಂದು ಮರು ನಾಮಕರಣ ಮಾಡಲಾಯಿತು. ಈಗ ಸಂಸ್ಥೆಯು "ಭಾರತೀಯ ಕೃಷಿ ಅನುಸಂಧಾನ ಪರಿಷತ್"ನ (ಐ.ಸಿ.ಎ.ಆರ್.) "ರಾಷ್ಟ್ರೀಯ ಸಂಪನ್ಮೂಲ ನಿರ್ವಹಣಾ" ವಿಭಾಗದ ಅಧೀನ ಸಂಸ್ಥೆಯಾಗಿದೆ.

ಈ ಸಂಶೋಧನಾ ಸಂಕೀರ್ಣದ ಉದ್ದೇಶಗಳೆಂದರೆ, ಕೃಷಿ ಮತ್ತು ತೋಟಗಾರಿಕೆ ಬೆಳೆಗಳು, ಜಾನುವಾರುಗಳು, ಮತ್ತು ಮೀನು ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ಕೊಯ್ಲೋತ್ತರ ನಿರ್ವಹಣೆಗಾಗಿ ಮೂಲಭೂತ ಮತ್ತು ಅನ್ವಯಿಕ ಸಂಶೋಧನೆ ನಡೆಸುವುದು; ಈ ಸಂಸ್ಥೆಯಲ್ಲಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳನ್ನು ಪ್ರಚಾರ ಮಾಡುವುದು; ತಂತ್ರಜ್ಞಾನಗಳ ಬಗ್ಗೆ ತರಬೇತಿ ಕೇಂದ್ರವಾಗಿ ಕೆಲಸಮಾಡುವುದು; ನೂತನ ತಂತ್ರಜ್ಞಾನಗಳ ಅಭಿವೃದ್ಧಿಯಲ್ಲಿ ಮತ್ತು ವರ್ಗಾವಣೆಯಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳೊಡನೆ ಸಂಬಂಧ ಕಲ್ಪಿಸುವುದು; ಮೂಲ ಬೀಜಗಳು ಮತ್ತು ಬಿತ್ತನೆ ಸಾಮಗ್ರಿಗಳನ್ನು ಉತ್ಪಾದಿಸುವುದು; ಸಲಹಾ ಸೇವೆಯನ್ನು ಒದಗಿಸುವುದು; ಕರಾವಳಿ ಮತ್ತು ಪಶ್ಚಿಮ ಘಟ್ಟ ಪ್ರದೇಶದ ಕೃಷಿ ವ್ಯವಸ್ಥೆಯ ಬಗ್ಗೆ ಮಾಹಿತಿ ಭಂಡಾರವಾಗಿ ಕೆಲಸ ಮಾಡುವುದು.

**ವಿಳಾಸ**: ನಿರ್ದೇಶಕರು, ಐ.ಸಿ.ಎ.ಆರ್. – ಕೇಂದ್ರೀಯ ಕರಾವಳಿ ಕೃಷಿ ಸಂಶೋಧನಾ ಸಂಸ್ಥೆ, ಎಲಾ, ಹಳೆ ಗೋವಾ–403402, ಗೋವಾ.



# ನಿವೃತ್ತಿಯಾಯಿತು, ಆದರೆ ಆಯಾಸವಾಗಿರುವುದಿಲ್ಲ

**ಸಂಗ್ರಹ ಮತ್ತು ಕನ್ನಡಾನುವಾದ: ಡಾ॥ ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ**

ನೀನು ನಿವೃತ್ತನಾದುದಕ್ಕೆ ಅಭಿನಂದನೆಗಳು. ಅದರೆ, ಮುಂದೇನು? ನಿನ್ನ ನಿವೃತ್ತಿ ಜೀವನದ ಮುಂದಿನ 25–30 ವರ್ಷಗಳನ್ನು ನೀನು ಹೇಗೆ ಕಳೆಯುತ್ತೀಯೆ ಎಂಬುದರ ಬಗ್ಗೆ ಯೋಚಿಸಿದ್ದೀಯಾ? ನಿನಗೆ ಬಹಳಷ್ಟು ಆಯ್ಕೆಗಳಿವೆ; ಜೀವನದ ಎಲ್ಲಾ ಸುಖವನ್ನು ಅನುಭವಿಸುವುದು, ಆರಾಮವಾಗಿರುವುದು, ಟಿ.ವಿ. ವೀಕ್ಷಿಸುವುದು, ಮೊದಲನೆ ಪುಟದಿಂದ ಹಿಡಿದು ಕೊನೆಯ ಪುಟದವರೆಗೂ ದಿನ ಪತ್ರಿಕೆಯನ್ನು ಓದುವುದು, ಸ್ನೇಹಿತರ ಜೊತೆಯಲ್ಲಿ ಹರಟುವುದು, ಇಷ್ಟವಾದದ್ದನ್ನು ಬೇಕೆನಿಸಿದಾಗ ತಿನ್ನುವುದು ಮತ್ತು ಕುಡಿಯುವುದು, ಇಸ್ಪೀಟ್ ಆಡುವುದು, ಅಂಗಡಿಗಳ ಗಾಜಿನ ಕಿಟಕಿಗಳಲ್ಲಿ ಜೋಡಿಸಿದ ವಸ್ತುಗಳನ್ನು ನೋಡಿ ಸಂತೋಷಿಸುವುದು, ಪರದೇಶಗಳಿಗೆ ಪ್ರವಾಸ ಹೋಗುವುದು. ಆದರೆ, ನಿನ್ನ ನಿವೃತ್ತ ಜೀವನವನ್ನು ಈ ರೀತಿಯಲ್ಲಿ ಕಳೆಯಬೇಡ; ಇವುಗಳನ್ನೆಲ್ಲವನ್ನೂ ನೀನು ಸದಾ ಕಾಲವೂ ಅನುಭವಿಸಲು ಆಗುವುದಿಲ್ಲ.

ನಿನಗೆ ಒಂದು ಉದ್ದೇಶವನ್ನು ಕೊಡುವ, ಪ್ರತಿಭಟಿಸುವ, ಸಾಹಸ ಕಾರ್ಯ ಮಾಡುವ, ಮುಂತಾದ ಚಟುವಟಿಕೆಗಳಲ್ಲಿ ನಿನ್ನನ್ನು ತೊಡಗಿಸಿಕೊಳ್ಳಬೇಕು ಮತ್ತು ಸಾಧಿಸಿದ ಸಂತೋಷವನ್ನು ಕೊಡುವ ಮತ್ತು ತೃಪ್ತಿಯನ್ನು ಕೊಡುವ ಕೆಲಸಗಳಲ್ಲಿ ನಿನ್ನನ್ನು ತೊಡಗಿಸಿಕೊಳ್ಳಬೇಕು. ನಿವೃತ್ತಿಯೆಂದರೆ ಜೀವನಕ್ಕೆ ರಾಜೀನಾಮೆ ಕೊಡುವುದು ಎಂದಲ್ಲ. ಆದರೆ, ಪರಿಪೂರ್ಣವಾದ ಜೀವನವನ್ನು ನಡೆಸಲು ಮತ್ತು ಚಟುವಟಿಕೆಯಿಂದ ಕೂಡಿದ ಜೀವನವನ್ನು ನಡೆಸಲು ಇದೊಂದು ಅವಕಾಶ. ಇದು ಸುಮ್ಮನೆ ಕುಳಿತುಕೊಳ್ಳುವ ಸಮಯವಲ್ಲ ಮತ್ತು ಅದೃಷ್ಟವು ನನಗೆ ಬಾಗಿಲನ್ನು ತೋರಿಸಲಿ ಎಂದು ಕಾಯುವುದಲ್ಲ. ಆದರೆ, ಇತರರಿಗೆ ಒಳ್ಳೆಯದಾಗುವ ಯಾವುದಾದರೂ ಕೆಲಸವನ್ನು ಮಾಡುವುದು ಮತ್ತು ಈ ರೀತಿ ಮಾಡುವುದರ ಮೂಲಕ ನಿನ್ನ ಜೀವನವನ್ನೂ ಹಸನು ಮಾಡಿಕೊಳ್ಳುವುದು. ಈ ರೀತಿ ಮಾಡಿದಲ್ಲಿ ನೀನು ಜೀವನದ ಅರ್ಥದ ಬಗ್ಗೆ ಚರ್ಚಿಸುವ ಚಾಳಿಯನ್ನು ಬೆಳೆಸಿಕೊಳ್ಳುವುದಿಲ್ಲ.

ಉದ್ದೇಶ ಅಥವಾ ಗುರಿ ಎನ್ನುವುದು ಜೀವನಕ್ಕೆ ಶಕ್ತಿಯನ್ನು ಕೊಡುವ ಮತ್ತು ನಮ್ಮನ್ನು ಮುನ್ನಡೆಸುವ ಒಂದು ಯಂತ್ರ. ಉದ್ದೇಶವಿಲ್ಲದಿದ್ದರೆ ನೀನು ಬೇಸರ ಪಡುತ್ತೀಯೆ ಮತ್ತು ಖಿನ್ನನಾಗುತ್ತೀಯೆ. ನಿವೃತ್ತಿಯ ಬಗ್ಗೆ 'ವಿಲ್ಫ್ರೆಡ್ ಪೀಟರ್ಸನ್' ಹೇಳುವುದೇನೆಂದರೆ, "ನಿವೃತ್ತನಾಗಬೇಡ ..... ಹಂಬಲಿಸು" ಎಂದು. ನೀನು ಸದಾ ನಂಬಿದ್ದ ಧ್ಯೇಯಗಳನ್ನು ಸಾಧಿಸಲು ಕೆಲಸಮಾಡಲು ಹಂಬಲಿಸು. ನಿನ್ನ ಅತ್ಯಲ್ಪ ಕಾಲವನ್ನು, ಸಮೃದ್ಧವಾದ ಅನುಭವಗಳು ತುಂಬುವ ಕಲೆಯನ್ನಾಗಿ ರೂಢಿಸಿಕೊ. ಇದರಿಂದ ನಿನ್ನ ನಿವೃತ್ತ ಜೀವನಕ್ಕೆ ಹೊಸ ಅರ್ಥ ಮತ್ತು ಆಳ ಬರುತ್ತದೆ.

ನೀನು ವಿದ್ಯಾರ್ಥಿಯಾಗಿದ್ದಾಗ ಒಬ್ಬ ಅಧಿಕಾರಿಯಾಗಬೇಕು ಎಂದು ಇಷ್ಟಪಟ್ಟಿದ್ದೆ. ನಿನ್ನ ವೃತ್ತಿಜೀವನದ ಸೇವಾವಧಿಯಲ್ಲಿ ಹಣ ಸಂಪಾದಿಸಲು ಮತ್ತು ವೃತ್ತಿಗೆ ಸಂಬಂಧಿಸಿದ ಗುರಿಗಳನ್ನು ಸಾಧಿಸಲು ನೀನು ಕಾರ್ಯನಿರುತನಾಗಿದ್ದೆ; ಒಬ್ಬ ಪೋಷಕನಾಗಿ ನಿನ್ನ ಕುಟುಂಬವನ್ನು ಬೆಳೆಸಲು ಮತ್ತು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಒದಗಿಸಲು ನೀನು ಕಾರ್ಯನಿರುತನಾಗಿದ್ದೆ. ಬಹುಶಃ ನೀನು ಯಾರು, ನಿನ್ನ ಜೀವನದ ನಿಜವಾದ ಗುರಿ ಏನು, ನಿನ್ನ ನಿಜವಾದ ಆಸಕ್ತಿಗಳೇನು, ಎಂಬ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ನಿನಗೆ ಸಮಯವಿರಲಿಲ್ಲ ಅಥವಾ ಬುದ್ಧಿಸಾಮರ್ಥ್ಯವಿರಲಿಲ್ಲ. ಈ ಎಲ್ಲಾ ವಿಷಯಗಳ ಬಗ್ಗೆ ವಿಮರ್ಶಿಸಿಕೊಳ್ಳಲು ಮತ್ತು ನಿನ್ನ ಆತ್ಮಸಾಕ್ಷಿಯಾಗಿ ನೀನು ಏನನ್ನು ಸಾಧಿಸಬೇಕು ಎಂಬುದಕ್ಕೆ ನಿವೃತ್ತಿಯು ಸೂಕ್ತ ಸಮಯ. ಜೀವನದ ನಿಜವಾದ ಉದ್ದೇಶವನ್ನು ಅನ್ವೇಷಿಸಲು ಮತ್ತು ನಿನ್ನ ನಿಜಾತ್ಮವನ್ನು ಪ್ರದರ್ಶಿಸಲು ನಿವೃತ್ತಿಯು ನಿನಗೆ ಅಗಾಧ ಪ್ರಮಾಣದ ಅವಕಾಶಗಳನ್ನು ಕೊಡುತ್ತದೆ. ವೈಯಕ್ತಿಕ ಮತ್ತು ಸ್ವಾರ್ಥದ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುವುದಕ್ಕಷ್ಟೆ ನಿರ್ಬಂಧವಿದೆ ಮತ್ತು ಎಲ್ಲರಿಗೂ ಪ್ರಯೋಜನವಾಗುವ ಹಾಗೆ ಹೆಚ್ಚಿನ ಉದ್ದೇಶವನ್ನು ಸಾಧಿಸಲು, ಇದರಾಚೆಗೂ ನೀನು ತಲುಪಬೇಕು.

ನಿನ್ನ ವೃತ್ತಿಜೀವನದ ಪರ್ಯಂತ ನೀನು ಬೇಕಾದಷ್ಟನ್ನು ಪಡೆದುಕೊಂಡಿದ್ದೀಯೆ; ನೀನು ನೈಸರ್ಗಿಕ ಸಂಪನ್ಮೂಲಗಳನ್ನು ದುರ್ಬಳಕೆ ಮಾಡಿಕೊಂಡಿದ್ದೀಯೆ ಮತ್ತು ಜೀವನವನ್ನು ಸುಖಮಯವನ್ನಾಗಿಸಿಕೊಳ್ಳಲು ಪರಿಸರವನ್ನು ಅಥವಾ ವಾತಾವರಣವನ್ನು ಹಾಳು ಮಾಡಿದ್ದೀಯೆ. ಬಹುಶಃ ನಿನ್ನ ಸ್ವಾರ್ಥಕ್ಕಾಗಿ ಇತರರಿಗೆ ತೊಂದರೆಯನ್ನು ಉಂಟುಮಾಡಿದ್ದೀಯೆ. ಇದಕ್ಕೆ ಬದಲಾಗಿ ನೀನು ಏನನ್ನು ಕೊಟ್ಟಿದ್ದೀಯೆ? ಬಹುಶಃ ಏನೂ ಇಲ್ಲ! ನಿವೃತ್ತಿಯು ಸಮಾಜಕ್ಕೆ ನೀನು ಏನನ್ನಾದರೂ ಕೊಡಬಹುದಾದ ಒಂದು ಸಮಯ.

ನೀನು ಸದಾ ನಂಬಿರುವ ಧ್ಯೇಯಗಳಿಗಾಗಿ ಕೆಲಸ ಮಾಡು. ಈ ವಿಶ್ವವನ್ನು ಒಂದು ಅತಿ ಸುಂದರವಾದ, ಪ್ರೀತಿಸಬಹುದಾದ ಮತ್ತು ಶಾಂತಿಯುತವಾದ ಸ್ಥಳವನ್ನಾಗಿ ಮಾಡಲು ಅನೇಕ ರೀತಿಯಲ್ಲಿ ನಾವು ಸಹಾಯ ಮಾಡಬಹುದು. ನಿನ್ನ ನಿವೃತ್ತಿಯಲ್ಲಿ ಈ ಕೆಳಕಂಡ ಒಂದು ಅಥವಾ ಹೆಚ್ಚಿನ ಉದ್ದೇಶಗಳನ್ನು ಅನುಸರಿಸು: ಅವಶ್ಯಕತೆ ಇರುವವರಿಗೆ ಸಹಾಯ ಮಾಡುವುದು; ಸಾಮಾಜಿಕ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು; ಸಮುದಾಯಗಳನ್ನು ಒಟ್ಟುಗೂಡಿಸುವುದು; ವೃದ್ಧಾಶ್ರಮಗಳನ್ನು ಪ್ರಾರಂಭಿಸುವುದು; ಪಿತ್ರಾರ್ಜಿತ ಸಂಸ್ಕೃತಿಯನ್ನು ಸಂರಕ್ಷಿಸುವುದು; ಭ್ರಷ್ಟಾಚಾರದ ವಿರುದ್ಧ ಹೋರಾಡುವುದು; ಪುಸ್ತಕಗಳನ್ನು ಬರೆಯುವುದು; ಉಪಯುಕ್ತವಾದ ಏನನ್ನಾದರೂ ಅನ್ವೇಷಣೆ ಮಾಡುವುದು, ಮತ್ತು ಪ್ರೇರಣೆಕೊಡುವ ಸಾಹಿತ್ಯವನ್ನು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದ ಮಾಡುವುದು.

ಈ ಕೆಲಸಗಳು ಉತ್ತಮ ಆರ್ಥಿಕ ಲಾಭವನ್ನು ಕೊಡದಿರಬಹುದು. ಆದರೂ ಅವು ಅತಿಯಾದ ಸಂತೋಷಕ್ಕೆ ಮತ್ತು ತೃಪ್ತಿಗೆ ಕಾರಣಗಳಾಗುತ್ತವೆ; ಇದೇ ಮನುಷ್ಯನ ಎಲ್ಲಾ ಆಸೆಗಳ ತಿರುಳು. ಕೆಲವು ಸಾರಿ ಬೇರೆಯವರ ಪ್ರಯೋಜನಕ್ಕಾಗಿ ಸ್ವಲ್ಪ ಹಣವನ್ನು ನೀನೇ ಖರ್ಚು ಮಾಡಬಹುದು. ನೆನಪಿರಲಿ: ಬೇರೆಯವರಿಗೆ ಸೇವೆ ಮಾಡುವುದಕ್ಕಿಂತ ಹೆಚ್ಚಿನ ಸಂತೋಷ ಬೇರಾವುದೂ ಇಲ್ಲ. ●

# ಶೂರ ಸಂಗೊಳ್ಳಿ ರಾಯಣ್ಣ

ಮಹಾದೇವ ಬಿರಾದಾರ, ಅಥಣಿ

ಒಂದು ಮಿಂಚು ಸಂಚರಿಸಿದಂತೆ ಕರುನಾಡಿನ ಕಿತ್ತೂರು ಸಂಸ್ಥಾನದಲ್ಲಿ ಮಿಂಚಿ ಸ್ವತಂತ್ರ ಹೋರಾಟದ ದಂತಕಥೆ ಯಾದವನು ಸಂಗೊಳ್ಳಿಯ ಶೂರ, ಹುಲಿಯನ್ನು ಸದೆಬಡಿದ ಮನೆತನದಲ್ಲಿ ಹುಟ್ಟಿದ ರಾಯಣ್ಣ. ರಾಯಣ್ಣ ಅಂದರೆ ಬ್ರಿಟಿಷರ ರೋಮ ನಿಮಿರಿ ನಿಲ್ಲುತ್ತಿದ್ದವು. ಏಕೆಂದರೆ ಉತ್ತರದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಶಂಖನಾದ ಮೊಳಗುವುದಕ್ಕಿಂತಲೂ ಮುಂಚೆ ಬ್ರಿಟಿಷರ ವಿರುದ್ಧ ಕತ್ತಿ ಮಸೆದವನು ಕಿತ್ತೂರು ನಾಡ ತಳವಾರ ರಾಯಣ್ಣ.

ಕಾಡು ಮೇಡು ಅಲೆದು ಊಟ ನಿದ್ದೆ ತ್ಯಜಿಸಿ ಸಂಸಾರದ ಸುಖ ಬೋಗಗಳನ್ನು ಅನುಭವಿಸಲಿಲ್ಲ. ರಾಯಣ್ಣ ಎಲ್ಲ ರಾಷ್ಟ್ರ ನಾಯಕರ ಕುಟುಂಬಗಳಂತೆ ರಾಯಣ್ಣನ ಕುಟುಂಬವು ಕರಾಳ ದಿನಗಳನ್ನು ಸವೆಸಿತು. ಆದರೆ ಆ ಯಾವ ಭಾವ ಬಂಧನಕ್ಕೂ ಒಳಗಾಗದೇ ರಾಯಣ್ಣ ತನ್ನ ರಕ್ತನಾಡಿಗಳಲ್ಲಿ ಬ್ರಿಟಿಷ್ ಕುನ್ನಿಗಳನ್ನು ಸಂಹಾರ ಮಾಡಬೇಕೆಂದು ಹಟ ಸಾಕಿಕೊಂಡಿದ್ದ. ತಂದೆ ಭರಮಪ್ಪ, ತಾಯಿ ಕೆಂಚವ್ವರಿಗೆ ಜನಿಸಿದ ರಾಯಣ್ಣ ಪರಾಕ್ರಮಶಾಲಿಯಾಗಿದ್ದ.

ಕರ್ನಾಟಕದ ಇತಿಹಾಸದಲ್ಲಿ ರಾಯಣ್ಣ ಕೈಕೊಂಡ ಬಂಡಾಯವು ವಿಶಿಷ್ಟವಾದುದು. ಬಾಲ್ಯದಲ್ಲಿಯೇ ಶೌರ್ಯ ಸಾಹಸಕ್ಕೆ ಹೆಸರಾಗಿದ್ದ ರಾಯಣ್ಣ ಗರಡಿ ಮನೆಯಲ್ಲಿ ಏಕಾಗ್ರತೆಯಿಂದ ವಿವಿಧ ಆಯುಧಗಳ ಅಬ್ಯಾಸ ಮಾಡಿ ಕಿತ್ತೂರಿನ ರಾಣಿ ಚೆನ್ನಮ್ಮಳ ಪ್ರೀತಿಗೆ ಪಾತ್ರನಾದವನು. ಕಿತ್ತೂರು ಸುತ್ತಮುತ್ತಲಿನಲ್ಲಿ ಸಮೃದ್ಧಿ ಸಂಪನ್ನತೆ ಧನ-ದಾನ್ಯಗಳಿಂದ ಕಂಗೊಳಿಸುತ್ತಿತ್ತು. ಎಲ್ಲದರಿಂದಲೂ ಹರಿದು ಬರುತ್ತಿದ್ದ ವಾರ್ಷಿಕ ವರಮಾನಕಂಡು ಆಗ ಹಿಂದೂಸ್ತಾನದಲ್ಲಿ ನೆಲೆಯೂರಿದ್ದ ಕಂಪನಿ ಸರ್ಕಾರಕ್ಕೆ ನಿದ್ದೆ ಹತ್ತದಾಗಿತ್ತು.

1824ರಲ್ಲಿ ಬ್ರಿಟಿಷರು ಸೈನ್ಯ ಸಮೇತ ಕಿತ್ತೂರಿಗೆ ಮುತ್ತಿಗೆ ಹಾಕಿದರು. ಈ ಯುದ್ಧದಲ್ಲಿ ಸೋಲುಂಡ ಕಂಪನಿ ಸರ್ಕಾರ ಮತ್ತೊಮ್ಮೆ ನಡೆದ ಕಾಳಗದಲ್ಲಿ ಕುತಂತ್ರದಿಂದ, ಚೆನ್ನಮ್ಮ, ರಾಯಣ್ಣ ಮತ್ತು ಇತರರು ಸೆರೆಯಾದರು.

ಸೆರೆಮನೆಯಿಂದ ಬಿಡುಗಡೆಗೊಂಡ ರಾಯಣ್ಣ ಕಿತ್ತೂರನ್ನು ಸ್ವತಂತ್ರಗೊಳಿಸಲು ಪಣತೊಟ್ಟು ಬಿಚ್ಚುಗತ್ತಿ ಚನ್ನಬಸು, ಗುರಿಕಾರ ಬಾಳಣ್ಣ, ವಡ್ಡರ ಯಲ್ಲಣ್ಣ, ಗಜವೀರ ಇತರರನ್ನು ಕರೆದುಕೊಂಡು ಸಂಘಟನೆಯಲ್ಲಿ ತೊಡಗಿರುವಾಗಲೇ, ಚೆನ್ನಮ್ಮ ಬೈಲಹೊಂಗಲ ಜೈಲಿನಲ್ಲಿ ವಿಧಿವಶಳಾದಳು. ಇದರಿಂದ ಎದೆಗುಂದದೇ ರಾಯಣ್ಣ ಅನೇಕ ಹೋರಾಟಗಳಲ್ಲಿ ಭಾಗಿಯಾದ. ಒಂದು ದಿನ ಗಿಡದ ಹುಬ್ಬಳ್ಳಿಗೆ ಮುತ್ತಿಗೆ ಹಾಕಿ ಬರುವಾಗ ರಾಯಣ್ಣನಿಗೆ ಸ್ನಾನ ಮಾಡಲು ಮನಸ್ಸಾಯಿತು. ರಾಯಣ್ಣ ಸ್ನಾನ ಮಾಡುತ್ತಿದ್ದ ಜಾಗವನ್ನು 'ಡೋರಿಮಡು' ಎಂದು ಕರೆಯುತ್ತಿದ್ದರು. ಗಿಡ-ಮರಗಳಿಂದ ಕಂಗೊಳಿಸುವ ರಮ್ಯತಾನವದು. ಏಪ್ರೀಲ್ 8ನೇ ತಾರೀಖು ಅನುಗಾಲವು ರಾಯಣ್ಣನ ಕೈಯಲ್ಲಿ ಕತ್ತಿ ಇರುತ್ತಿತ್ತು. ಕೈಯಲ್ಲಿ ಕತ್ತಿ ಇತ್ತೆಂದರೆ ನೂರಾರು ಜನ ಬಂದರೂ ಏನೂ ಮಾಡಲು ಆಗುತ್ತಿರಲಿಲ್ಲ. ಈಜುವಾಗಲೂ ಸಹ ಕತ್ತಿಯನ್ನು ಬಾಯಲ್ಲಿ ಕಚ್ಚಿಕೊಂಡೆ ಇರುತ್ತಿದ್ದ. ಸ್ನಾನ ಮಾಡಿಯಾದ ಮೇಲೆ ಬಟ್ಟೆ ಹಾಕಿ ಕೊಳ್ಳುವಾಗ ತನ್ನ ಕೈಯಲ್ಲಿದ್ದ ಕತ್ತಿಯನ್ನು ಪಕ್ಕದಲ್ಲಿ ಇದ್ದ ಸಂಬಂದಿ ಲಕ್ಕಣ್ಣನ ಕೈಗೆ ಕೊಟ್ಟ, ಇಂಥ ಅವಕಾಶಕ್ಕಾಗಿ ಕಾಯುತ್ತಿದ್ದ ಲಿಂಗನಗೌಡನ ಆಳುಗಳು ರಾಯಣ್ಣನನ್ನು ಹಿಡಿದರು. ರಾಯಣ್ಣ ಬಂದಿಯಾದ. ಆಪ್ತ ಸಂಬಂದಿಕರಲ್ಲಿ ಇಟ್ಟಿದ್ದ ನಂಬಿಕೆ ಬದುಕಿನಲ್ಲಿ ಸುಳ್ಳಾಗಿ ಹೋಯಿತು. ರಾಯಣ್ಣನ ಬಂದನದಿಂದ ಇಡೀ ನಾಡೇ ಕಣ್ಣೀರಿನ ಕೋಡಿ ಹರಿಸಿತು. ಜೊತೆಯಲ್ಲಿ ಹೆಗಲಿಗೆ ಹೆಗಲು ಕೊಡುತ್ತಿದ್ದವರೆಲ್ಲ ಲಕ್ಕನ ಮಾತಿನಿಂದ ದಿಕ್ಕೆಟ್ಟು ಓಡಿದರು.

ಕೊನೆಗೆ ಜನೇವರಿ 26ರಂದು ಮರಣ ದಂಡನೆ ವಿಧಿಸಲಾಗಿ, ಮಾಡಿದ್ದೆಲ್ಲವು ದೇಶಕ್ಕಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಎಂಬ ಭಾವ ತುಂಬಿ ತುಳುಕುತ್ತಿತ್ತು. ರಾಯಣ್ಣನನ್ನು ಗಲ್ಲಿಗೇರಿಸಿದ ಕ್ಷಣ ಜನರ ಗುಂಪಿನಲ್ಲಿದ್ದ ಸನ್ಯಾಸಿ ರೂಪದ ಬಿಚ್ಚುಗತ್ತಿ ಚನ್ನಬಸು ರಾಯಣ್ಣನ ಸಮಾಧಿಯ ಮೇಲೆ ಒಂದು ಆಲದ ಸಸಿ ನೆಟ್ಟು ತನ್ನ ಅಮರ ಸ್ನೇಹಿತ್ವದ ಪ್ರೀತಿಯ ಸಾರವನ್ನೆಲ್ಲ ನೀರಿನ ಜೊತೆ ಸುರಿದು ಬೆಳೆಸಿದ. ರಾಯಣ್ಣನ ಕೀರ್ತಿಯಂತೆ ಆಲದ ಮರ ಬೆಳೆದು ನೋಡ ನೋಡುತ್ತಲೇ ಇಹಲೋಕ ತ್ಯಜಿಸಿದ.

ಇಂತಹ ಒಂದು ಹೋರಾಟಗಾರನ ತಾಯಿ ಕೆಂಚವ್ವ, ನಾಡಿನವರೇ ಆದ ಕುಲಕರ್ಣಿ ಮತ್ತು ಬಾಳಪ್ಪನಂತ ವಂಚಕರ ದೌರ್ಜನ್ಯವನ್ನು ಮಡಿಲಿಗೆ ಹಾಕಿಕೊಂಡು ರಾಯಣ್ಣನನ್ನು ಬೆಳೆಸಿದ್ದಳು.

ಇಂದು ರಾಯಣ್ಣನಿಗೆ ರಾಷ್ಟ್ರನಾಯಕನಂತಹ ಸಿಗಬೇಕಾದ ಸ್ಥಾನ ಮಾನ ಸಿಗದೇ ಹೋದರೂ, ಇವತ್ತಿಗೆ ನಮ್ಮ ನಾಡಿನ ಜನಪದರು ಅನಾಮಿಕ ಲಾವಣಿಕಾರರು ರಾಯಣ್ಣನ ಶೌರ್ಯವನ್ನು ಬಣ್ಣಿಸಿ ಹೋಗಿದ್ದಾರೆ. ಅದರಲ್ಲಿ ಚಿಕ್ಕನಂದಿಯ ಅನಾಮಿಕ ಲಾವಣಿಗಾರನೋರ್ವನ ಲಾವಣಿ ಪದದಲ್ಲಿ ರಾಯಣ್ಣನ ಶೌರ್ಯ ಪ್ರಜ್ವಲಿಸುತ್ತದೆ. "ಏ ಸಿಂಹದಂತಾ ಸಂಗೋಳ್ಳಿ ರಾಯಣ್ಣ ಭೂಮಿಗೆ ಬಿದ್ದಾಂಗ ಸೂರ್ಯನ ಛಾಯಾ ನೆತ್ತರ ಕಾವಲಿ ಹರಿಸಿದಾನೋ ಕಿತ್ತೂರು ನಾಡಾಗ, ಬಾಳ ಬಂಟಸ್ತಾನ ಪದವಿ ಇತ್ತ ಅವಗ, ಸೃಷ್ಟಿಯೊಳಗೆ ಹುಟ್ಟಿ ಬಂದ ಶ್ರೇಷ್ಟನಾಗಿ ಹೋಗಿದಾನ".

ಆತನ ಸಮಾದಿಯೂ ಇವತ್ತಿನವರೆಗೂ ಅನಾಥವಾಗಿಯೇ ಇದೆ. ಯಾವುದೇ ಸುರಕ್ಷತೆ ಇಲ್ಲದಂತಾಗಿದೆ. ಇದು ಸ್ವಾತಂತ್ರ್ಯ ಹೋರಾಟಗಾರನೋರ್ವನಿಗೆ ನಮ್ಮ ಸರ್ಕಾರ ಕೊಡುವ ಮಾನ್ಯತೆ. ರಾಯಣ್ಣನ ಸಮಾಧಿ ಸ್ಥಳದ ಅಭಿವೃದ್ಧಿ ಕುರಿತಾಗಿ ಅನೇಕ ಸರ್ಕಾರಗಳು ಬಂದು ಹೋದವು. ಇಲ್ಲಿಗೂ ಭೇಟಿ ನೀಡಿ ಅನೇಕ ನಾಯಕರು ಭರವಸೆಯನ್ನು ನೀಡಿದರೂ ಅದು ಭರವಸೆಯಾಗಿಯೇ ಉಳಿಯಿತೇ ವಿನಃ ಕೆಲಸ ಮಾತ್ರ ಆಗಲೇ ಇಲ್ಲ. ಆದರೆ ನಮ್ಮ ಸಮಾಜ ರಾಯಣ್ಣನನ್ನು ದೇವತಾ ಮನುಷ್ಯನ ಸ್ಥಾನಕ್ಕೆ ಏರಿಸಿದ್ದಾರೆ. ಅಲ್ಲದೆ ಪ್ರತಿ ಅಮವಾಸ್ಯೆ ದಿನದುದು ಜನಜಾತ್ರೆಯ ನೆರೆದಿರುತ್ತದೆ.

ರಾಜ್ಯದ ಉತ್ತರ ಕಾರ್ನಾಟಕದಲ್ಲಷ್ಟೇ ಅಲ್ಲದೇ ದಕ್ಷಿಣ ಮಹಾರಾಷ್ಟ್ರದ ಹಲವು ಭಾಗಗಳಿಂದ ಮಕ್ಕಳಿಲ್ಲದ ದಂಪತಿಗಳು ಬಂದು ರಾಯಣ್ಣನ ಸಮಾಧಿ ಇರುವ ಸ್ಥಳದ ಪಕ್ಕವಿರುವ ಆಲದ ಮರಕ್ಕೆ ತೊಟ್ಟಿಲು ಕಟ್ಟಿ ಮಕ್ಕಳನ್ನು ಪಡೆದಿದ್ದಾರೆ. ಒಟ್ಟಿನಲ್ಲಿ ಸಮಾಜದ ದೃಷ್ಟಿಯಲ್ಲಿ ರಾಯಣ್ಣನೋರ್ವ ದೇವತಾ ಪುರುಷನಾಗಿ ಅಮರತ್ವ ಪಡೆದಿದ್ದಾನೆ. ಪ್ರತಿ ವರ್ಷ ಅಗಷ್ಟ 15ರಂದು ಶೂರ ಸಂಗೊಳ್ಳಿ ರಾಯಣ್ಣನ ಜನುಮದಿನವನ್ನು ಆಚರಿಸಲಾಗುತ್ತದೆ.

# ಹವಾಮಾನದ ಬದಲಾವಣೆಯ ಸವಾಲನ್ನುಎದುರಿಸಲು ಕೃಷಿ ಸಂಶೋಧನೆಯಲ್ಲಿ ಜಿ ಎಂ ಟೆಕ್ನಾಲಜಿ ನೆರವು ಅತ್ಯಗತ್ಯ

ಡಾ॥ ಎಂ. ಮಹದೇವಪ್ಪ

"ಜಾನ್ ಗ್ರಿಗೇರಿ ಮೆಂಡಲ್"ರವರ ಸಂಶೋಧನೆಯ ನಂತರ, ಅವರು ಕಂಡುಹಿಡಿಯಲಾಗಿದ್ದ ಅನುವಂಶ ಶಾಸ್ತ್ರ ನಿಯಮಗಳನ್ನು 1900ನೇ ಇಸವಿಯಲ್ಲಿ ವೈಜ್ಞಾನಿಕ ಎಂದು ಮೂವರು ವಿಜ್ಞಾನಿಗಳು ಪುನರುಚ್ಚರಿಸಿದ ನಂತರ ಆ ನಿಯಮಗಳ ಬಳಕೆ ಆರಂಭವಾಯಿತು. ಆದರೆ, ಅದಕ್ಕೆ ಮುಂಚಿನಂದಲೂ ಲಕ್ಷಾಂತರ ವಿವಿಧ ಬೆಳೆಯ ತಳಿಗಳು ವಿಶ್ವಾದ್ಯಂತ ರೈತರಿಂದಲೇ ಅಭಿವೃದ್ಧಿಪಡಿಸಲ್ಪಟ್ಟು, ವಿಶ್ವಾದ್ಯಂತ ಬೆಳೆಯಲ್ಪಡುತ್ತಿರುವುದು ರೈತರ ಸಾಮರ್ಥ್ಯವನ್ನು ಎತ್ತಿಹಿಡಿಯುತ್ತದೆ. ಕಳೆದ ಎರಡು ಮೂರು ದಶಕಗಳಿಂದ ಜಿ.ಎಂ. (genetically modified) ಬೆಳೆ ಹಾಗೂ ತಳಿಗಳು ಅಲ್ಲಲ್ಲಿ ಬೇಸಾಯದಲ್ಲಿ ಅಳವಡಿಸಲ್ಪಟ್ಟು, ಅವುಗಳ ಬಗ್ಗೆ ಯೂರೋಪ್ ಮತ್ತೆ ಎಲ್ಲೆಲ್ಲಿಯೂ ನಾನಾ ತರಹದ ಅಭಿಪ್ರಾಯಗಳು ಮೂಡಿ ಬಂದಿವೆ. ಈ ಸಂದರ್ಭದಲ್ಲಿ ಇದರ ಬಗ್ಗೆ ಒಂದಷ್ಟು ವೈಜ್ಞಾನಿಕ ವಿಶ್ಲೇಷಣೆ ಅವಶ್ಯಕತೆ ಇದೆ. ಪ್ರಕೃತಿಯಲ್ಲಿ ತಾನಾಗಿಯೇ ಉದ್ಭವಿಸಿ, ಬೆಳೆದು ವಿವಿಧ ತಳಿ ಪ್ರಭೇದಗಳಾಗಿ ಮಾನವನ ಹಾಗೂ ಸಕಲ ಪ್ರಾಣಿಗಳ ಉಳಿವು ಮತ್ತು ಅಭಿವೃದ್ಧಿಗೆ ನೆರವಾಗುತ್ತ ಬಂದಿರುವ ಸಸ್ಯಾದಿ ಜೀವಿಗಳು ಕಾಲಮಾನದ ವೈಪರೀತ್ಯ, ಪರಿಸರದಲ್ಲಿ ಕಂಡುಬರುವ ಏರುಪೇರು ಬದಲಾವಣೆಗಳಿಂದ ಉಗಮಿಸಿರುವಂತಹವು. ಮುಖ್ಯವಾಗಿ, ಅವೆಲ್ಲವೂ ಸ್ವಾಭಾವಿಕವಾಗಿ ನಡೆಯುವ ಪರಕೀಯಪರಾಗ ಸ್ಪರ್ಷ ಮತ್ತು ಪರಿವರ್ತನೆ (ಮ್ಯುಟೇಷನ್) ಕ್ರಿಯೆಗಳಿಂದ ಉಗಮಿಸಿರುವಂತಹವು. ಆ ಸಂಖ್ಯೆ ಹೆಚ್ಚಾಗುತ್ತಾ ಬಂದಂತೆ, ಮಾನವನು ಅನುವಂಶಿಕಶಾಸ್ತ್ರದ ಸೂತ್ರಗಳನ್ನು ಅನುಸರಿಸಿ, ತನಗೆ ಬೇಕಾದಂತಹ ತಳಿಗಳನ್ನು ಸೃಷ್ಟಿಸುವುದರಲ್ಲಿ ಸಫಲನಾಗಿ, ಸಸ್ಯ ತಳೀಕರಣ ಎಲ್ಲೆಲ್ಲಿಯೂ ಅಳವಡಿಕೆಗೆ ಬಂದು, ನೂತನ ತಳಿಗಳು ಅಗಣಿತ ಸಂಖ್ಯೆಯಲ್ಲಿ ಬಳಕೆಗೆ ಬಂದವು. ಸಸ್ಯ–ತಳೀಕರಣ ಶಾಸ್ತ್ರ ಜನಪ್ರಿಯವಾಗಿ ಪ್ರಭಾವ ಬೀರಿತು. ಕಳೆದ ೫–೬ ದಶಕಗಳಲ್ಲಿ ವಿಶ್ವದಾದ್ಯಂತ ಸಾವಿರಾರು ಸಂಕರ ತಳಿಗಳು ಪ್ರಚಲಿತವಾದವು. ಕೃತಕ ಸಂಕರಣ ಯಾವುದೇ ಒಂದು ಪ್ರಭೇ/ಪ್ರಜಾತಿಗೆ (ಸ್ಪಿಶೀಸ್) ಸೇರಿದ ತಳಿಗಳನ್ನು ಮಾತ್ರ ಒಂದಕ್ಕೊಂದನ್ನು ಸಂಕರಿಸಲು (ಕ್ರಾಸ್) ಸಾಧ್ಯವಾಯಿತೇ ಹೊರತು, ಒಂದು ಪ್ರಭೇದವನ್ನು ಇನ್ನೊಂದು ಪ್ರಭೇದದ ಜೊತೆ ಸಂಕರಿಸಲು ಆಗುತ್ತಿರಲಿಲ್ಲ. ಇದನ್ನು ಸಾಧ್ಯ ಮಾಡಿಸುವ ದಿಕ್ಕಿನಲ್ಲಿ ಸಂಶೋಧನೆ ಮುಂದುವರಿದ ಕಾರಣ ಈಗ ಕರೆಯುವ "ಜೆನಿಟಿಕ್ ಇಂಜಿನಿಯರಿಂಗ್" ಒಳಗೊಂಡ ಜೈವಿಕತಂತ್ರಜ್ಞಾನ (ಬಯೋಟೆಕ್ನಾಲಜಿ), ಅಧ್ಯಯನಕ್ಕೆ ಒಂದು ಹೊಸ ವಿಷಯವಾಗಿ ಎಲ್ಲೆಲ್ಲಿಯೂ ಪಠ್ಯಕ್ರಮಗಳಲ್ಲಿ ಸೇರ್ಪಡೆಯಾಗಿ ಅಳವಡಿಸಲಾಯಿತು.

ಸಸ್ಯ ತಳೀಕರಣದಲ್ಲಿ 'ಜೆನಿಟಿಕ್ ಇಂಜಿನಿಯರಿಂಗ್' ಮತ್ತು ಇತರೇ ಜೈವಿಕತಂತ್ರಜ್ಞಾನ ತಾಂತ್ರಿಕತೆಗಳನ್ನು ಅಳವಡಿಸಿ "ಅಸ್ವಾಭಾವಿಕ"ವಾದ, ಅಂದರೆ ಈಗಾಗಲೇ ಚಾಲ್ತಿಯಲ್ಲಿಲ್ಲದ ಗುಣಗಳನ್ನು ಕ್ರೋಢೀಕರಿಸಿದ ಕಾರಣ ಪರಿಸರವಾದಿಗಳಿಂದ ಮತ್ತು ಇನ್ನೂ ಕೆಲವರಿಂದ ಆಕ್ಷೇಪವಿದೆ. ಕೇವಲ ಧಾನ್ಯಗಳ ಇಳುವರಿ ಹೆಚ್ಚಳ, ಸಕ್ಕರೆ ಅಂಶ ಹೆಚ್ಚಳ, ಬೆಳೆಯ ಅವಧಿ ಹೆಚ್ಚು ಕಡಮೆ ಮಾಡುವುದು, ರೋಗ ರುಜಿನ ಹಾಗೂ ಅಹಿತ ಹವಾಮಾನಕ್ಕೆ (ಹೆಚ್ಚು ಚಳಿ ಹಾಗೂ ಉಷ್ಣಾಂಶ, ಬರಗಾಲದಲ್ಲಿ ಹುಲುಸಾಗಿ ಬೆಳೆಯಬಲ್ಲ ಗುಣ, ಇತ್ಯಾದಿ) ಹೊಂದಿಕೊಳ್ಳುವ ಗುಣ ಸೇರ್ಪಡೆ ಮಾಡಲು, ಮೇವಿನ ಇಳುವರಿ ಹೆಚ್ಚಳ; ಇಂತಹ ಗುಣ ಬದಲಾವಣೆಗೆ ಈ ತಾಂತ್ರಿಕತೆ ಬಳಸಿದರೆ ಅಥವಾ "ಸ್ವಾಭಾವಿಕ ಗುಣಗಳನ್ನಷ್ಟೇ ಕ್ರೋಡೀಕರಿಸುವುದಾದರೆ ಅದಕ್ಕೆ ಆಕ್ಷೇಪಣೆ ಇರಬಾರದು. ಈವರೆಗೆ ವಿಶ್ವದಾದ್ಯಂತ ಅನೇಕ ಸಾಧಾರಣ ತಳಿಗಳು ಮತ್ತು ಸಂಕರ ತಳಿಗಳು ಅಭಿವೃದ್ಧಿಪಡಿಸಲ್ಪಟ್ಟಿವೆ ಮತ್ತು ಇವುಗಳಿಂದ ಬಹಳಷ್ಟು ಮಟ್ಟಿಗೆ ಆಹಾರದ ಕೊರತೆಯನ್ನು ನೀಗಿಸಲಾಗಿದೆ. ಅದೇರೀತಿ "ಜೆನಿಟಿಕ್ ಇಂಜಿನಿಯರಿಂಗ್" ಅಥವಾ ಜಿ.ಎಂ. ತಾಂತ್ರಿಕತೆಯೂ ಸಹ ಒಂದು ತಂತ್ರಜ್ಞಾನವಾಗಿದೆ. ಒಂದು ಮಿತಿಯೊಳಗೆ ವೈಜ್ಞಾನಿಕವಾಗಿ ಪ್ರತಿಯೊಬ್ಬರ ಒಪ್ಪಿಗೆಯನ್ನೂ ಪಡೆಯುವಂತಹ ಯೋಜನೆಗಳನ್ನು ರೂಪಿಸಿ, ನಂತರವೇ ಅನುಷ್ಠಾನಕ್ಕೆ ತರುವುದರಿಂದ ಈ ವಿಧಾನದಿಂದ ಅಪರಿಮಿತವಾದ ಪ್ರಯೋಜನವನ್ನು ಪಡೆಯಲು ಸಾಧ್ಯವಾದೀತು. ಇಂತಹ ಯಾವುದೇ ಒಂದು ಜಿ.ಎಂ. ತಳಿಯನ್ನು ಅಭಿವೃದ್ಧಿಪಡಿಸಿದ ನಂತರ ಅದನ್ನು ರೈತರ ಭೂಮಿಯಲ್ಲಿ ಪರೀಕ್ಷಿಸಲು ಭಾರತದಲ್ಲಿನ "ಜೈವಿಕಸುರಕ್ಷತಾ ಸಮಿತಿ"ಯ ಒಪ್ಪಿಗೆ ದೊರಕಿದ ಮೇಲಷ್ಟೇ ಅದನ್ನು ರೈತರಿಗೆ ಬಿಡುಗಡೆಮಾಡುವ ವಿಧಿ ವಿಧಾನ ಜಾರಿಯಲ್ಲಿರುವುದರಿಂದ ಅದನ್ನು ಪಾಲಿಸುವಂತೆ ಗಮನವಿಡಬೇಕಾದುದು ಸರಿ ಹಾಗೂ ಅನಿವಾರ್ಯ.

ಅಮೇರಿಕ, ಅರ್ಜೆಂಟೈನ, ಫಿಲಿಪ್ಪೈನ್ಸ್, ಬಾಂಗ್ಲಾದೇಶ, ಚೀನಾ, ಮೊದಲಾದ ಅನೇಕ ದೇಶಗಳಲ್ಲಿ ಈಗಾಗಲೇ ಇದರಿಂದ ಹೆಚ್ಚು ಪ್ರಯೋಜನ ಪಡೆಯಲಾಗಿದೆ. ಭಾರತದಲ್ಲಿಯೂ ಸಹ ಬಿ.ಟಿ. ಹತ್ತಿಯಿಂದ ಉತ್ಪಾದಕತೆ ಹೆಚ್ಚು ಮಾಡಲು ಸಾಧ್ಯವಾಗಿದೆ. ಇನ್ನೂ ೧೪–೧೫ ಬೆಳೆಗಳಲ್ಲಿ ಜಿ. ಎಂ. ತಳಿಗಳು ಮುಂದಿನ ದಶಕದಲ್ಲಿ ಬಿಡುಗಡೆಯಾಗಲಿವೆ. ಅಸ್ವಾಭಾವಿಕ ತಳಿಗಳು ಬಾರದಂತೆ ನೋಡಿಕೊಳ್ಳಲು, ವಿವಿಧ ಹಂತಗಳಲ್ಲಿ ವೀಕ್ಷಿಸಲು ಕೇಂದ್ರ ಸರ್ಕಾರವು "ಬಯೋಸೇಫ್ಟಿ ಕಮಿಟಿ"ಯನ್ನು ರಚಿಸಿರುವುದು ಈ ದಿಕ್ಕಿನಲ್ಲಿ ವೀಕ್ಷಣೆ ಮಾಡುತ್ತಿದೆ. ಈ ವಿಷಯದಲ್ಲಿ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸುವ ಹಾಗೂ ಈ ಟೆಕ್ನಿಕ್ ಅನ್ನು ಪ್ರಕೃತಿ–ವಿರೋಧಿಯಾಗದ ರೀತಿಯಲ್ಲಿ ನೋಡಿಕೊಳ್ಳುವ ಅವಶ್ಯಕತೆ ಇದೆ. ಇದರ ಬಳಕೆಗೆ, ಸದ್ಯದಲ್ಲಿ ಇರುವ ಕೊರತೆಯೆಂದರೆ, ಟೆಕ್ನಾಲಜಿ ಬಹಳ ವೇಗವಾಗಿ ಬೆಳೆಯುತ್ತಿರುವುದು, ಯಾವುದು

ಬೇಕು, ಯಾವುದು ಬೇಡ, ಎಂದು ನಿರ್ಧರಿಸಿ ಮಾರ್ಗದರ್ಶನ ನೀಡಬೇಕಾದ ಸರ್ಕಾರಿ ವ್ಯವಸ್ಥೆ ಬಹಳ ಹಿಂದೆ ಬಿದ್ದಿದೆ. ಸರ್ಕಾರ ಇದನ್ನು ಎಷ್ಟು ಬೇಗ ಗಮನಿಸಿ, ತ್ವರಿತವಾಗಿ ಮಾರ್ಗದರ್ಶನ ನೀಡುತ್ತದೋ ಅಷ್ಟರ ಮಟ್ಟಿಗೆ ಸಾರ್ವಜನಿಕರಲ್ಲಿ ಮತ್ತು ರೈತರಲ್ಲಿ ಉಂಟಾಗಬಹುದಾದ ಸಂಶಯಗಳಿಗೆ ಉತ್ತರ ನೀಡಿ ವಿಜ್ಞಾನಿಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಇಂತಹ ಯೋಜನೆಗಳಿಗೆ ನೀಡಿದ ಧನಸಹಾಯ ವ್ಯರ್ಥವಾಗದೆ ಸದುಪಯೋಗವಾಗುತ್ತದೆ. ಅಲ್ಲದೆ, ಈ ತಾಂತ್ರಿಕತೆಯಿಂದ ಪಡೆಯಬಹುದಾದ ಲಾಭವನ್ನು, ಯಾವುದೇ ಅಡ್ಡಿ ಆತಂಕಗಳಿಲ್ಲದೆ ಮುಂದುವರಿಸಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಈ ಟೆಕ್ನಾಲಜಿಯ ದೀರ್ಘಕಾಲದ ಪರಿಣಾಮವನ್ನು, ಕಾಲವೇ ಮಾತ್ರ ಹೇಳಬಲ್ಲದು. ಯಾವುದಕ್ಕಾಗಿ ಇದನ್ನು ಉಪಯೋಗಿಸಬಹುದು ಎಂಬುದು ವಿವಾದಾಸ್ಪದ; ಆದರೆ ಬಳಕೆಯಿಂದ ಪ್ರಯೋಜನ ಪಡೆಯಬಹುದೆಂಬುದು ನಿರ್ವಿವಾದ. ತಡೆ ಇಲ್ಲದೆ ಏರುತ್ತಿರುವ ಜನಸಂಖ್ಯೆಯ ಬೇಡಿಕೆಗಳ ಪೂರೈಕೆಗೆ ಈ ತಾಂತ್ರಿಕತೆಯ ನೆರವಿನ ಅಗತ್ಯವಿದೆ ಎಂಬುದು ವಿವಾದಾತೀತ.

ಬಿ.ಟಿ. ಬದನೆ ವಿರೋಧಿಗಳು, ಅದನ್ನು ಬೇಡವೆನ್ನಲು ಮುಂದಿಡುವ ಪ್ರಮುಖ ಕಾರಣಗಳಲ್ಲಿ ಒಂದು ಎಂದರೆ, ಈ ಬದನೆಯ ಬೀಜಕ್ಕೆ ಅಮೇರಿಕಾ ಅಥವಾ ಬಹುರಾಷ್ಟ್ರೀಯ ಕಂಪನಿಗಳನ್ನು ಅವಲಂಬಿಸಬೇಕಾಗಿದ್ದು, ರೈತರ ಸುಲಿಗೆಯಾಗುತ್ತದೆಂಬುದು. ಆದರೆ, ಬಿ.ಟಿ. ಬದನೆ "ಮೊರಟೋರಿಯಂ"ನಿಂದ ಬಹುರಾಷ್ಟ್ರೀಯ ಕಂಪನಿಗಳ ಬೀಜಕ್ಕೆ ಹೆಚ್ಚು ಬೇಡಿಕೆಗೆ ಅವಕಾಶ ಕಲ್ಪಿಸಿಕೊಟ್ಟಂತಾಗಿದೆ ಎನ್ನುವ ಅರಿವು ನಾಯಕರು, ಅಧಿಕಾರಿಗಳು ಮತ್ತು ರೈತರಿಗೆ ಇಲ್ಲದಿರುವುದು ವಿಷಾದನೀಯ! ಕೃಷಿ ವಿಶ್ವವಿದ್ಯಾಲಯಗಳಿಂದ ಮತ್ತು "ಐ.ಸಿ.ಎ.ಆರ್."ನ ಸಂಸ್ಥೆಗಳಿಂದ ಅಭಿವೃದ್ಧಿಪಡಿಸಲಾದ ಸಂಕರಣೇತರ ಬಿ.ಟಿ. ಬದನೆಯ ಬಳಕೆ ಬಂದಿದ್ದ ಪಕ್ಷದಲ್ಲಿ, ರಾಸಾಯನಿಕ ಕೀಟನಾಶಕಗಳ ಉಪಯೋಗ ಗಣನೀಯ ಪ್ರಮಾಣದಲ್ಲಿ ಕಡಮೆಯಾಗುತ್ತಿತ್ತಲ್ಲದೆ, ರೈತರೇ ಸ್ವತಃ ಬೀಜೋತ್ಪಾದನೆ ಮಾಡಿಕೊಳ್ಳಬಹುದಾಗಿತ್ತು, ಮತ್ತು ರೈತರ ಆದಾಯ ಗಣನೀಯವಾಗಿ ಏರುತ್ತಿತ್ತು. ಈ ಸತ್ಯಾಂಶಗಳ ಅರಿವಿನ ಕೊರತೆ ಇರುವುದು ನಿಜಕ್ಕೂ ವಿಪರ್ಯಾಸ. ಬಾಂಗ್ಲಾದೇಶವು, ನಾವು ಮಾಡಿದ ಸಂಶೋಧನೆಯ ಫಲವನ್ನು ಅನುಭವಿಸುತ್ತಿರುವುದನ್ನು ಮೆಚ್ಚಬೇಕು. ಅಲ್ಲದೆ ಬಿ.ಟಿ. ಹತ್ತಿಯಲ್ಲಾದಂತೆ ಈಗಲೂ ಬಾಂಗ್ಲಾದೇಶದಿಂದ ಭಾರತದ ಅಕ್ಕ ಪಕ್ಕದ ರಾಜ್ಯಗಳ ರೈತರು ಬಿ.ಟಿ. ಬದನೆ ಬೀಜವನ್ನು ಕದ್ದು ತರಿಸಿ ಬೆಳೆಯುತ್ತಿರುವುದಾಗಿ ವದಂತಿಗಳಿವೆ! ನಮ್ಮ ಸರ್ಕಾರಗಳು ಹಿಂದೆ ಬಿದ್ದಿವೆ ಎನ್ನುವುದಕ್ಕೆ ಇದಕ್ಕಿಂತಲೂ ಬೇರೆ ಉದಾಹರಣೆ ಬೇಕಿಲ್ಲ.

ಒಂದು ಉದಾಹರಣೆಯನ್ನು ಇಲ್ಲಿಕೊಡುವುದು ಸೂಕ್ತ. ಬಿ.ಟಿ. ಹತ್ತಿಯ ಬಗ್ಗೆ ಬಹಳ ವಿರೋಧವಿದ್ದುದು ಎಲ್ಲರಿಗೂ ತಿಳಿದಿರುವ ವಿಷಯ. ಅದರಿಂದ ಏನೂ ದುಷ್ಪರಿಣಾಮ ಇಲ್ಲ ಎಂದು ಅರಿತು ಈಗ ಎಲ್ಲರೂ, ಮುಂಚೆ ಅದನ್ನು ವಿರೋಧಿಸುತ್ತಿದ್ದವರೂ ಸಹ, ಬಿ.ಟಿ. ಹತ್ತಿಯನ್ನೇ ಬೆಳೆಯುತ್ತಿರುವುದನ್ನು ರಾಷ್ಟ್ರದ ಹತ್ತಿ ಬೆಳೆಯುವ ಎಲ್ಲಾ ಪ್ರದೇಶಗಳಲ್ಲೂ ನೋಡಬಹುದು. ಅಲ್ಲದೆ, ಭಾರತ ಹತ್ತಿ ಉತ್ಪಾದನೆಯಲ್ಲಿ 13ನೇ ಪಂಚವಾರ್ಷಿಕ ಯೋಜನೆಯ ಗುರಿಯನ್ನು ಈಗಲೇ ಅಂದರೆ 2011 ನೇ ಸಾಲಿನಲ್ಲೇ ಮುಟ್ಟಲು ಸಾಧ್ಯವಾದದ್ದು ಮತ್ತು ವಿಶ್ವದಲ್ಲಿ ಐದನೇ ಸ್ಥಾನದಿಂದ ಎರಡನೇ ಸ್ಥಾನಕ್ಕೆ ಏರಿರುವುದು ಬಿ.ಟಿ. ಹತ್ತಿಯ ಬಳಕೆಯಿಂದ ಎಂಬ ಸತ್ಯವನ್ನು ಯಾರೂ ಅಲ್ಲಗಳೆಯಲಾಗುವುದಿಲ್ಲ. ಜೊತೆಗೆ ಹತ್ತಿ ಬೆಳೆಗಾಗಿ ಉಪಯೋಗಿಸಲಾಗುತ್ತಿದ್ದ ಕ್ರಿಮಿನಾಶಕಗಳನ್ನು ಸುಮಾರು ಶೇಕಡಾ ೫೦ರಷ್ಟು ಪ್ರಮಾಣಕ್ಕೆ ಇಳಿಸಲು ಸಾಧ್ಯವಾಗಿರುವುದು ಒಂದು ಮಹತ್ ಸಾಧನೆ ಎಂಬುದನ್ನು ಯಾರೂ ಅಲ್ಲಗಳೆಯಲಾಗದು.

**ತಳಿಗಳ ಜನಕರು ರೈತರು ಮತ್ತು ಕೃಷಿ ವಿಜ್ಞಾನಿಗಳು**

ವೈಜ್ಞಾನಿಕವಾಗಿ ತಳೀಕರಣ ಮತ್ತು ಮಿಶ್ರತಳಿ ಕಂಡುಹಿಡಿಯುವುದು ಆರಂಭವಾದದ್ದು ೨೦ನೇ ಶತಮಾನದ ಆದಿಯಲ್ಲಿ. ಆದರೆ ಕೃಷಿ ವೃತ್ತಿ ಅನಾದಿ ಕಾಲದಿಂದಲೂ ಬೆಳೆದು ಬಂದು ಜೀವನೋಪಾಯದ ಎಲ್ಲಾ ಬೇಡಿಕೆಗಳನ್ನು ಪೂರೈಸಿತಾದರು ಹೇಗೆ? ಪುರಾತನ ಅಥವಾ ಸಾಂಪ್ರದಾಯಕ ಅಥವಾ ಸ್ಥಳೀಯ ಅಥವಾ ಪ್ರಾಚೀನ ಹೀಗೆ ಅನೇಕ ತಳಿಗಳ ಸೃಷ್ಟಿ ಕರ್ತಯಾರು? ಹೀಗೆ ಕೆಲವು ಪ್ರಶ್ನೆಗಳು ಉದ್ಭವಿಸುವುದು ಸಹಜ. ಪ್ರಾಚೀನ ತಳಿಗಳು ಇತ್ತೀಚಿನ ಅನೇಕ ಬೆಳೆಗಳು ಮತ್ತು ಪ್ರತಿ ಬೆಳೆಯ ವಿವಿಧ ತಳಿಗಳನ್ನು ಸಂಗ್ರಹಿಸಿ, ಉತ್ತಮ ಗುಣಮಟ್ಟ ಹೊಂದಿರುವ ಪ್ರಭೇಧಗಳನ್ನು ಹುಡುಕಿ ಅಭಿವೃದ್ಧಿಪಡಿಸಿ ಅವುಗಳಿಂದ ಹೊಟ್ಟೆ, ಬಟ್ಟೆ, ನೆರಳು, ಪ್ರತಿಯೊಂದಕ್ಕೂ ಅಂದರೆ, ಜನರ ನಿತ್ಯ ಬಳಕೆ ಹಾಗೂ ಬೇಡಿಕೆಗಳನ್ನು ಪೂರೈಸಲು ನೆರವಾಗಲು ಬೇಕಾದ ಬೆಳೆ ಮತ್ತು ತಳಿಗಳನ್ನು ಆಯಾ ನಾಗರೀಕತೆ ಮತ್ತು ಪ್ರದೇಶಗಳಿಗೆ ಹೊಂದಿಕೊಳ್ಳುವಂತಹ ಗುಣಮಾದರಿಗಳನ್ನು ಹೊಂದಿರುವ ಬೆಳೆ ಅಥವಾ ತಳಿಗಳ ಸೃಷ್ಟಿ ಅಥವಾ ನಿರ್ಮಾಣವಾದದ್ದು ರೈತ ಮತ್ತು ರೈತ ಸಮುದಾಯಗಳಿಂದ ಎಂಬುದನ್ನು ಎಲ್ಲರೂ ಒಪ್ಪಲೇಬೇಕಾದ ಸತ್ಯ ಸಂಗತಿ. ಇಂತಹ ತಳಿಗಳ ಸಂಖ್ಯೆ ಎಣಿಸಲಾಗದಷ್ಟು! ಗಮನಕ್ಕೆ ಬಾರದೆ ನಶಿಸಿಹೋಗಿರುವುದೆಷ್ಟೋ! 1900ನೇ ಇಸವಿಯಿಂದ ಈಚೆಗೆ, ಅನುವಂಶ ಶಾಸ್ತ್ರ (ಜೆನಿಟಿಕ್ಸ್) ಮತ್ತು ತಳೀಕರಣ ಶಾಸ್ತ್ರ ಬೆಳೆದು ಬಂದಂತೆ ಹೊಸ ಹೊಸ ತಳಿಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಕೃಷಿ ವಿಜ್ಞಾನಿಗಳ ಪಾತ್ರ ಮಹತ್ವ ಪಡೆದುಕೊಂಡಿದೆ ಮತ್ತು ರೈತರೊಡನೆ ಕೈ ಜೋಡಿಸಿ ತಳೀಕರಣ ಸಾಗುತ್ತದೆ ಎಂಬುದನ್ನು ಮೂಲಭೂತವಾದಿಗಳು ಗಮನಿಸಿ, ಏರುತ್ತಿರುವ ಆಹಾರಗಳ ಬೇಡಿಕೆ ಪೂರೈಸುವಲ್ಲಿ ನೆರವಾಗುವುದು ಅನಿವಾರ್ಯ.

**ಸಾವಯವ ಕೃಷಿ ಮತ್ತು ವಂಶಾಂತರಿ ತಳಿಗಳು**

ಸಾವಯವ ಕೃಷಿಗೂ ಜಿ.ಎಮ್. ತಳಿಗಳಿಗೂ ಸಂಬಂಧ ಕಲ್ಪಿಸುವುದು ವೈಜ್ಞಾನಿಕವಾಗಿ ಸರಿಯಲ್ಲ. ಏಕೆಂದರೆ ಸಾವಯವ ಕೃಷಿಯು ಯಾವುದೇ ತಳಿ ಮತ್ತು ಬೆಳೆಯನ್ನು ಬಿತ್ತನೆಮಾಡಿ, ಪೋಷಿಸಿ ಬೆಳೆಯುವ ವಿಧಾನವಷ್ಟೆ. ಒಳಸುರಿಗಳನ್ನು ಬಳಸುವಾಗ ಕ್ರಿಮಿನಾಶಕ ರಸಗೊಬ್ಬರಗಳ ಬಳಕೆ ಮಾಡುವುದರಲ್ಲಿಎಚ್ಚರಿಕೆ/ಇತಿ ಮಿತಿಇರಬೇಕೆಂದು ವಾದಿಸಲಾಗುತ್ತಿದೆ. ಇದನ್ನು ತಪ್ಪಾಗಿ ಅರ್ಥೈಸಬಾರದು. ಅಲ್ಲದೆ, ಜಿ.ಎಮ್. ತಳಿಗಳನ್ನು ಬಿಡುಗಡೆ ಮಾಡಿದ ಮಾತ್ರಕ್ಕೆ, ಅವುಗಳನ್ನು ಬೆಳೆಯಲೇಬೇಕು, ಇತರೇ ತಳಿಗಳನ್ನು ಬೆಳೆಯಬಾರದೆಂಬ ನಿರ್ಬಂಧವಿಲ್ಲ. ಅದು ರೈತರಿಗೆ

ಬಿಟ್ಟಿದ್ದು. ನಿಸರ್ಗದಲ್ಲಿ ಸದಾ ನಡೆಯುತ್ತಲೇ ಇರುವ ಉತ್ಪರಿವರ್ತನೆ (ಮ್ಯುಟೇಷನ್) ಮತ್ತು ಮಾನವನ ಇಚ್ಛೆಯಂತೆ ಅಭಿವೃದ್ಧಿಪಡಿಸಲ್ಪಟ್ಟ ಜಿ.ಎಮ್. ತಳಿಗಳಿಂದ ಜೈವಿಕ ವೈವಿಧ್ಯತೆ ವಿಕಾಸಗೊಳ್ಳುತ್ತದೆಯೇ ಹೊರತು, ಜಿ.ಎಂ. ತಳಿಗಳಿಂದ ಜೈವಿಕ ವೈವಿದ್ಯತೆ ಕ್ಷೀಣಿಸುತ್ತದೆ ಎಂಬುದಕ್ಕೆ ಆಧಾರವಿಲ್ಲ. ಯಾವುದೇ ಹೊಸ ಗುಣಗಳುಳ್ಳ ಸಸ್ಯವು, ಅದರ 'ಉಳಿವಿನ ಅಗತ್ಯತೆ'ಯನ್ನು (survival value) ಅವಲಂಬಿಸಿರುತ್ತದೆಯಷ್ಟೆ.

ಕಳೆದ ಎರಡು ದಶಕಗಳಲ್ಲಿ(1996–2015) ಜಿ.ಎಂ. ತಳಿಗಳು ವಿಶ್ವಾದ್ಯಂತ 28 ದೇಶಗಳಲ್ಲಿ, 180 ಮಿಲಿಯನ್ ಹೆಕ್ಟೇರು ಪ್ರದೇಶದಲ್ಲಿ ಬೆಳೆಯತ್ತಿರುವುದಕ್ಕೆ ಮತ್ತು ಇದರಿಂದಾಗಿ ಶೇಕಡಾ 22ರಷ್ಟು ಇಳುವರಿ ಹೆಚ್ಚಾಗಿರುವುದಕ್ಕೆ ಹಾಗೂ ಕ್ರಿಮಿಕೀಟ ನಾಶಕಗಳ ಬಳಕ್ಕೆ ಶೇಕಡಾ 37ರಷ್ಟು ಕಡಮೆಯಾಗಿರುವುದಕ್ಕೆ ಉಲ್ಲೇಖಗಳಿವೆ (Qiam *et al*, 2014).

**ಇದಕ್ಕೆಲ್ಲಾ ಕಾರಣರಾರು? ಕೃಷಿ ತಜ್ಞರು ಮತ್ತು ವಿಜ್ಞಾನಿಗಳೂ ಪಾಲುದಾರರು**

ಇಷ್ಟಕ್ಕೂ, ಇದಕ್ಕೆಲ್ಲಾ ಕಾರಣರಾರು? ಎಂಬ ಪ್ರಶ್ನೆಗೆ ಉತ್ತರ ಹುಡುಕಬೇಕಾಗಿಲ್ಲ! ಆವಿಷ್ಕಾರಗಳು ಸತತವಾಗಿ ನಡೆಯತ್ತಲೇ ಇರುತ್ತವೆ. ತಾಂತ್ರಿಕತೆ ಶರವೇಗದಲ್ಲಿ ಅಭಿವೃದ್ಧಿಗೊಳ್ಳುತ್ತಿದೆ. ಆದರೆ, ರೈತರಿಗೆ ಸಂಬಂಧಪಟ್ಟ ಕೃಷಿ ತಂತ್ರಜ್ಞಾನಗಳು, ಕೃಷಿಯೇತರ ಅಥವಾ ಔದ್ಯೋಗಿಕ ತಂತ್ರಜ್ಞಾನಗಳು ಬಳಕೆಗೆ ಬರುತ್ತಿರುಷ್ಟು ವೇಗದಲ್ಲಿ ಬಳಕೆಗೆ ಬಾರದೆ, ನೂತನ ತಂತ್ರಜ್ಞಾನಗಳಿಂದ ಪಡೆಯಬಹುದಾದ ಲಾಭ ಕುಂಠಿತ ಗೊಳ್ಳುತ್ತಿರುವುದು ಒಂದು ವಿಪರ್ಯಾಸ. ವಿಸ್ತರಣಾ ಕಾರ್ಯಕ್ರಮಗಳಲ್ಲಿ ತೊಡಗಿರುವ ಕೃಷಿ ತಜ್ಞರು ಮತ್ತು ವಿಜ್ಞಾನಿಗಳು ಅರಿವು ಉಂಟುಮಾಡುವಲ್ಲಿ ಬಹಳ ಹಿಂದೆ ಇರುವುದು ಇದಕ್ಕೆ ಬಹು ಪಾಲು ಕಾರಣವೆನ್ನಬಹುದು. ಇದನ್ನು ಅರಿತು ಕೃಷಿ ಅಭಿವೃದ್ಧಿಗೆ ಸಂಬಂಧಪಟ್ಟ ಎಲ್ಲರೂ (ತಳಿವಿಜ್ಞಾನಿಗಳು ತಜ್ಞರು, ವಿಸ್ತರಣಾಧಿಕಾರಿಗಳು, ನಾಯಕರು, ಆಡಳಿತದ ಚುಕ್ಕಾಣಿ ಹಿಡಿದಿರುವವರುವರು, ಸಾಹಿತಿಗಳು, ವಿದ್ಯಾರ್ಥಿ ಗಳು ರೈತ ಮುಂದಾಳುಗಳು) ಈ ವಿಜ್ಞಾನದ ಬಗ್ಗೆ ಅರಿವು ಉಂಟುಮಾಡಬೇಕಾಗಿದೆ.

●




## ಜಿ.ಎಮ್. ತಳಿಗಳು

**ಡಾ॥ ಎಂ. ಮಹದೇವಪ್ಪ**

ಉತ್ಪರಿವರ್ತನೆ ಹಾಗೂ ಪರಕೀಯ ಪರಾಗಸ್ಪರ್ಶ ನಿಸರ್ಗದ ನಿಯಮ
ಈ ಕ್ರಿಯೆಗಳಿಂದಲೇ ನಡೆದಿದೆ, ಪ್ರಕೃತಿಯಲಿ ಜೈವಿಕ ವೈವಿಧ್ಯತೆಯ ಉಗಮ
ಇದ ಅರಿತು ಪ್ರಯೋಜನ ಪಡೆದರಾದರೆ, ರೈತರ ದಾರಿ ಉದ್ದಕ್ಕೂ ಸುಗಮ

'ಜಿ,ಎಮ್. ತಳಿ ಅಂದ ಮಾತ್ರಕ್ಕೆ ಭಯಪಡಲು ಕಾರಣವಿಲ್ಲ
ಕಡಿವಾಣವಿಲ್ಲದೆ 'ಜಿ.ಎಮ್.' ತಳಿಗಳ ಉತ್ಪಾದನೆಯೂ ಸಲ್ಲ
ಇದಕಾಗಿ ಕೇಂದ್ರ ರಚಿಸಿದ "ಬಯೋಸೇಫ್ಟಿ ಸಮಿತಿ" ಇದೆಯಲ್ಲ

ನಿಸರ್ಗದೊಡನೆ ಮಾನವ ನಡೆದರೆ ಯಾವುದೇ ಭಯ ಬೇಕಿಲ್ಲ
ನಿಸರ್ಗದ ವಿರೋಧ ಸಂಶೋಧಿಸಿದರೆ ಜೀವಕೋಟಿಗೆ ಭವಿಷ್ಯವಿಲ್ಲ
ಇದರ ಅರಿವಿಲ್ಲದೆ ಸಂಶೋಧಕರನ್ನು ಅನುಮಾನಿಸುವುದು ಬೇಕಿಲ್ಲ

ಅಕ್ಕಿಯಲಿ "ಎ" ಅನ್ನಾಂಗ ಸೇರ್ಪಡಿಸಿದ್ದು 'ಜಿ.ಎಮ್.' ತಾಂತ್ರಿಕತೆ
ಹತ್ತಿಯಲಿ ಕೀಟನಾಸಕ ಸಿಂಪರಣೆ ಖರ್ಚು ಇಳಿಸಿದ್ದು ಇದೇ ತಾಂತ್ರಿಕತೆ
ವಂಶವಾಹಿಗಳ ಜೋಡಿಸುವಲ್ಲಿ ವಹಿಸಬೇಕು ಜಾಗರೂಕತೆ

ವಿಜ್ಞಾನಿ–ರೈತ ಸಹಭಾಗಿತ್ವ ಸಂಶೋಧನೆಯ ಸುಗಮ ಮಾರ್ಗವಾಗಲಿ
ಅರಿಯದೇ ವಿರೋಧಿಸುವವರಿಗೆ ಅರಿವು ಉಂಟುಮಾಡುವ ಪರಿಪಾಠ ಬರಲಿ
ರೈತಮಿತ್ರ ವಂಶವಾಹಿಗಳ ಶುದ್ಧ ಸಂಕಲನಕ್ಕೆ ಪ್ರೋತ್ಸಾಹ ಸಿಗಲಿ

"ಕುಲಾಂತರಿ" ಎಂಬುದು ತಪ್ಪು, "ವಂಶಾಂತರಿ" ಎಂಬುದು ಒಪ್ಪು.

# ಮೈಸೂರಿನ ಭತ್ತದ ತಳಿ ಸಂರಕ್ಷಕ ರೈತರಿಗೆ ರಾಷ್ಟ್ರ ಪ್ರಶಸ್ತಿ

**ಡಾ॥ ಅರುಣ್ ಬಳಮಟ್ಟಿ ಮತ್ತು ಶ್ರೀಮತಿ ಹೆಚ್.ವಿ. ದಿವ್ಯ**

ಹಲವಾರು ವರ್ಷಗಳಿಂದ ಸ್ವಯಂ ಸ್ಫೂರ್ತಿಯಿಂದ ಅಪರೂಪದ ದೇಸಿ ತಳಿಗಳ ಸಂರಕ್ಷಣೆಯಲ್ಲಿ ದೇಶದಾದ್ಯಂತ ಅನೇಕ ರೈತರು ತೊಡಗಿಕೊಂಡಿದ್ದಾರೆ. ಇಂತಹ ತಪಸ್ವೀ ರೈತರಿಗೆ ಮೈಸೂರು ಜಿಲ್ಲೆಯಲ್ಲೇನೂ ಕೊರತೆಯಿಲ್ಲ. ದೇಸಿ ಭತ್ತದ ತಳಿ ಸಂರಕ್ಷಣೆಯಲ್ಲಿ ಸಾಧನೆಗೈದ ಮಾದ್ರಳ್ಳಿಯ ಎಂ.ಕೆ. ಶಂಕರಗುರು ಹಾಗು ಹೊಸಮಾಲಂಗಿಯ ಎಂ. ರೇಚಣ್ಣರವರು ಇದೀಗ ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸಸ್ಯ ತಳಿಗಳ ಸಂರಕ್ಷಣೆ ಮತ್ತು ತಳಿ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಸಹಕರಿಸಿದ ರೈತ ಪುರುಷರು, ರೈತ ಮಹಿಳೆಯರು, ಹಾಗೂ ಬುಡಕಟ್ಟು ಸಮುದಾಯಗಳನ್ನು ಗುರುತಿಸಿ, "ಸಸ್ಯ ತಳಿ ಸಂರಕ್ಷಣೆ ಹಾಗೂ ರೈತರ ಹಕ್ಕು ರಕ್ಷಣೆ ಪ್ರಾಧಿಕಾರ"ವು ಸ್ಥಾಪಿಸಿರುವ "ನ್ಯಾಷನಲ್ ಜೀನ್ ಫಂಡ್" ನಿಧಿಯಿಂದ ಪುರಸ್ಕರಿಸುವ ಕಾರ್ಯ 2007ರಿಂದ "ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಕಾಯಿದೆ" ಅಡಿಯಲ್ಲಿ ನಡೆದು ಬಂದಿದೆ. ಪ್ರತಿ ವರ್ಷ ರೈತರು ಹಾಗೂ ಸಮುದಾಯಗಳಿಗೆ ಪ್ರಶಸ್ತಿ ಮತ್ತು ಪುರಸ್ಕಾರಗಳನ್ನು ನೀಡಲಾಗುತ್ತದೆ.

ಈ ನಿಟ್ಟಿನಲ್ಲಿ ಸುತ್ತೂರಿನ ಜೆ.ಎಸ್.ಎಸ್. ಕೃಷಿ ವಿಜ್ಞಾನ ಕೇಂದ್ರವು 2014ನೇ ಸಾಲಿಗೆ ಮೈಸೂರು ಜಿಲ್ಲೆಯಿಂದ ಟಿ. ನರಸೀಪುರ ತಾಲ್ಲೂಕಿನ, ಮಾದ್ರಳ್ಳಿ ಗ್ರಾಮದಲ್ಲಿ ತಮ್ಮದೇ ಭತ್ತದ ತಳಿವರ್ಧನೆ ಮಾಡಿದ ಎಂ. ಕೆ. ಶಂಕರಗುರು ಹಾಗು ಟಿ. ನರಸೀಪುರದ ಮೂಗೂರು ಹೋಬಳಿಯ ಕನ್ನಳ್ಳಿಯಲ್ಲಿ ತಮ್ಮ ಜಮೀನನ್ನು ಹೊಂದಿದ್ದು, ಕೊಳ್ಳೇಗಾಲ ತಾಲ್ಲೂಕಿನ ಹೊಸಮಾಲಂಗಿ ಗ್ರಾಮದಲ್ಲಿ ವಾಸವಿರುವ ತಳಿ ಸಂರಕ್ಷಕ ಎಂ. ರೇಚಣ್ಣರವರನ್ನು ನಾಮನಿರ್ದೇಶನ ಮಾಡಲಾಗಿತ್ತು. ಶ್ರೀಯುತ ಎಂ. ಕೆ. ಶಂಕರಗುರು ತಾವೇ ಅಭಿವೃದ್ಧಿಪಡಿಸಿದ ಭತ್ತದ ತಳಿಯಾದ ಎನ್.ಎಂ.ಎಸ್.–2 ಹಾಗು ಇತರ ದೇಸಿ ಭತ್ತದ ತಳಿಗಳ ಸಂರಕ್ಷಣೆಯಲ್ಲಿ ಸತತ 24 ವರ್ಷಗಳ ಸಾಧನೆಗಾಗಿ ಹಾಗೂ ಕಳೆದ 13 ವರ್ಷಗಳಿಂದ 300ಕ್ಕೂ ಹೆಚ್ಚು ದೇಸಿ ಭತ್ತದ ತಳಿಗಳ ಸಂರಕ್ಷಣೆಯಲ್ಲಿ ತೊಡಗಿರುವ ಎಂ. ರೇಚಣ್ಣರವರು "ಪ್ಲಾಂಟ್ ಜೀನೋಮ್ ಸೇವಿಯರ್ ರೈತ ಮನ್ನಣೆ ಪ್ರಶಸ್ತಿ"ಗೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ಒಂದು ಲಕ್ಷ ರೂಪಾಯಿಗಳು, ಸನ್ಮಾನಪತ್ರ ಹಾಗು ಸ್ಮರಣಿಕೆಯನ್ನು ಒಳಗೊಂಡಿರುತ್ತದೆ.

ಇದರ ಅಂಗವಾಗಿ ಇದೇ ಡಿಸೆಂಬರ್ 21ರಂದು ನವದೆಹಲಿಯಲ್ಲಿ ನಡೆಯುವ ಸಮಾರಂಭದಲ್ಲಿ ಸದರಿ ರೈತರನ್ನು ಕೇಂದ್ರ ಕೃಷಿ ಮಂತ್ರಿಗಳಾದ ಶ್ರೀ ರಾಧಾಮೋಹನ್ ಸಿಂಗ್‌ರವರು ಸನ್ಮಾನಿಸಲಿದ್ದಾರೆ. ಕೃಷಿ ವಿಜ್ಞಾನ ಕೇಂದ್ರವು ರೈತರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸಿ ಶ್ರೀಯುತರ ನವದೆಹಲಿ ಪ್ರವಾಸ ಸುಖಕರವಾಗಿರಲೆಂದು ಹಾರೈಸಿದೆ.



ಎಂ. ರೇಚಣ್ಣ



ಎಂ.ಕೆ. ಶಂಕರಗುರು

## ಸೀಡ್ ಟೆಕ್ನಾಲಜಿ

ದೇಶಕ್ಕೆ ಬೇಕು ಸಕಲ ಆಧುನಿಕ ಟೆಕ್ನಾಲಜಿ
ಕೊನೆಗೆ ಬೇಕೇ ಬೇಕು ಫುಡ್ ಟೆಕ್ನಾಲಜಿ
ಈಗ ಎಲ್ಲೆಲ್ಲೂ ಪ್ರಚಾರದಲ್ಲಿದೆ ನ್ಯಾನೋ ಟೆಕ್ನಾಲಜಿ
ತಿಳಿಯಬೇಕು ಇದೆಲ್ಲಕ್ಕೂ ಆಧಾರ ಸೀಡ್ ಟೆಕ್ನಾಲಜಿ
ಸರ್ಕಾರಕ್ಕೆ ಬೇಕು ಈ ವಿಷಯದಲ್ಲಿ ಹೆಚ್ಚಿನ ಕಾಳಜಿ

– ಡಾ॥ ಎಂ.ಎಂ. "ರೈತಗೀತೆ"



# ಕೃಷಿ ಜೀವವೈವಿಧ್ಯತೆ ನಿರ್ವಹಣೆ ಮೇಲಿನ ದೆಹಲಿ ಘೋಷಣೆ

ಡಾ॥ ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ

"ಭಾರತೀಯ ಸಸ್ಯ ಅನುವಂಶಿಕ ಸಂಪನ್ಮೂಲಗಳ ಸಂಘ" ಮತ್ತು "ಅಂತಾರಾಷ್ಟ್ರೀಯ ಜೀವವೈವಿಧ್ಯತೆ" (ಬಯೋಡೈವರ್ಸಿಟಿ ಇಂಟರ್ ನ್ಯಾಷನಲ್) ಸಂಸ್ಥೆಗಳು ನವ ದೆಹಲಿಯಲ್ಲಿ 2016ರ ನವೆಂಬರ್ 6ರಿಂದ 9ರವರೆಗೆ ಆಯೋಜಿಸಲಾಗಿದ್ದ "ಪ್ರಥಮ ಅಂತಾರಾಷ್ಟ್ರೀಯ ಕೃಷಿಜೀವವೈವಿಧ್ಯತೆ ಸಮ್ಮೇಳನ"ದಲ್ಲಿ 60 ದೇಶಗಳ 900ಕ್ಕೂ ಅಧಿಕ ಸಂಖ್ಯೆಯ ಜನರು ಭಾಗವಹಿಸಿದ್ದರು. 16 ತಾಂತ್ರಿಕ ಅಧಿವೇಶನಗಳು, 4 ಅನುಚರ ಅಧಿವೇಶನಗಳು, ಒಂದು ಅನುವಂಶಿಕ ಸಂಸಾಧನ ಬ್ಯಾಂಕ್ ದುಂಡುಮೇಜು, ಒಂದು ಸಾರ್ವಜನಿಕ ಚರ್ಚಾಕೂಟ, ಒಂದು ಕೃಷಿಕರ ಚರ್ಚಾಕೂಟ ಮತ್ತು ಭಿತ್ತಿಪತ್ರ ಅಧಿವೇಶನಗಳಲ್ಲಿ, ಜೀವವೈವಿಧ್ಯತೆಯ ಸಂರಕ್ಷಣೆ, ನಿರ್ವಹಣೆ, ಪ್ರವೇಶಾಧಿಕಾರ, ಮತ್ತು ಉಪಯೋಗಗಳ ವಿವಿಧ ಅಂಶಗಳ ಬಗ್ಗೆ ಸಮ್ಮೇಳನ ಪ್ರತಿನಿಧಿಗಳು ಚರ್ಚಿಸಿದರು. ವಿವರವಾದ ಚರ್ಚೆಗಳ ಆಧಾರದ ಮೇಲೆ, ನವೆಂಬರ್ 9ರ ಮುಕ್ತಾಯ ಅಧಿವೇಶನದಲ್ಲಿ, ಈ ಕೆಳಕಂಡ ಘೋಷಣೆಗಳನ್ನು ಅಂಗೀಕರಿಸಲಾಯಿತು:

## ಪ್ರಸ್ತಾವನೆ

- ಜೀವವೈವಿಧ್ಯತೆಯು ಬೆಳೆ ತಳಿಗಳು, ಜಾನುವಾರು ತಳಿಗಳು ಮತ್ತು ಮೀನು ತಳಿಗಳು, ಮತ್ತು ಕೃಷಿ ಉಪಯುಕ್ತ ಕೀಟಗಳು ಮತ್ತು ಸೂಕ್ಷ್ಮಜೀವಿಗಳ ಪ್ರಬೇಧಗಳನ್ನು ಒಳಗೊಂಡಿರುತ್ತದೆ. ಜೀವವೈವಿಧ್ಯತೆಗೆ ಸಂಬಂಧಿಸಿದ ಅನುವಂಶಿಕ ಸಂಪನ್ಮೂಲಗಳ ಮಾಹಿತಿ ದಾಖಲಿಸುವುದು, ಸಂಗ್ರಹಣೆ, ಸಂರಕ್ಷಣೆ, ಮತ್ತು ಉಪಯೋಗಗಳ ಬಗ್ಗೆ ಗಮನಾರ್ಹ ಪ್ರಗತಿಯನ್ನು ಸಾಧಿಸಲಾಗಿದೆ; ಆದಾಗ್ಯೂ, ಅವುಗಳ ಸುಸ್ಥಿರ ಉಪಯೋಗ, ಹೆಚ್ಚಿನ ವಿನಿಮಯ, ಮತ್ತು ಜ್ಞಾನ, ಮತ್ತು ತಂತ್ರಜ್ಞಾನ ವರ್ಗಾವಣೆಯ ವಿಷಯದಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕಾಗಿದೆ.
- ಜೀವವೈವಿಧ್ಯತೆಯನ್ನು ಸುಸ್ಥಿರವಾಗಿ ಸಂರಕ್ಷಿಸಿದಲ್ಲಿ ಮತ್ತು ಉಪಯೋಗಿಸಿದಲ್ಲಿ, ಅದು ಹಸಿವು, ಆಹಾರ ಭದ್ರತೆ, ಅಪೌಷ್ಟಿಕತೆ, ಮತ್ತು ಹವಾಮಾನ ಬದಲಾವಣೆಗಳ ತೊಂದರೆಗಳನ್ನು ನಿವಾರಿಸಲು ಒಂದು ಪ್ರಮುಖವಾದ ಕೊಡುಗೆಯನ್ನು ನೀಡಬಲ್ಲದು; ಈ ರೀತಿಯಲ್ಲಿ ಅದು "ಸುಸ್ಥಿರ ಅಭಿವೃದ್ಧಿ ಧ್ಯೇಯಗಳು" ಮತ್ತು "ಆಯಿಚಿ ಜೀವವೈವಿಧ್ಯತೆಯ ಸಂರಕ್ಷಣೆ" ಸಮ್ಮೇಳನದ ಧ್ಯೇಯಗಳನ್ನು/ಗುರಿಗಳನ್ನು ಸಾಧಿಸಲು ಸಹಾಯಕವಾಗುತ್ತದೆ.
- ಕಾರ್ಯನೀತಿ ಮಿತಿಗಳು, ಬಂಡವಾಳ ಹೂಡಿಕೆ, ಮೂಲಸೌಕರ್ಯ, ತಾಂತ್ರಿಕ ಸಾಮರ್ಥ್ಯ, ಮತ್ತು ಅಡ್ಡ–ವಲಯಗಳ ಸಂಯೋಜನೆ ಮತ್ತು ಸಹಭಾಗಿತ್ವ, ಮುಂತಾದವು ಜೀವವೈವಿಧ್ಯತೆಯ ಸಮರ್ಥ ಉಪಯೋಗವನ್ನು ಸಾಮಾನ್ಯವಾಗಿ ತಪಿಸುತ್ತವೆ; ವಿಶೇಷವಾಗಿ ಇದು ಒಂದು ಅಪಾಯಕಾರಿಯಾದ ವಿಷಯ; ಏಕೆಂದರೆ, ಸುಮಾರು 795 ಮಿಲಿಯನ್ ಜನರು ವಿಶ್ವದಲ್ಲಿ ಇಂದು ಹಸಿವಿನಿಂದ ನರಳುತ್ತಿದ್ದಾರೆ ಎಂದು ವರದಿಮಾಡಲಾಗಿದೆ; 2050ರ ಹೊತ್ತಿಗೆ, 9.6 ಬಿಲಿಯನ್ ಜನರಿಗೆ ಶೇಕಡಾ 70ರಷ್ಟು ಹೆಚ್ಚು ಆಹಾರ ಬೇಕಾಗುತ್ತದೆ. ಆದುದರಿಂದ, ಜೀವವೈವಿಧ್ಯತೆಯ ಉಪಯೋಗವನ್ನು ಹೆಚ್ಚಿಸಲು, ವಿಶ್ವದ ನಾಯಕರಿಂದ ಮತ್ತು ಸಂಸ್ಥೆಗಳಿಂದ ಹೆಚ್ಚಿನ ಆದ್ಯತೆ ಮತ್ತು ಕಾರ್ಯನೀತಿಯ ಬೆಂಬಲ ಬೇಕಾಗುತ್ತದೆ.
- ಜೀವವೈವಿಧ್ಯತೆಯು ಅತಿ ಶೀಘ್ರವಾಗಿ ನಾಶ ಹೊಂದುತ್ತಿರುವುದನ್ನು ಮತ್ತು ನಿರ್ನಾಮವಾಗುತ್ತಿರುವುದನ್ನು ವಿಶ್ವವು ಎದುರಿಸುತ್ತಿದೆ. ಜನಸಂಖ್ಯಾ ಸ್ಫೋಟದ ಬೆಳವಣಿಗೆಯಿಂದ ಮತ್ತು ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಶೋಷಣೆಗಳಿಂದ, ಪ್ರತಿ ವರ್ಷವೂ 10,000 ಪ್ರಬೇಧಗಳ ಪೈಕಿ, 1,000 ಪ್ರಬೇಧಗಳು ಕಳೆದ 66 ಮಿಲಿಯನ್ ವರ್ಷಗಳಿಂದಲೂ ಸಾಮಾನ್ಯ ರೀತಿಯಲ್ಲಿ ನಾಶ ಹೊಂದುತ್ತಿವೆ. ಜೀವವೈವಿಧ್ಯತೆ ಮತ್ತು ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನದ ನಾಶವು ಒಂದು ಅಚಲವಾದ/ಹಿಂದಿರುಗಿಸಲಾಗದ ಪ್ರಕ್ರಿಯೆ. ಆದುದರಿಂದ, ಜೀವವೈವಿಧ್ಯತೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕಾಗುತ್ತದೆ. ವಾಸ್ತವವಾಗಿ, ಒಂದು ವಂಶವಾಹಿಯ ನಾಶವು, ನಮ್ಮ ಮುಂದಿನ ಪೀಳಿಗೆಗಳಿಗೆ ಒಂದು ಪ್ರಮುಖವಾದ ನಷ್ಟವಾಗಿರುತ್ತದೆ.

## ಘೋಷಣೆ

1. ನಮ್ಮೆಲ್ಲರ ಹಂಚಿಕೊಂಡಿರುವ ದೃಷ್ಟಿಕೋನವಾದ ಜೀವವೈವಿಧ್ಯತೆಯ ಸಂರಕ್ಷಣೆ ಮತ್ತು ಸುಸ್ಥಿರ ಉಪಯೋಗದಿಂದ, "ಸುಸ್ಥಿರ ಅಭಿವೃದ್ಧಿ ಗುರಿಗಳ"ನ್ನು ಸಾಧಿಸುವುದು ಮತ್ತು "ಆಯಿಚಿ ಜೀವವೈವಿಧ್ಯತೆ ಸಂರಕ್ಷಣೆಯ ಗುರಿಗಳ"ನ್ನು ಸಾಧಿಸುವುದರ ಮೂಲಕ, ಬಡತನ ನಿರ್ಮೂಲನೆ, ಆಹಾರ, ಪೋಷಕಾಂಶ ಮತ್ತು ಆರೋಗ್ಯ ಭದ್ರತೆ, ಲಿಂಗ ಸಮಾನತೆ ಮತ್ತು ವಿಶ್ವ ಸಹಭಾಗಿತ್ವಗಳನ್ನು ಸಂಬೋಧಿಸಲು, ನಾವು ದೇಶಗಳಿಗೆ ಕರೆ ಕೊಡುತ್ತೇವೆ.
2. ರೈತ ಪುರುಷರು ಮತ್ತು ರೈತ ಮಹಿಳೆಯರು, ಕುರಿ ಸಾಕುವವರು, ಗಿರಿಜನರು ಮತ್ತು ಗ್ರಾಮೀಣ ಸಮುದಾಯಗಳಲ್ಲಿರುವ ಜೀವವೈವಿಧ್ಯತೆಯ ಸಾಂಪ್ರದಾಯಿಕ ಜ್ಞಾನದ ಪ್ರಾಮುಖ್ಯತೆಯನ್ನು ನಾವು ಗುರುತಿಸಬೇಕು, ಮತ್ತು ಆಹಾರ ಭದ್ರತೆ ಮತ್ತು ಹವಾಗುಣಕ್ಕೆ ಕೂಡಲೇ ಚೇತರಿಸಿಕೊಳ್ಳುವ ಜೀವ ವೈವಿಧ್ಯತೆಯ ಸಂರಕ್ಷಣೆ ಮತ್ತು ಉಪಯೋಗದಲ್ಲಿ, ಅವರ ಪ್ರಮುಖ ಪಾತ್ರವನ್ನು ಗುರುತಿಸಬೇಕು. ಆದುದರಿಂದ, ದೇಶಗಳ ಕ್ರಿಯಾತ್ಮಕ ಭಾಗವಹಿಸುವಿಕೆಗೆ ವೇಗೋತ್ಕರ್ಷವನ್ನು ಉಂಟುಮಾಡಲು, ಅವಶ್ಯವಿರುವ ಕಾನೂನಾತ್ಮಕ, ಸಾಂಸ್ಥಿಕ, ಮತ್ತು ಧನಸಹಾಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಬೇಕೆಂದು, ನಾವು ದೇಶಗಳಿಗೆ ಕರೆ ಕೊಡುತ್ತೇವೆ.
3. ಸಂಶೋಧಕರು ಮತ್ತು ಕಾರ್ಯನೀತಿ ರೂಪಿಸುವವರು, ಜೀವವೈವಿಧ್ಯತೆಯನ್ನು ಸಂರಕ್ಷಿಸಲು, ಬೆಳೆಯ ಪಳಗಿಸದೇ ಇರುವ/ಕಾಡು ತಳಿಗಳನ್ನು ಉಪಯೋಗಿಸುದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುವುದನ್ನೂ ಸೇರಿದಂತೆ,

ಪೂರಕ ರಣನೀತಿಗಳನ್ನು ಪ್ರಾರಂಭಿಸಬೇಕು, ಬಲಪಡಿಸಬೇಕು, ಮತ್ತು ಉತ್ತೇಜಿಸಬೇಕು, ಎಂದು ನಾವು ಒತ್ತಾಯಪಡಿಸುತ್ತೇವೆ. ನೈಸರ್ಗಿಕ ಪರಿಸರದಿಂದ ಹೊರಗೆ ನಿರ್ವಹಣೆ ಮಾಡುತ್ತಿರುವ, ಮೂಲ ಸ್ಥಳದಲ್ಲೇ ಸಂರಕ್ಷಿಸಲ್ಪಡುತ್ತಿರುವ, ಕೃಷಿಕ್ಷೇತ್ರಗಳಲ್ಲಿರುವ ಮತ್ತು ಸಮುದಾಯ ಆಧಾರಿತ ಪದ್ಧತಿಗಳು, ಮತ್ತು ಇತರ ಸಂರಕ್ಷಣಾ ವಿಧಾನಗಳ ನಡುವೆ, ಪ್ರತಿಯೊಂದಕ್ಕೂ ಹೆಚ್ಚಿನ ಪ್ರಾಮುಖ್ಯತೆ ಮತ್ತು ಸಮಾನ ಒತ್ತು ಕೊಡುವುದರ ಮೂಲಕ, ಅನಂತತೆ ಅಥವಾ ಮುಂದುವರಿದುಕೊಂಡು ಹೋಗುವಂತೆ ಮಾಡಲು, ನಾವು ದೇಶಗಳಿಗೆ ಕರೆ ಕೊಡುತ್ತೇವೆ.

4. ಅನುವಂಶಿಕ ಸಂಪನ್ಮೂಲಗಳ ಗುಣಲಕ್ಷಣಗಳನ್ನು ವಿವರಿಸಲು, ಮೌಲ್ಯಮಾಪನ ಮಾಡಲು, ಮತ್ತು ವಿಶೇಷ ಗುಣವನ್ನು ಕಂಡುಹಿಡಿಯಲು, ವಿನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು; ವಂಶವಾಹಿಸಮೂಹ ವಿಜ್ಞಾನ, ಜೈವಿಕತಂತ್ರಜ್ಞಾನ, ಬಾಹ್ಯಾಕಾಶ ತಂತ್ರಜ್ಞಾನ, ಎಣಿಕೆ/ಗಣನೆ ತಂತ್ರಜ್ಞಾನ, ಮತ್ತು ಪರಮಾಣು ತಂತ್ರಜ್ಞಾನಗಳನ್ನೊಳಗೊಂಡಂತೆ (ನ್ಯಾನೊ ಟೆಕ್ನಾಲಜಿ), ಎಲ್ಲವನ್ನೂ ಸಂಶೋಧಕರು ಬಳಸಿಕೊಳ್ಳಬೇಕೆಂದು, ನಾವು ಸಲಹೆ ನೀಡುತ್ತೇವೆ. ಇದರ ಮುಖ್ಯ ಉದ್ದೇಶವೆಂದರೆ, ಕೃಷಿ ಉತ್ಪಾದನೆ ವ್ಯವಸ್ಥೆಗಳನ್ನು ಮತ್ತು ನೆಲನೋಟಗಳನ್ನು ವೈವಿಧ್ಯಗೊಳಿಸುವುದರ ಮುಖಾಂತರ, ದಕ್ಷತೆ, ಸಮಾನತೆ, ಆರ್ಥಿಕತೆ, ಮತ್ತು ಪರಿಸರ ಭದ್ರತೆಯನ್ನು ಸಾಧಿಸಬಹುದು.

5. ಸಸ್ಯ, ಪಶು, ಜಲವಾಸಿ, ಸೂಕ್ಷ್ಮಾಣು, ಮತ್ತು ಕೀಟ ಅನುವಂಶಿಕ ಸಂಪನ್ಮೂಲಗಳನ್ನು ವಿಶ್ವ ಮಟ್ಟದಲ್ಲಿ ವಿನಿಮಯ ಮಾಡಿಕೊಳ್ಳಬೇಕೆಂದು, ನಾವು ಪುನಃ ಒತ್ತಾಯಯಿಸುತ್ತೇವೆ. ಇದರಿಂದ ಕೃಷಿ ಮತ್ತು ನಮ್ಮ ಆಹಾರದ ಬುಟ್ಟಿಯನ್ನು ವೈವಿಧ್ಯಗೊಳಿಸಬಹುದು ಮತ್ತು ಎಲ್ಲಾ ದೇಶಗಳ ನಿರಂತರವಾಗಿ ಬೆಳೆಯುತ್ತಿರುವ ಆಹಾರ ಮತ್ತು ಪೌಷ್ಟಿಕಾಂಶಗಳ ಅವಶ್ಯಕತೆಗಳನ್ನು ಪೂರೈಸಬಹುದು. ಇದನ್ನು ಖಾತ್ರಿಪಡಿಸಲು, ಬಹು–ಪಕ್ಷೀಯ ಲಿಖಿತಗಳನ್ನು ("ಆಹಾರ ಮತ್ತು ಕೃಷಿಗಾಗಿ ಸಸ್ಯ ಅನುವಂಶಿಕ ಸಂಪನ್ಮೂಲಗಳ ಅಂತಾರಾಷ್ಟ್ರೀಯ ಒಪ್ಪಂದ"ದ ಪ್ರಕಾರ), ಮತ್ತು ದ್ವಿ–ಪಕ್ಷೀಯ ಲಿಖಿತಗಳನ್ನು ("ನಗೋಯ ಪ್ರೋಟೋಕಾಲ್" ಪ್ರಕಾರ) ಮಾಡಿಕೊಳ್ಳಬೇಕು. ಸಮಾನ ಪ್ರವೇಶಾಧಿಕಾರ ಮತ್ತು ಲಾಭದ ಹಂಚಿಕೆ ಅವಕಾಶಗಳು ಖಾತ್ರಿಯಾಗಿ ಸಿಗುವ ರೀತಿಯಲ್ಲಿ ಅನುವಂಶಿಕ ಸಂಪನ್ಮೂಲಗಳ ವಿನಿಮಯವನ್ನು ಸುಗಮಗೊಳಿಸಲು, ಈ ಲಿಖಿತಗಳನ್ನು ಅಳವಡಿಸಿಕೊಳ್ಳಬೇಕೆಂದು ದೇಶಗಳನ್ನು ನಾವು ಒತ್ತಾಯಿಸುತ್ತೇವೆ.

6. ದೇಶಗಳು ಅವುಗಳ ಅಸ್ತಿತ್ವದಲ್ಲಿರುವ ಸಸ್ಯಸ್ವಚ್ಛೀಕರಣ (ಫೈಟೋಸ್ಯಾನಿಟೇಷನ್) ಮತ್ತು ಮೂಲೆಗುಂಪು (ಕ್ವಾರಂಟೈನ್) ಗಳನ್ನೂ ಒಳಗೊಂಡಂತೆ, ಅನುವಂಶಿಕ ಸಂಪನ್ಮೂಲಗಳು, ಸರಹದ್ದುಗಳ ಆಚೆಗೂ ಸುರಕ್ಷಿತವಾಗಿ ಚಲಿಸುವ ಸಾಮರ್ಥ್ಯವನ್ನು ಪಡೆದುಕೊಳ್ಳಲು ಸೌಹಾರ್ದಗೊಳಿಸಬೇಕು.

7. ಕೃಷಿಜೀವವೈವಿಧ್ಯತೆಗಳ ಪರಿಣಾಮಕಾರಿಯಾದ ಮತ್ತು ಸಮರ್ಥವಾದ ಬಳಕೆಯನ್ನು ಹೆಚ್ಚಿಸಲು ಕೃಷಿಜೀವವೈವಿಧ್ಯತೆ ಸಂರಕ್ಷಣಾ ಯೋಜನೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವ ಯೋಜನೆಗಳ ಬಗ್ಗೆ ಸರ್ಕಾರಗಳು ಮತ್ತು ನಾಗರೀಕ ಸಮಾಜಗಳು ಹೆಚ್ಚಿನ ಒತ್ತು ಕೊಡಬೇಕೆಂದು ನಾವು ಬಯಸುತ್ತೇವೆ.

8. ಒಂದು "ಕೃಷಿಜೀವವೈವಿಧ್ಯ ಸೂಚ್ಯಂಕ"ವನ್ನು ಅಭಿವೃದ್ಧಿಪಡಿಸಿ, ಅದನ್ನು ಕಾರ್ಯಗತಗೊಳಿಸಬೇಕೆಂದು ನಾವು ಶಿಫಾರಸು ಮಾಡುತ್ತೇವೆ. ಇದರಿಂದ ಚಾಲ್ತಿಯಲ್ಲಿರುವ ಅನುವಂಶಿಕ ಸಂಪನ್ಮೂಲ ಸಂರಕ್ಷಣೆ ಮತ್ತು ನಿರ್ವಹಣೆ ಪ್ರಯತ್ನಗಳಿಗೆ, ವಿಶೇಷವಾಗಿ ಕೃಷಿಜೀವ ವೈವಿಧ್ಯತೆಯ 'ಹಾಟ್ ಸ್ಪಾಟ್ಸ್' ಮೇಲೆ ಒತ್ತು ಕೊಡುವುದೂ ಸೇರಿದಂತೆ, ಸಹಾಯವಾಗುತ್ತದೆ.

9. ಸಾರ್ವಜನಿಕ ಮತ್ತು ಖಾಸಗಿ ವಲಯಗಳು, ಮತ್ತು ನಾಗರೀಕ ಸಮಾಜಗಳು, ಇನ್ನು ಮುಂದೆ, ಅಪೌಷ್ಟಿಕತೆಯನ್ನು ಕಡಿಮೆಮಾಡಲು, ಕೃಷಿಕ್ಷೇತ್ರಗಳ ಮತ್ತು ಕೃಷಿ ಕುಟುಂಬಗಳ ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ಪರಿಸರ ಸೇವೆಗಳನ್ನು ಜಾಸ್ತಿಮಾಡಲು, ಕೃಷಿಜೀವ ವೈವಿಧ್ಯತೆಯನ್ನು ಉಪಯೋಗಿಸಿಕೊಳ್ಳಲು ಕ್ರಿಯಾಶೀಲವಾಗಿ ಬಂಡವಾಳ ಹೂಡಬೇಕು ಮತ್ತು ಅನುದಾನಗಳನ್ನು ನೀಡಬೇಕು, ಎಂದು ನಾವು ಒತ್ತಾಯ ಮಾಡುತ್ತೇವೆ. ಇಂತಹ ಪ್ರಯತ್ನಗಳು ಸಮಾನ ಪ್ರಯೋಜನಗಳ ಮತ್ತು ಅವಕಾಶಗಳ ಕಡೆಗೆ ಮುನ್ನಡೆಸಬೇಕು; ಮಹಿಳೆಯರಿಗೆ ಮತ್ತು ಯುವಕರಿಗೆ ವಿಶೇಷವಾದ ಒತ್ತು ಕೊಡಬೇಕು.

10. ಕೃಷಿಜೀವವೈವಿಧ್ಯತೆಯ ಸಂರಕ್ಷಣೆ ಮತ್ತು ಉಪಯೋಗವನ್ನು ಬಲಪಡಿಸಲು, ಹೆಚ್ಚಿನ ಬಂಡವಾಳವನ್ನು ಹೂಡುವುದರ ಜೊತೆಗೆ, ದೇಶಗಳು ಅವುಗಳ ಸಂಶೋಧನೆ ಮತ್ತು ವಿಸ್ತರಣಾ ವಲಯಗಳನ್ನು ಮರುಪ್ರಾಶಸ್ತ್ಯಗೊಳಿಸಬೇಕು. ಇದಲ್ಲದೆ, "ಅಂತಾರಾಷ್ಟ್ರೀಯ ಕೃಷಿಜೀವವೈವಿಧ್ಯತೆ ನಿಧಿ"ಯನ್ನು ಸ್ಥಾಪಿಸಬೇಕೆಂದು ನಾವು ಬಲವಾಗಿ ಶಿಫಾರಸು ಮಾಡುತ್ತೇವೆ. ಕೃಷಿಜೀವ ವೈವಿಧ್ಯತೆಯನ್ನು ವೈಜ್ಞಾನಿಕವಾಗಿ ನೈಸರ್ಗಿಕ ಪರಿಸರದಿಂದ ಹೊರಗೆ ಸಂರಕ್ಷಿಸಲು, ಮತ್ತು ಮೂಲ ಸ್ಥಳದಲ್ಲೇ ಸಂರಕ್ಷಿಸಲು, ಮತ್ತು ಉಪಯೋಗವನ್ನು ಹೆಚ್ಚಿಸಲು ಇದು ದೇಶಗಳಿಗೆ ಮತ್ತು ಸಮುದಾಯಗಳಿಗೆ ಸಹಾಯ ಮಾಡುತ್ತದೆ.

11. ಒಂದು "ಕೃಷಿಜೀವವೈವಿಧ್ಯತೆ ವರ್ಷ"ವನ್ನು ಘೋಷಿಸಬೇಕೆಂದು ನಾವು ವಿಶ್ವ ಸಂಸ್ಥೆಯನ್ನು ಒತ್ತಾಯಿಸುತ್ತೇವೆ. ಇದರಿಂದ, ವಿಶ್ವದಾದ್ಯಂತ ಇರುವ ವಿಶ್ವ ಸಮುದಾಯಗಳು, ಅನುವಂಶಿಕ ಸಂಪನ್ಮೂಲಗಳ ಪರಿಣಾಮಕಾರಿ ನಿರ್ವಹಣೆಯ ಕಡೆಗೆ ಗಮನ ಹರಿಸಲು ಮತ್ತು ತುರ್ತು ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

12. ಅಂತಿಮವಾಗಿ, "ಅಂತಾರಾಷ್ಟ್ರೀಯ ಕೃಷಿಜೀವವೈವಿಧ್ಯತೆ ಸಮ್ಮೇಳನ"ವನ್ನು ನಾಲ್ಕು ವರ್ಷಗಳಿಗೊಮ್ಮೆ ಆಯೋಜಿಸಬೇಕೆಂದು ನಾವು ಶೀಫಾರಸು ಮಾಡುತ್ತೇವೆ. ಇದರಿಂದ "ಜೀವವೈವಿಧ್ಯತೆ ಅಂತಾರಾಷ್ಟ್ರೀಯ"ವು (ಬಯೋಡೈವರ್ಸಿಟಿ ಇಂಟರ್ ನ್ಯಾಷನಲ್) 2016ರಲ್ಲಿ ಉಂಟಾದ ಆವೇಗವನ್ನು ಅಥವಾ ಚಲನಗತಿಯನ್ನು ಕಾಪಾಡಿಕೊಳ್ಳಲು ಮತ್ತು "ಕೃಷಿಜೀವವೈವಿಧ್ಯತೆ ನಿರ್ವಹಣೆ ಮೇಲಿನ ದೆಹಲಿ ಘೋಷಣೆ"ಯನ್ನು ಕಾರ್ಯಾನ್ವಯಗೊಳಿಸಲು, ಒತ್ತು ಕೊಡುವುದನ್ನು ಮುಂದುವರಿಸಲು ಮತ್ತು ವಿವಿಧ ಮಧ್ಯಸ್ಥಗಾರರು ಮತ್ತು ದೇಶಗಳು ಮಾಡಿದ ಪ್ರಗತಿಯ ಪರಿಶೀಲನೆ ಸಾಧ್ಯವಾಗುತ್ತದೆ.

●

# MAHARASTHRA SHIFTS DEVELOPING BT COTTON VARIETIES FROM PRIVATE COMPANIES TO STATE UNIVERSITIES

MUMBAI: Complaints from farmers made the state government announce on Wednesday (December 15, 2016)that the multinational seed giant Monsanto would not be allowed to develop cotton seed varieties in the state. Instead, the four agricultural universities in the state and the Central Institute for Cotton Research, Nagapur will undertake research and provide seeds to cultivators.

The state has 38 lakh hectares under cotton cultivation, of which 98% is sowed with Bt cotton seeds developed by Monsanto. Most cotton growers are in Vidarbha, where the soil and climate favor the cash crop. Vidarbha has seen farmer suicides over the years, as the economics of cultivation has become skewed against the farmer, with input costs higher than the produce prices.


In accordance with a 2009 act, the state government periodically controls cotton seed prices. On June 8, 2015, a notification was issued where packets of seeds were priced at Rs 730 and Rs 830 depending on the type of seed.

It was realized that the quality of these seeds from private companies had not been good over the years and that the lack of research in government universities allowed private companies to “loot” farmers

The Agricultural minister informed the press that newly developed seeds from government institutes would be available from 2018 and no private company would be allowed. It was learnt that farmers would now have to pay only Rs 350 per packet for a packet of Bt cotton seeds.

**Source: Times of India,**

## ಇನ್ಸುಲಿನ್ ಸಸ್ಯ (*Costus Igneus*)



**ಉಪಯುಕ್ತ ಭಾಗ: ಎಲೆ**

ಇದು ಸಹ ಬಹು ವಾರ್ಷಿಕ ಸಸ್ಯವಾಗಿದ್ದು, ಇದರ ಎಲೆಗಳು ಮಧುಮೇಹಿಂಗಳಿಗೆ ಉಪಯುಕ್ತಕರವಾಗಿವೆ. ಪ್ರತಿದಿನ ಇನ್ಸುಲಿನ್ ಎಲೆಗಳನ್ನು ಜಗಿದು ಸೇವಿಸುವುದರಿಂದ ಮಧುಮೇಹವನ್ನು ನಿಯಂತ್ರಣದಲ್ಲಿಡಬಹುದು. ಮೊದಲನೆ ವಾರ 2 ಎಲೆ ಬೆಳಿಗ್ಗೆ ಹಾಗೂ ಸಾಯಂಕಾಲ, ನಂತರ ಒಂದು ಎಲೆಯನ್ನು ದಿನಕ್ಕೆ ಎರಡು ಬಾರಿ ಒಂದು ತಿಂಗಳು ಸೇವಿಸಬಹುದು. ಎಲೆಗಳನ್ನು ಅಗಿದ ನಂತರ ಸ್ವಲ್ಪ ನೀರು ಕುಡಿಯುವುದು ಉತ್ತಮ.

- ಇದು ದೇಹದಲ್ಲಿಯ ಮೇದೋಜೀರಕ ಗ್ರಂಥಿಯ ಬೀಟಾ ಜೀವಕೋಶಗಳನ್ನು ಸಧೃಡಗೊಳಿಸಿ ಇನ್ಸುಲಿನ್ ಉತ್ಪಾದನೆಗೆ ಸಹಕಾರಿಯಾಗಿದೆ.
- ಜ್ವರ, ಚರ್ಮದ ಸಮಸ್ಯೆ, ಶ್ವಾಸಕೋಶಗಳ ಸಮಸ್ಯೆ ಹಾಗೂ ಅಸ್ತಮಾ ನಿಯಂತ್ರಣಕ್ಕೆ ಸಹಕಾರಿಯಾಗಿದೆ.

## ಮಾವಿನ ಶುಂಠಿ (*Curcuma Amada)*



**ಉಪಯುಕ್ತ ಭಾಗ: ಬೇರುಕಾಂಡ**

ಇದು ನೋಡಲು ಶುಂಠಿಯನ್ನು ಹೋಲುತ್ತಿದ್ದು ಮಾವಿನ ಕಾಯಿಯ ಪರಿಮಳವನ್ನು ಹೊಂದಿದೆ. ದಕ್ಷಿಣ ಭಾರತದಲ್ಲಿ ಉಪ್ಪಿನಕಾಯಿ, ಚಟ್ನಿ ಹಾಗೂ ಹಸಿ ತರಕಾರಿಗಳ ಜೊತೆ ಸಲಾಡ್ ತಯಾರಿಕೆಯಲ್ಲಿ ಬಳಸುವರು. ಅಲ್ಲದೇ ನೀರು ಮಜ್ಜಿಗೆಯಲ್ಲಿ ಮಿಶ್ರ ಮಾಡಲಾಗುವುದು. ಇದನ್ನು ಗಾಳಿಯಾಡದ ಡಬ್ಬದಲ್ಲಿ 4 ರಿಂದ 5 ದಿನಗಳವರೆಗೆ ಶೇಖರಿಸಿಡಬಹುದು.

- ಮಾವಿನ ಶುಂಠಿಯನ್ನು ಶ್ವಾಸಕೋಶ ಮತ್ತು ಅಜೀರ್ಣ ತೊಂದರೆಗಳ ಸಮಯದಲ್ಲಿ ಸೇವಿಸುವುದರಿಂದ ರೋಗದ ಹತೋಟಿ ಮಾಡಬಹುದು.

# ತರಕಾರಿಗಳ ಮೌಲ್ಯವರ್ಧನೆ

ನೇತ್ರಾವತಿ ಎಮ್. ಎತ್ತಿನಮನಿ ಮತ್ತು ದಿವ್ಯಾ ಹೆಚ್. ವಿ.,
ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು

ತರಕಾರಿಗಳು ನಮ್ಮ ದೇಶದ ಕೃಷಿ ಮತ್ತು ಪೌಷ್ಟಿಕಾಂಶ ಭದ್ರತೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿವೆ. ಇವುಗಳು ಕಡಿಮೆ ಅವಧಿಯಲ್ಲಿ ಬೆಳೆಯುವಂತಹ ಬೆಳೆಗಳಾಗಿವೆ ಹಾಗೂ ಹೆಚ್ಚು ಇಳುವರಿಯನ್ನು ನೀಡುತ್ತವೆ. ಇವುಗಳನ್ನು ಆರೋಗ್ಯ ರಕ್ಷಕ ಆಹಾರಗಳೆಂದು ಕರೆಯುವರು. ಇವು ಪೋಷಕಾಂಶಗಳ ಆಗರವಾಗಿದ್ದು ಕಬ್ಬಿಣ, ಪೋಲಿಕ್ ಆಮ್ಲ, ಬೀಟಾ ಕೆರೋಟಿನ್, ನಾರು ಮತ್ತು ಇತರ ಖನಿಜ ಲವಣಗಳನ್ನು ದೇಹಕ್ಕೆ ಒದಗಿಸುತ್ತವೆ. ನಗರೀಕರಣ, ಹೆಚ್ಚುತ್ತಿರುವ ಉದ್ಯೋಗಸ್ಥ ಮಹಿಳೆಯರ ಸಂಖ್ಯೆ, ಆರೋಗ್ಯದ ಕಾಳಜಿ, ಇತ್ಯಾದಿ ಕಾರಣಗಳಿಂದ ತರಕಾರಿ ಸೇವನೆಯು ಮಹತ್ವದ ಪಾತ್ರ ವಹಿಸಿದೆ.

"ಭಾರತೀಯ ವೈದ್ಯಕೀಯ ಅನುಸಂಧಾನ ಪರಿಷತ್"ನ ಪ್ರಕಾರ ಒಬ್ಬ ವ್ಯಕ್ತಿ ದಿನಕ್ಕೆ 300 ಗ್ರಾಂಗಳಷ್ಟು ತರಕಾರಿಗಳನ್ನು ಸೇವಿಸಬೇಕು. ಅದರಲ್ಲಿ 50 ಗ್ರಾಂನಷ್ಟು ಹಸಿರು ಸೊಪ್ಪು ತರಕಾರಿಗಳು, 200 ಗ್ರಾಂನಷ್ಟು ಇತರೆ ತರಕಾರಿಗಳು, 50 ಗ್ರಾಂ ಗಡ್ಡೆ ತರಕಾರಿಗಳನ್ನು, ಜೊತೆಗೆ 100 ಗ್ರಾಂಗಳಷ್ಟು ಹಣ್ಣನ್ನು ಸೇವಿಸಬೇಕು. ಗರ್ಭಿಣಿ ಮಹಿಳೆಯರಿಗೆ ಕಬ್ಬಿಣ ಮತ್ತು ಫೋಲಿಕ್ ಆಮ್ಲಗಳ ಅವಶ್ಯಕತೆ ಹೆಚ್ಚಿರುವುದರಿಂದ 100 ಗ್ರಾಂ ಹಸಿರು ಸೊಪ್ಪು ತರಕಾರಿಗಳನ್ನು ಸೇವಿಸಬೇಕು. ಉತ್ತಮ ಆರೋಗ್ಯ ನಿರ್ವಹಣೆಯಲ್ಲಿ ಈ ತರಕಾರಿಗಳು ಪ್ರಮುಖ ಪಾತ್ರ ವಹಿಸಿವೆ.

ಭಾರತವು ತರಕಾರಿಗಳ ಉತ್ಪಾದನೆಯಲ್ಲಿ ವಿಶ್ವದಲ್ಲೇ ಎರಡನೇ ಸ್ಥಾನ ಪಡೆದುಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ. ನಮ್ಮ ದೇಶವು ವಿಶ್ವದ ತರಕಾರಿ ಉತ್ಪಾದನೆಯ ಪ್ರತಿಶತ 14ರಷ್ಟು, ಅಂದರೆ 144.55 ಮಿಲಿಯನ್ ಟನ್‌ಗಳಷ್ಟು, ಉತ್ಪಾದನೆ ಮಾಡುತ್ತಿದೆ. ಭಾರತವು ಜಗತ್ತಿನ ಶೇಕಡಾ 15ರಷ್ಟು (8.5 ಮಿಲಿಯನ್ ಹೆಕ್ಟೇರ್) ಪ್ರದೇಶದಲ್ಲಿ ತರಕಾರಿಗಳನ್ನು ಬೆಳೆಯುತ್ತಿದೆ. ಇವು ಹೆಚ್ಚು ತೇವಾಂಶ ಹೊಂದಿರುವುದರಿಂದ, ಬಹಳ ಬೇಗ ಹಾಳಾಗುತ್ತವೆ. ಈ ಕಾರಣದಿಂದ ಇವುಗಳ ಮೌಲ್ಯವರ್ಧನೆ ಅವಶ್ಯವಾಗಿದೆ. ಮುಂದುವರೆದ



ರಾಷ್ಟ್ರಗಳಲ್ಲಿ ಶೇಕಡಾ 60ರಿಂದ 70ರಷ್ಟು ತರಕಾರಿಗಳ ಮೌಲ್ಯವರ್ಧನೆಯಾಗುತ್ತಿದೆ. ಆದರೆ, ನಮ್ಮ ದೇಶದಲ್ಲಿ ಶೇಕಡಾ 2ರಿಂದ 5ರಷ್ಟು ಮಾತ್ರ ಮೌಲ್ಯವರ್ಧನೆಯಾಗುತ್ತಿದೆ.

ತರಕಾರಿಗಳನ್ನು ವಮೌಲ್ಯವರ್ಧನೆ ಮಾಡುವುದರಿಂದ, (1) ಬಹಳ ದಿನಗಳವರೆಗೆ ಕೆಡದಂತೆ ಸಂರಕ್ಷಿಸಬಹುದು ಮತ್ತು ಅವುಗಳ ಮೌಲ್ಯವನ್ನು ಹೆಚ್ಚಿಸಬಹುದು, (2) ವರ್ಷಪೂರ್ತಿ ಉಪಯೋಗಿಸಬಹುದು, ಮತ್ತು (3) ವಿವಿಧ ರೀತಿಯ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿ ಬಳಸಬಹುದು. ತರಕಾರಿಗಳನ್ನು 3 ವಿಧಗಳಾಗಿ ವಿಂಗಡಿಸಬಹುದು: (1) ಹಸಿರು ಸೊಪ್ಪು ತರಕಾರಿಗಳು. (2) ಗಡ್ಡೆ ತರಕಾರಿಗಳು. ಮತ್ತು (3) ಇತರೆ ತರಕಾರಿಗಳು ಮತ್ತು ಹಸಿ ಕಾಳುಗಳು.

1. **ಹಸಿರು ಸೊಪ್ಪು ತರಕಾರಿಗಳು**: ಮುಖ್ಯವಾಗಿ ಪಾಲಕ್, ಮೆಂತ್ಯೆ, ರಾಜಗಿರಿ/ದಂಟು, ನುಗ್ಗೆ, ಅಗಸೆ, ಪುದೀನ, ಸಬ್ಬಸ್ಸಿಗೆ, ಮೂಲಂಗಿ, ಮುಂತಾದವುಗಳು ಈ ಗುಂಪಿಗೆ ಸೇರುವಂತಹುಗಳಾಗಿವೆ. ಇವು ಕ್ಯಾಲ್ಸಿಯಂ, ಕಬ್ಬಿಣ, ಬಿಟಾ ಕೆರೋಟಿನ್, ವಿಟಾಮಿನ್ ಸಿ, ರೈಬೋಫ್ಲೆವಿನ್ ಮತ್ತು ಫೋಲಿಕ್ ಆಮ್ಲಗಳ ಆಗರವಾಗಿವೆ. ಹಸಿರು ಸೊಪ್ಪುಗಳನ್ನು ಒಣಗಿಸಿ ಪುಡಿ ಮಾಡಿ ಚಪಾತಿ, ರೊಟ್ಟಿ, ಪಲ್ಯ ಹಾಗೂ ಇತರೆ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಬಳಸಬಹುದು. ಪಾಲಕ್, ಮೆಂತ್ಯೆ, ನುಗ್ಗೆ, ದಂಟು, ಮೂಲಂಗಿ, ಇತ್ಯಾದಿ ಸೊಪ್ಪುಗಳನ್ನು ಕತ್ತರಿಸಿ ಸ್ವಲ್ಪ ಉಪ್ಪು, ಜೀರಿಗೆ, ಹಸಿ ಮೆಣಸಿನಕಾಯಿ ಸೇರಿಸಿ, ರುಬ್ಬಿ, ಗೋಧಿ ಹಿಟ್ಟಿನ ಜೊತೆ ಬೆರೆಸಿ, ಪರೋಟ ತಯಾರಿಸಬಹುದು. ಹಾಗೆಯೆ, ಬಜ್ಜಿ, ಪಕೋಡ ತಯಾರಿಕೆಯಲ್ಲಿ ಬಳಸಬಹುದು. ಈ ಸೊಪ್ಪುಗಳ ಜೊತೆ ಸ್ವಲ್ಪ ಉಪ್ಪು ಹಾಗೂ ನೀರು ಬೆರೆಸಿ ಮಿಕ್ಸರ್‌ನಲ್ಲಿ ಜ್ಯೂಸ್ ತಯಾರಿಸಿ ಸೇವಿಸಬಹುದು ಮತ್ತು ಈ ರಸವನ್ನು ಹಪ್ಪಳ ಮತ್ತು ಸಂಡಿಗೆ ತಯಾರಿಸುವಾಗ ಸೇರಿಸಬಹುದು. ಹಸಿರು ಸೊಪ್ಪುಗಳನ್ನು ಹುರಿದು, ಜೊತೆಗೆ ಉಪ್ಪು, ಅಚ್ಚಕಾರದ ಪುಡಿ, ಜೀರಿಗೆ, ಬೆಳ್ಳುಳ್ಳಿ ಮತ್ತು ಬೆಲ್ಲ ಸೇರಿಸಿ ಚಟ್ನಿ ಮಾಡಬಹುದು. ಇದನ್ನು

ಪೂರಿ, ರೊಟ್ಟಿ, ಚಪಾತಿ ಹಾಗೂ ಇತರೆ ಆಹಾರಗಳ ಜೊತೆ ಸವಿಯಬಹುದು.

2. **ಗಡ್ಡೆ ತರಕಾರಿಗಳು**: ಆಲೂಗಡ್ಡೆ, ಗೆಣಸು, ಕ್ಯಾರೆಟ್, ಬೀಟ್‌ರೂಟ್, ಸುವರ್ಣಗಡ್ಡೆ, ಇತ್ಯಾದಿ. ಇವುಗಳು ಕಾರ್ಬೊಹೈಡ್ರೇಟ್‌ಗಳ ಆಗರವಾಗಿದ್ದು, ಶಕ್ತಿಯನ್ನು ಒದಗಿಸುತ್ತವೆ. ಕ್ಯಾರೆಟ್ ಕೆರೋಟಿನ್ ಅಂಶ ಹೊಂದಿದೆ ಮತ್ತು ಆಲೂಗಡ್ಡೆ ಜೀವಸತ್ವ ಸಿ ಅಂಶ ಹೊಂದಿದೆ. ಸುವರ್ಣಗಡ್ಡೆಯು ಕ್ಯಾಲ್ಸಿಯಂನ ಆಗರವಾಗಿದೆ. ಇವುಗಳಲ್ಲಿ





ಕೆಲವೊಂದು ತರಕಾರಿಗಳ ಮೌಲ್ಯವರ್ಧನೆಯ ಬಗ್ಗೆ ವಿವರಿಸಲಾಗಿದೆ,

***ಆಲೂಗಡ್ಡೆ ಚಿಪ್ಸ್***:– ಆಲೂಗಡ್ಡೆಯನ್ನು ಚೆನ್ನಾಗಿ ತೊಳೆದು, ಸಿಪ್ಪೆ ತೆಗೆದು ಚಿಪ್ಸ್ ತಯಾರಿಸುವ ಮಣೆಯಿಂದ ಆಲೂಗಡ್ಡೆಯನ್ನು ಚಿಪ್ಸ್ ಆಕಾರದಲ್ಲಿ ತುರಿದು, ಕಾಯ್ದ ಎಣ್ಣೆಯಲ್ಲಿ ಹಾಕಿ ಕರೆಯಬೇಕು. ನಂತರ ಉಪ್ಪು ಮತ್ತು ಖಾರವನ್ನು ಸಿಂಪಡಿಸಬೇಕು. ಇವುಗಳನ್ನು ಪಾಲಿಥಿನ್ ಬ್ಯಾಗುಗಳಲ್ಲಿ ಶೇಖರಿಸಿಡಬೇಕು.

**ಆಲೂಗಡ್ಡೆ ಫಿಂಗರ್ ಚಿಪ್ಸ್**:– ಆಲೂಗಡ್ಡೆಯನ್ನು ಉದ್ದುದ್ದ ಕತ್ತರಿಸಿ, ನಂತರ ನೀರಿನಲ್ಲಿ ಅರ್ಧ ಬೇಯಿಸಿ, ಆಮೇಲೆ ಅವುಗಳನ್ನು ಎಣ್ಣೆಯಲ್ಲಿ ಕರೆದು, ಉಪ್ಪು ಮತ್ತು ಖಾರ ಸಿಂಪಡಿಸಬೇಕು.

***ಕ್ಯಾರೆಟ್ ಹಲ್ವ***:– ಬೇಕಾಗುವ ಸಾಮಗ್ರಿಗಳು, (1) ತುರಿದ ಕ್ಯಾರೆಟ್– 1 ಬಟ್ಟಲು, (2) ಸಕ್ಕರೆ – 1 ಬಟ್ಟಲು, (3) ಹಾಲು– 1 ಬಟ್ಟಲು, (4) ತುಪ್ಪ–1/4 ಬಟ್ಟಲು, (5) ಏಲಕ್ಕಿ ಪುಡಿ– 1/4 ಚಹಾ ಚಮಚ, (6) ಗೊಡಂಬಿ–10–15, ಮತ್ತು (7) ದ್ರಾಕ್ಷಿ–8–10. ಮಾಡುವ ವಿಧಾನವೆಂದರೆ, (1) ತುರಿದ ಕ್ಯಾರೆಟ್ ಮತ್ತು ಹಾಲನ್ನು ದಪ್ಪ ತಳದ ಪಾತ್ರೆಗೆ ಹಾಕಿ ಬೇಯಿಸಿ, (2) ನಂತರ ತುಪ್ಪ, ಸಕ್ಕರೆ, ಏಲಕ್ಕಿಪುಡಿಯನು ಸೇರಿಸಿ ಬೇಯಿಸಿ, (3) ತಳಕ್ಕೆ ಹತ್ತದ ಹಾಗೆ ಚಮಚದಿಂದ ಗೊಟಾಯಿ ಸುತ್ತಿರಬೇಕು, (4) ಕೊನೆಯಲ್ಲಿ ತುಪ್ಪದಲ್ಲಿ ಹುರಿದ ಗೊಡಂಬಿ ಮತ್ತು ದ್ರಾಕ್ಷಿ ಸೇರಿಸಿ. ಕ್ಯಾರೆಟ್‌ನಲ್ಲಿರುವ ಕ್ಯಾರೋಟಿನ್ ಅಂಶವು ಕಣ್ಣಿನ ದೃಷ್ಟಿಗೆ ಅತಿಮುಖ್ಯವಾದುದು. ಕ್ಯಾರೆಟ್ ಬಳಸಿ ಕ್ಯಾರೆಟ್ ಹಲ್ವ ತಯಾರಿಸಬಹುದು.

***ಕ್ಯಾರೆಟ್ ಮತ್ತು ಬಿಟ್‌ರೂಟ್ ಜ್ಯೂಸ್***:– ಬೇಕಾಗುವ ಸಾಮಗ್ರಿಗಳೆಂದರೆ, (1) ತುರಿದ ಕ್ಯಾರೆಟ್/ಬಿಟ್‌ರೂಟ್– 1 ಬಟ್ಟಲು, (2) ಉಪ್ಪು–





ರುಚಿಗೆ ತಕ್ಕಷ್ಟು. ಮಾಡುವ ವಿಧಾನವೆಂದರೆ, ತುರಿದ ಕ್ಯಾರೆಟ್ ಅಥವಾ ಬಿಟ್‌ರೂಟ್‌ಗೆ ಸ್ವಲ್ಪ ಉಪ್ಪು ಹಾಗೂ ನೀರನ್ನು ಮಿಶ್ರಮಾಡಿ ರಸವನ್ನು ಸೋಸಿ ನಂತರ ಸೇವಿಸಬಹುದು.

3. **ಇತರೆ ತರಕಾರಿಗಳು**: ಟೊಮ್ಯಾಟೊ, ಹಸಿ ಮೆಣಸಿನಕಾಯಿ, ಬದನೆ, ಬೆಂಡೆ, ಗೋರಿಕಾಯಿ (ಚವಳಿಕಾಯಿ), ಹಾಗಲಕಾಯಿ, ಬಳ್ಳಿ ತರಕಾರಿಗಳು (ಹಾಗಲ, ಹೀರೆಕಾಯಿ, ಸೌತೆಕಾಯಿ), ಇತ್ಯಾದಿಗಳು. ಇವುಗಳಲ್ಲಿ ಜೀವಸತ್ವಗಳು, ಇತರೆ ಖನಿಜ ಲವಣಗಳು ಮತ್ತು ನಾರಿನಂಶ ಹೆಚ್ಚಾಗಿರುತ್ತವೆ. ಇವುಗಳಲ್ಲಿ ಕೆಲವೊಂದು ತರಕಾರಿಗಳ ಮೌಲ್ಯವರ್ಧನೆಯ ಬಗ್ಗೆ ತಿಳಿಸಲಾಗಿದೆ,

ಟೊಮ್ಯಾಟೊ ಕಡಿಮೆ ಬೆಲೆಗೆ ದೊರೆಯುವಂತಹ ಸಂದರ್ಭದಲ್ಲಿ ಅವುಗಳನ್ನು ಖರೀದಿಸಿ, ಮೌಲ್ಯವರ್ಧನೆ ಮಾಡಬಹುದು. ಟೊಮ್ಯಾಟೊ ಚಟ್ನಿ, ಸೂಪ್, ಪಲ್ಪ್, ಸಾಸ್, ಉಪ್ಪಿನಕಾಯಿ, ಇತ್ಯಾದಿ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಬಹುದು.

***ಟೊಮ್ಯಾಟೊ ಚಟ್ನಿ***:– ಬೇಕಾಗುವ ಸಾಮಗ್ರಿಗಳೆಂದರೆ, (1) ಟೊಮ್ಯಾಟೊ ತಿರುಳು– 2 ಬಟ್ಟಲು, (2) ಈರುಳ್ಳಿ– 1 ಬಟ್ಟಲು, (3) ಸಕ್ಕರೆ– 1 ಬಟ್ಟಲು, (4) ಉಪ್ಪು–ರುಚಿಗೆ ತಕ್ಕಷ್ಟು, (5) ಶುಂಠಿ (ತುರಿದ)–2 ತುಂಡು, (6) ಕೆಂಪು ಮೆಣಸಿನಕಾಯಿ–5–6, (7) ಸಂರಕ್ಷಕ ವಸ್ತು (ವಿನೆಗರ್)– 1 ಚಿಟಿಕೆ. ಮಾಡುವ ವಿಧಾನವೆಂದರೆ, (1) ಚೆನ್ನಾಗಿರುವ, ಪೂರ್ತಿ ಹಣ್ಣಾದ, ಕೆಂಪನೆಯ ಹಣ್ಣುಗಳನ್ನು ಆಯ್ದುಕೊಳ್ಳಿ. (2) ಹಣ್ಣುಗಳನ್ನು ಕುದಿಯುತ್ತಿರುವ ನೀರಿನಲ್ಲಿ ಒಂದು ನಿಮಿಷ ಹಾಕಿ. ತಕ್ಷಣ ತಣ್ಣೀರಿನಲ್ಲಿ ಇಡಬೇಕು. ಈ ರೀತಿ ಮಾಡುವುದರಿಂದ ಸಿಪ್ಪೆಯನ್ನು ಸುಲಭವಾಗಿ ತೆಗೆಯಬಹುದು. (3) ಸಿಪ್ಪೆಯನ್ನು ತೆಗೆದು ತಿರುಳನ್ನು ಅರೆಯಬೇಕು. (4) ವಿನೆಗರ್ ಅನ್ನು ಬಿಟ್ಟು, ಎಲ್ಲಾ ಸಾಮಗ್ರಿಗಳನ್ನು ಒಂದು ಪಾತ್ರೆಯಲ್ಲಿ ಹಾಕಿ ದಪ್ಪಗಿನ ಸಾಂದ್ರತೆಯಾಗುವವರೆಗೆ ಬೇಯಿಸಬೇಕು. (5) ವಿನೆಗರ್ ಅನ್ನು ಸೇರಿಸಿ ಹತ್ತು ನಿಮಿಷ ಪುನಃ ಬೇಯಿಸಿ, ಮೊದಲೇ ಶುದ್ಧಿಕರಿಸಿದ ದೊಡ್ಡ ಬಾಯಿಯುಳ್ಳ ಬಾಟಲಿಯಲ್ಲಿ ಹಾಕಿ. (6) ನಂತರ ಬಾಟಲಿಗಳನ್ನು ಸೀಲ್ ಮಾಡಿ ತಣ್ಣಗಿನ ಮತ್ತು ಒಣಗಿದ ಸ್ಥಳದಲ್ಲಿ ಇಡಿ.



***ಟೊಮ್ಯಾಟೊ ಸೂಪ್:***– ಬೇಕಾಗುವ ಸಾಮಗ್ರಿಗಳೆಂದರೆ, (1) ಟೊಮ್ಯಾಟೊ ತಿರುಳು– 1 ಕೆಜಿ, (2) ಉಪ್ಪು– ರುಚಿಗೆ ತಕ್ಕಷ್ಟು, (3) ಮುಸುಕಿನ ಜೋಳದ ಹಿಟ್ಟು– 2–3 ಚಮಚ, (4) ಈರುಳ್ಳಿ–1/2 ಬಟ್ಟಲು, (5) ಬೆಣ್ಣೆ– 2 ಚಹ ಚಮಚ, (6) ಬೆಳ್ಳುಳ್ಳಿ– 5 ದಳ, (7) ಕರಿಮೆಣಸು– 1 ಚಹಾ ಚಮಚ, (8) ಚಕ್ಕೆ – 1 ತುಂಡು, (9) ಏಲಕ್ಕಿ–1 ಕಾಯಿ. ಮಾಡುವ ವಿಧಾನವೆಂದರೆ, (1) ಪೂರ್ತಿ ಮಾಗಿದ, ಕೆಂಪು ಬಣ್ಣವುಳ್ಳ ಹಣ್ಣುಗಳನ್ನು ತೆಗೆದುಕೊಂಡು ತುಂಡುಗಳಾಗಿ ಕತ್ತರಿಸಿ. (2) ಸಿಪ್ಪೆಯು ತಿರುಳಿನಿಂದ ಬಿಡುವವರೆಗೆ ಐದರಿಂದ ಹತ್ತು ನಿಮಿಷ ಬೇಯಿಸಿ. (3) ಈಗ ತಿರುಳನ್ನು ಮಸ್ಲಿನ್ ಬಟ್ಟೆಯ ಮೂಲಕ ಸೋಸಿ, ಬೀಜ ಮತ್ತು ಸಿಪ್ಪೆಯನ್ನು ತಿರುಳಿನಿಂದ ಬೇರ್ಪಡಿಸಿ. (4) ತಿರುಳನ್ನು ಕಾಯಿಸುತ್ತಾ, ಬೆಣ್ಣೆಯನ್ನು ಬೆರೆಸಿ, ಈರುಳ್ಳಿ, ಬೆಳ್ಳುಳ್ಳಿಯನ್ನು ಸೇರಿಸಿ, 30 ನಿಮಿಷ ಪಾತ್ರೆಯ ಬಾಯಿ ಮುಚ್ಚಿ ಬೇಯಿಸಿ. ಈಗ ಉಪ್ಪು, ಸಕ್ಕರೆ, ಮೆಣಸಿನ ಪುಡಿಯನ್ನು ಸೇರಿಸಿ ಪುನಃ 30 ನಿಮ್ಮ ಪಾತ್ರೆಯ ಬಾಯಿ ಮುಚ್ಚಿ ಬೇಯಿಸಿ. (5) ದಪ್ಪಗಿನ ಪೇಸ್ಟ್ ತರಹ ಮಾಡಿ, ಕುದಿಸಿ ಮಸ್ಲಿನ್ ಬಟ್ಟೆಯ ಮೂಲಕ ಸೋಸಬೇಕು. (6) ಮಸಾಲೆ ಪದಾರ್ಥ, ಈರುಳ್ಳಿ, ಬೆಳ್ಳುಳ್ಳಿಯನ್ನು ಒಂದು ಬಟ್ಟೆಯಲ್ಲಿ ಕಟ್ಟಿ ಟೊಮ್ಯಾಟೊ ತಿರುಳಿನಲ್ಲಿ ಹಾಕಿ 30–45 ನಿಮಿಷದವರೆಗೆ ಕುದಿಸಬೇಕು. (7) ಪುನಃ ಬೇಯಿಸಿ. ಬಿಸಿಯಿರುವಾಗಲೇ ದೊಡ್ಡ ಕ್ಯಾನ್‌ನಲ್ಲಿ ಹಾಕಬೇಕು. (8) ಕ್ಯಾನ್‌ಗಳನ್ನು ಸೀಲ್ ಮಾಡಿ, 45 ನಿಮಿಷ ಪ್ರೇಷರ್ ಕುಕ್ಕರ್‌ನಲ್ಲಿ ಇಟ್ಟು ಬೇಯಿಸಿ. (9) ಕ್ಯಾನ್‌ಗಳನ್ನು ತಣ್ಣಗೆ ಮಾಡಿ ಶೇಖರಿಸಿಡಿ.

***ಟೊಮ್ಯಾಟೊ ಪ್ಯೂರಿ:***– ಬೇಕಾಗುವ ಸಾಮಗ್ರಿಗಳೆಂದರೆ, (1) ಟೊಮ್ಯಾಟೊ ರಸ– 1 ಕಪ್, (2) ಉಪ್ಪು–2 ಚಮಚ, (3) ನಿಂಬೆ ಉಪ್ಪು (ಸಿಟ್ರಿಕ್ ಆಮ್ಲ)–1 ಚಿಟಿಕೆ, (4) ಸಂರಕ್ಷಕ ವಸ್ತು (ಸೋಡಿಯಂ ಬೆಂಜೋಯೆಟ್)–1 ಚಿಟಿಕೆ. ಮಾಡುವ ವಿಧಾನವೆಂದರೆ, ಟೊಮ್ಯಾಟೊ ಕತ್ತರಿಸಿ ಬೆಯಿಸಿ, ಸೋಸಿ ರಸ ತೆಗೆಯಿರಿ. ನಿಂಬೆ ಉಪ್ಪು ಹಾಕಿ ಗಟ್ಟಿಯಾಗುವವರೆಗೆ ಕುದಿಸಿ. ನಂತರ ರಕ್ಷಕ ವಸ್ತು ಮಿಶ್ರಮಾಡಿ.

***ಟೊಮ್ಯಾಟೊ ಸಾಸ್:***– ಬೇಕಾಗುವ ಸಾಮಗ್ರಿಗಳೆಂದರೆ, (1) ಟೊಮ್ಯಾಟೊ – 1000 ಗ್ರಾಂ, (2) ಜೀರಿಗೆ – 0.5 ಗ್ರಾಂ, (3) ಮೆಣಸಿನ ಪುಡಿ–2 ಗ್ರಾಂ, (4) ಬೆಳ್ಳುಳ್ಳಿ–2 ಗ್ರಾಂ, (5) ಶುಂಠಿ–1 ಗ್ರಾಂ, (6) ಈರುಳ್ಳಿ– 20 ಗ್ರಾಂ, (7) ಸಕ್ಕರೆ– 150 ಗ್ರಾಂ, (8) ಪೆಕ್ಟಿನ್ – 0.1 %, (9) ಲವಂಗ–0.5 ಗ್ರಾಂ, (10) ಚಕ್ಕೆ–0.5 ಗ್ರಾಂ, (11) ಏಲಕ್ಕಿ–0.5 ಗ್ರಾಂ, (12) ಮೆಣಸು–1 ಗ್ರಾಂ, (13) ಉಪ್ಪು–0.5 ಗ್ರಾಂ, (14) ವಿನೆಗಾರ್–3 % (15) ಸಂರಕ್ಷಕವಸ್ತು–750ಪಿಪಿಎಮ್(0.75ಗ್ರಾಂ/ಕೆ.ಜಿ). ಮಾಡುವ ವಿಧಾನವೆಂದರೆ, (1) ಟೊಮ್ಯಾಟೊ ಪಲ್ಪ್‌ಗೆ ಸಕ್ಕರೆಯನ್ನು ಸೇರಿಸಿ ಒಲೆಯ ಮೇಲೆ ಬೇಯಿಸಲು ಇಡಬೇಕು. (2) ಎಲ್ಲ ಒಣ ಮಸಾಲೆಗಳನ್ನು ಹುರಿದು ಪುಡಿ ಮಾಡಬೇಕು. ಹಾಗೆಯೆ ಈರುಳ್ಳಿ, ಶುಂಠಿ ಮತ್ತು ಬೆಳ್ಳುಳ್ಳಿಯನ್ನು ಗ್ರೈಂಡರ್‌ನಲ್ಲಿ ರುಬ್ಬಿಕೊಂಡು, ಮಸ್ಲಿನ್ ಬಟ್ಟೆಯಲ್ಲಿ ಎಲ್ಲ ಮಸಾಲೆ ಪದಾರ್ಥಗಳನ್ನು ಕಟ್ಟಿ ಅದನ್ನು ಟೊಮ್ಯಾಟೊ ಪಲ್ಪ್‌ನಲ್ಲಿ ಜೋತುಬಿಡಬೇಕು. (3) ಪೆಕ್ಟಿನ್‌ಅನ್ನು ಸೇರಿಸಿ ಬ್ರಿಕ್ಸ್ 28 ತಲಪುವವರೆಗೂ ಕುದಿಸಿ. ವಿನೆಗರ್ ಸೇರಿಸಿ. ಗಾಜಿನ ಬಾಟಲಿಯಲ್ಲಿ ಶೇಖರಿಸಬಹುದು.

***ಟೊಮ್ಯಾಟೊ ಉಪ್ಪಿನಕಾಯಿ:***– ಬೇಕಾಗುವ ಸಾಮಗ್ರಿಗಳೆಂದರೆ, (1) ಟೊಮ್ಯಾಟೊ ಹಣ್ಣು – 1 ಕೆ.ಜಿ, (2) ಉಪ್ಪು– 1 ಬಟ್ಟಲು, (3) ಅಚ್ಚಕಾರದ ಪುಡಿ– 4 ಚಹ ಚಮಚ, (4) ಮೆಂತ್ಯದ ಪುಡಿ– 2 ಚಹ ಚಮಚ, (5) ಅರಿಶಿಣ– 1 ಚಹ ಚಮಚ, (6) ಹುಣಸೆ ಹಣ್ಣು– 1 ಬಟ್ಟಲು, (7) ಬೆಳ್ಳುಳ್ಳಿ– 5 ಗಡ್ಡೆ, (8) ಎಣ್ಣೆ– 1 ಬಟ್ಟಲು. ಮಾಡುವ ವಿಧಾನವೆಂದರೆ, (1) ಟೊಮ್ಯಾಟೊ ಹಣ್ಣುಗಳನ್ನು 4 ಹೋಳುಗಳಾಗಿ ಕತ್ತರಿಸಿ ಉಪ್ಪು, ಅರಿಶಿಣ ಹಾಕಿ ಒಂದು ದಿನ ನೆನೆಯಲು ಬಿಡಿ. (2) ಮರುದಿನ ಟೊಮ್ಯಾಟೊ ತುಂಡುಗಳನ್ನು ಸೋಸಿ ತೆಗೆದು 2–3 ಗಂಟೆ ಒಣಗಿಸಿ. (3) ಬಸಿದ ನೀರಿಗೆ ಹುಣಸೆ ಹಣ್ಣನ್ನು ಹಾಕಿ, 2–3 ಗಂಟೆ ನೆನೆಸಿ. ನಂತರ ಟೊಮ್ಯಾಟೊ ಬಿಟ್ಟು, ಉಳಿದ ಎಲ್ಲಾ ಸಾಮಾನುಗಳನ್ನು ಹಾಕಿ ರುಬ್ಬಿ ಕೊನೆಯಲ್ಲಿ ಒಗ್ಗರಣೆ ಹಾಕಿ

***ಹಸಿ ಟೊಮ್ಯಾಟೊ ಚಟ್ನಿ:***– ಬೇಕಾಗುವ ಸಾಮಗ್ರಿಗಳೆಂದರೆ, (1) ಹಸಿರು ಟೊಮ್ಯಾಟೊ– 1 ಕೆ.ಜಿ. (2) ಹಸಿ ಮೆಣಸಿನಕಾಯಿ– 250 ಗ್ರಾಂ, (3) ಎಣ್ಣೆ– 1/4 ಬಟ್ಟಲು, (4) ಕೊತ್ತಂಬರಿ ಸೊಪ್ಪು–1 ಬಟ್ಟಲು, (5) ರಿಶಿಣ ಪುಡಿ—1 ಚಮಚ, (6) ಸಕ್ಕರೆ– 2 ಚಮಚ, (7) ಉಪ್ಪು– 2 ಚಮಚ, (8) ಅಚ್ಚ ಕಾರದ ಪುಡಿ– 3 ಚಮಚ, (9) ನಿಂಬೆ ಉಪ್ಪು– 1 ಚಿಟಿಕೆ, (10) ಚಕ್ಕೆ– 1 ತುಂಡು. ಮಾಡುವ ವಿಧಾನವೆಂದರೆ, (1) ಟೊಮ್ಯಾಟೊ ಮತ್ತು ಹಸಿ ಮೆಣಸಿನಕಾಯಿಯನ್ನು ನುಣ್ಣಗೆ ರುಬ್ಬಿಕೊಳ್ಳಬೇಕು. (2) ಈ ಮಿಶ್ರಣವನ್ನು ದಪ್ಪ ತಳದ ಪಾತ್ರೆಯಲ್ಲಿ ಹಾಕಿ, ಮಂದ ಉರಿಯಲ್ಲಿ ಬೇಯಿಸಬೇಕು. (3) ಅದಕ್ಕೆ ಉಪ್ಪು, ಸಕ್ಕರೆ ಹಾಗೂ ರಕ್ಷಕವನ್ನು ಬಿಟ್ಟು, ಉಳಿದೆಲ್ಲ ಪದಾರ್ಥಗಳೊಂದಿಗೆ ಕುದಿಸಬೇಕು. ಕೊನೆಯಲ್ಲಿ ಸಕ್ಕರೆ, ಉಪ್ಪು ಹಾಗೂ ರಕ್ಷಕವನ್ನು ಸೇರಿಸಿ ಚೆನ್ನಾಗಿ ಬೆರೆಸಿ ನಂತರ ತಣ್ಣಗೆ ಮಾಡಿ ಶೇಖರಿಸಬಹುದು.

***ಟೊಮ್ಯಾಟೊ ಕೆಚಪ್:***– ಬೇಕಾಗುವ ಸಾಮಗ್ರಿಗಳೆಂದರೆ, (1) ಟೊಮ್ಯಾಟೊ ಜ್ಯೂಸ್– 1 ಕಪ್, (2) ಸಕ್ಕರೆ– 1/2 ಕಪ್, (3) ಉಪ್ಪು– 1 ಚಹಾ ಚಮಚ, (4) ಕತ್ತರಿಸಿದ ಈರುಳ್ಳಿ– 1/4 ಬಟ್ಟಲು, (5) ಬೆಳ್ಳುಳ್ಳಿ–5 ದಳ, (6) ಕರಿಮೆಣಸು, 5–6, (7) ಲವಂಗ, 4–5, (8) ಚಕ್ಕೆ– 1 ತುಂಡು, (9) ಏಲಕ್ಕಿ, 2–3, (10) ಕೆಂಪು ಮೆಣಸಿನ ಪುಡಿ– 1 ಚಮಚ. ಮಾಡುವ ವಿಧಾನವೆಂದರೆ, ಟೊಮ್ಯಾಟೊ ಮತ್ತು ಸಕ್ಕರೆಯನ್ನು ದಪ್ಪ ತಳದ ಪಾತ್ರೆಗೆ ಹಾಕಿ ಬೇಯಿಸಬೇಕು. ಒಂದು ತೆಳುವಾದ ಮಸ್ಲಿನ್ ಬಟ್ಟೆಯಲ್ಲಿ ಎಲ್ಲ ಮಸಾಲೆ ಪದಾರ್ಥಗಳನ್ನು ಸೇರಿಸಿ, ಗಂಟು ಕಟ್ಟಿ, ಕುದಿಯುತ್ತಿರುವ ಟೊಮ್ಯಾಟೊ ಜ್ಯೂಸ್‌ಗೆ ಹಾಕಿ, ಸ್ವಲ್ಪ ಸಮಯದ ನಂತರ ಬಟ್ಟೆಯನ್ನು ಹಿಂಡಿ ತೆಗೆಯಬೇಕು. ನಂತರ ಉಪ್ಪು, ರಕ್ಷಕ ವಸ್ತು ಸೇರಿಸಿ, 5 ನಿಮಿಷ ಬೇಯಿಸಿ, ತಣ್ಣಗಾದ ಮೇಲೆ ಶೇಖರಿಸಿಟ್ಟುಕೊಳ್ಳಬೇಕು. ಟೊಮ್ಯಾಟೊ ರಸವನ್ನು ಸಹ ಸಂಡಿಗೆ ಮತ್ತು ಹಪ್ಪಳಗಳ ತಯಾರಿಕೆಯಲ್ಲಿ ಬಳಸಬಹುದು.

***ಮಿಶ್ರ ತರಕಾರಿ ಉಪ್ಪಿನಕಾಯಿ:***– ಬೇಕಾಗುವ ಸಾಮಗ್ರಿಗಳೆಂದರೆ, (1) ಮಿಶ್ರತರಕಾರಿಗಳು–1ಕೆ.ಜಿ. (ಹಸಿ ಬಟಾಣಿ, ಕ್ಯಾರೆಟ್ ಬೀಟ್‌ರೂಟ್, ಬೀನ್ಸ್, ಚವಳಿಕಾಯಿ/ಗೋರಿಕಾಯಿ, ಹಸಿ ಟೊಮ್ಯಾಟೊ, ಹೂ ಕೋಸು), (2) ಉಪ್ಪು– 100 ಗ್ರಾಂ, (3) ಸಾಸಿವೆ – 25 ಗ್ರಾಂ, (4) ಖಾರದ ಪುಡಿ– 100 ಗ್ರಾಂ, (5) ಮೆಂತ್ಯ (ಹುರಿದದ್ದು)– 10 ಗ್ರಾಂ, (6) ಅರಿಶಿಣ ಪುಡಿ– 5 ಗ್ರಾಂ, (7) ಎಣ್ಣೆ–400 ಗ್ರಾಂ, (8) ಈರಳ್ಳಿ– 100 ಗ್ರಾಂ, (9) ಹಸಿ ಶುಂಠಿ–2 ಇಂಚು, (10) ಹಸಿಮೆಣಸಿನಕಾಯಿ– 50 ಗ್ರಾಂ, (11) ವಿನೆಗರ್, 15–20 ಎಮ್. ಎಲ್., (12) ಇಂಗು–1/2 ಚಮಚ, (13) ಬೆಳ್ಳುಳ್ಳಿ– 25 ಗ್ರಾಂ, (14)

ನಿಂಬಹಣ್ಣಿನೆ ರಸ ಅಥವಾ ಹುಣಸೆ ಹಣ್ಣಿನ ರಸ– 150 ಎಮ್.ಎಲ್. ಮಾಡುವ ವಿಧಾನವೆಂದರೆ, ತರಕಾರಿಗಳನ್ನು ಕತ್ತರಿಸಿ, ಒಣಗಿಸಿ, ಒಂದು ದಿನದ ನಂತರ ಪಾತ್ರೆಯಲ್ಲಿ ಎಣ್ಣೆ ಹಾಕಿ ಕಾಯಲು ಇಡಿ. ಅದಕ್ಕೆ ಸಾಸಿವೆ, ಇಂಗು, ಮೆಂತ್ಯೆ, ಬೆಳ್ಳುಳ್ಳಿ ಹಾಕಿ, ಒಗ್ಗರಣೆ ತಯಾರಿಸಿ, ಅದನ್ನು ತರಕಾರಿಗೆ ಸೇರಿಸಿ. ಗಾಜಿನ ಬಾಟಲಿ ಅಥವಾ ಬರಣಿಗಳಲ್ಲಿ ಶೇಖರಿಸಿ. 4–5 ದಿನಗಳ ನಂತರ ಬಳಸಬಹುದು.

***ಹಸಿ ಮೆಣಸಿನಕಾಯಿ ಪುಡಿ:–*** ಹಸಿ ಮೆಣಸಿನಕಾಯಿಯನ್ನು ಕುದಿಯುವ ನೀರಿಗೆ ಹಾಕಿ 10– 15 ನಿಮಿಷ ಬಿಟ್ಟು ನಂತರ ತೆಗೆಯಬೇಕು. ಆಗ ಹಸಿರು ಬಣ್ಣದಿಂದ ಬಿಳಿ ಬಣ್ಣಕ್ಕೆ



ತಿರುಗುವುದು. ಇದನ್ನು ಒಣಗಿಸಿ ಪುಡಿ ಮಾಡಿ ಚಪಾತಿ, ರೊಟ್ಟಿ ಹಾಗೂ ಹಪ್ಪಳಗಳ ತಯಾರಿಕೆಯಲ್ಲಿ ಬಳಸಬಹುದು.

***ಒಣ ಮೆಣಸಿನಕಾಯಿ ರಂಜಕ:–*** ಬೇಕಾಗುವ ಸಾಮಗ್ರಿಗಳೆಂದರೆ, (1) ಒಣಮೆಣಸಿನಕಾಯಿ– 1 ಕೆಜಿ. (2) ನಿಂಬೆಹಣ್ಣು– 15, (3) ಮೆಂತ್ಯ– 10 ಗ್ರಾಂ, (4) ಬೆಳ್ಳುಳ್ಳಿ– 100 ಗ್ರಾಂ,



(5) ಉಪ್ಪು ಮತ್ತು ಸಕ್ಕರೆ– ರುಚಿಗೆ ತಕ್ಕಷ್ಟು. ಮಾಡುವ ವಿಧಾನವೆಂದರೆ, ಒಣ ಮೆಣಸಿನಕಾಯಿಯನ್ನು, ಸ್ವಚ್ಛಮಾಡಿ, ಮಿಕ್ಕ ಪದಾರ್ಥಗಳೊಂದಿಗೆ, ನಿಂಬೆರಸದ ಸಹಾಯದಿಂದ ನುಣ್ಣಗೆ ರುಬ್ಬಿ, ಬಾಟಲಿನಲ್ಲಿ ಶೇಖರಣೆ ಮಾಡಿ.

***ಮೆಣಸಿನಕಾಯಿ ಬಾಳಕ:–*** ಬೇಕಾಗುವ ಸಾಮಗ್ರಿಗಳೆಂದರೆ, (1) ಹಸಿ ಮೆಣಸಿನಕಾಯಿ– 1 ಕೆ.ಜಿ., (2) ಸೀಮೆಅಕ್ಕಿ–1/2 ಕೆಜಿ., (3) ಉಪ್ಪು– ಸ್ವಲ್ಪ, (4) ಜೀರಿಗೆ ಪುಡಿ–50 ಗ್ರಾಂ, (5) ಮೊಸರು– 3 ಕಪ್. ಮಾಡುವ ವಿಧಾನವೆಂದರೆ, (1) ಸೀಮೆ ಅಕ್ಕಿಯನ್ನು ಮೊಸರಲ್ಲಿ 1 ರಿಂದ 2 ಗಂಟೆಗಳ ಕಾಲ ನೆನೆಸಿ. ನಂತರ ಅದಕ್ಕೆ ಉಪ್ಪು ಮತ್ತು ಜೀರಿಗೆ ಪುಡಿಯನ್ನು ಮಿಶ್ರಮಾಡಿ. (2) ಸ್ವಚ್ಛ ಮಾಡಿದ ಹಸಿ ಮೆಣಸಿನಕಾಯಿಯನ್ನು ಮಧ್ಯಕ್ಕೆ ಸೀಳಿ, ತಯಾರಿಸಿದ ಮಿಶ್ರಣವನ್ನು ತುಂಬಿ. (3) ಒಂದು ಪ್ಲಾಸ್ಟಿಕ್ ಹಾಳೆಯ ಮೇಲೆ ಹರಡಿ, ಬಿಸಿಲಿನಲ್ಲಿ ಒಣಗಿಸಿ, ಗಾಳಿಯಾಡದ ಡಬ್ಬದಲ್ಲಿ ಶೇಖರಿಸಿ. (4) ಸೀಮೆಅಕ್ಕಿಯನ್ನು ಆವಿಯಲ್ಲಿ ಸಹ ಬೆಯಿಸಿ ಮಿಶ್ರಮಾಡಬಹುದು.

***ಹಸಿ ಮೆಣಸಿನಕಾಯಿ ಉಪ್ಪಿನಕಾಯಿ:–*** ಬೇಕಾಗುವ ಸಾಮಗ್ರಿಗಳೆಂದರೆ, (1) ಹಸಿಮೆಣಸಿನಕಾಯಿ– 1 ಕೆ.ಜಿ., (2) ಉಪ್ಪು– 1/4ಕೆ.ಜಿ. (3) ಅರಿಶಿಣ– 5 ಚಮಚ, (4) ಸಾಸುವೆ ಪುಡಿ–5 ಚಮಚ, (5) ನಿಂಬೆಹಣ್ಣು– 4, (6) ಸಕ್ಕರೆ ಅಥವಾ ಬೆಲ್ಲ– 1 ಬಟ್ಟಲು, (7) ಮೆಂತ್ಯದ ಪುಡಿ– 4 ಚಮಚ, (8) ಇಂಗು– 1 ಚಮಚ. ಮಾಡುವ ವಿಧಾನವೆಂದರೆ, ಮೆಣಸಿನಕಾಯಿಯನ್ನು ಸ್ವಚ್ಛ ಮಾಡಿ, ಒಣಗಿಸಿ, ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿ. ಇದಕ್ಕೆ ಕತ್ತರಿಸಿದ ನಿಂಬೆಹಣ್ಣು ಮತ್ತು ಇತರೆ ಮಸಾಲೆ ಪದಾರ್ಥಗಳನ್ನು ಮಿಶ್ರಮಾಡಿ, 5–6 ದಿನಗಳ ನಂತರ ಉಪಯೋಗಿಸಿ.

***ಹಾಗಲಕಾಯಿ ಚಿಪ್ಸ್:–*** ಕಡಲೆ ಹಿಟ್ಟಿಗೆ ಉಪ್ಪು, ಅಚ್ಚಕಾರದ ಪುಡಿ ಹಾಕಿ ಹಾಗಲಕಾಯಿಯನ್ನು ದುಂಡಗೆ ಕತ್ತರಿಸಿ, ನಂತರ ಅದಕ್ಕೆ ಸ್ವಲ್ಪ ನಿಂಬೆ ರಸ ಬೆರೆಸಿ, ನಂತರ ಕಡಲೆ ಹಿಟ್ಟಿನಲ್ಲಿ ಅದ್ದಿ, ಎಣ್ಣೆಯಲ್ಲಿ ಕರೆಯಬೇಕು.

***ಹಾಗಲಕಾಯಿ ಉಪ್ಪಿನಕಾಯಿ:–*** ಬೇಕಾಗುವ ಸಾಮಗ್ರಿಗಳೆಂದರೆ, (1) ಹಾಗಲಕಾಯಿ–1 ಕೆ.ಜಿ.,



(2) ಹಸಿ ಮೆಣಸಿನಕಾಯಿ, 5–6, (3) ಸಾಸಿವೆ ಪುಡಿ–3 ಚಹ ಚಮಚ, (4) ನಿಂಬೆಹಣ್ಣು– 4–5, (5) ಮೆಂತ್ಯಕಾಳು– 1 ಚಹ ಚಮಚ, (6) ಅರಿಶಿಣ–1/2 ಚಹ ಚಮಚ, (7) ಇಂಗಿನಪುಡಿ– 1/4 ಚಹ ಚಮಚ, (8) ಉಪ್ಪು– 4–5 ಚಹ ಚಮಚ. ಮಾಡುವ ವಿಧಾನವೆಂದರೆ, ಹಾಗಲಕಾಯಿಯನ್ನು ತೊಳೆದು, ಒರೆಸಿ, ಬೀಜ ತೆಗೆದು, ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಬೇಕು. ಮೆಣಸಿನಕಾಯಿ ಮತ್ತು ನಿಂಬೆಹಣ್ಣುಗಳನ್ನು ಕತ್ತರಿಸಿ ತುಂಡು ಮಾಡಬೇಕು. ಈ ಹೋಳುಗಳಿಗೆ ಹುರಿದು ಪುಡಿ ಮಾಡಿದ ಮೆಂತ್ಯ, ಸಾಸಿವೆ ಪುಡಿ, ಅರಿಶಿಣ, ಇಂಗಿನ ಪುಡಿ, ಉಪ್ಪು, ಬೆರೆಸಿ ಚೆನ್ನಾಗಿ ಕಲೆಸಿ, ಬಾಟಲಿಯಲ್ಲಿ ತುಂಬಬೇಕು.

***ಬೂದು ಗುಂಬಳಕಾಯಿಹಲ್ವ:–*** ಬೇಕಾಗುವ ಸಾಮಗ್ರಿಗಳೆಂದರೆ, (1) ತುರಿದ ಬೂದುಗುಂಬಳಕಾಯಿ – 1 ಬಟ್ಟಲು, (2) ಸಕ್ಕರೆ – 1 ಬಟ್ಟಲು, (3) ಹಾಲು– 1 ಬಟ್ಟಲು, (4) ತುಪ್ಪ–1/4 ಬಟ್ಟಲು, (5) ಏಲಕ್ಕಿ ಪುಡಿ– 1/4 ಚಹಾ ಚಮಚ, (6) ಗೊಡಂಬಿ–



10–15, (7) ದ್ರಾಕ್ಷಿ–8–10. ಮಾಡುವ ವಿಧಾನವಂದರೆ, (1) ಬೂದುಗುಂಬಳಕಾಯಿಯನ್ನು ತೊಳೆದು, ಮೇಲಿನ ಸಿಪ್ಪೆಯನ್ನು ತೆಗೆದು, ತುರಿಯುವ ಮಣೆಯಿಂದ ತುರಿದು, ಅದನ್ನು ತುಪ್ಪದಲ್ಲಿ ಬೇಯಿಸಿ. (2) ನಂತರ ಸಕ್ಕರೆ ಮತ್ತು ಏಲಕ್ಕಿಪುಡಿಯನ್ನು ಸೇರಿಸಿ ಬೇಯಿಸಿ. (3) ತಳಕ್ಕೆ ಹತ್ತದ ಹಾಗೆ ಚಮಚದಿಂದ ಗೋಟಾಯಿಸುತ್ತಿರಬೇಕು. (4) ಕೊನೆಯಲ್ಲಿ, ತುಪ್ಪದಲ್ಲಿ ಹುರಿದ ಗೊಡಂಬಿ ಮತ್ತು ದ್ರಾಕ್ಷಿ ಸೇರಿಸಿ.

ಹಸಿಕಾಳುಗಳಾದ ಬಟಾಣಿ, ಅವರೆ, ತೊಗರಿ, ಅಲಸಂದೆ, ಇತ್ಯಾದಿಗಳನ್ನು ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಹಸಿಯಾಗಿ ಬಳಸಬಹುದು. ತರಕಾರಿಗಳನ್ನು ಹಸಿಯಾಗಿ ಹಾಗೂ ಬೇಯಿಸಿ ದಿನನಿತ್ಯದ ಖಾದ್ಯಗಳಲ್ಲಿ ಉಪಯೋಗಿಸುವುದಲ್ಲದೇ, ಅನೇಕ ರೀತಿಯ ಮೌಲ್ಯವರ್ಧಿತ ಉತ್ಪನ್ನಗಳನ್ನು ಮನೆಯಲ್ಲಿ ತಯಾರಿಸಿ ಉಪಯೋಗಿಸಬಹುದು. ಜೊತೆಗೆ ಮಾರಾಟ ಮಾಡಿ ಆದಾಯ ಗಳಿಸಬಹುದು,

# ರೈತರ ಆದಾಯ ದ್ವಿಗುಣ ಹಾಗೂ ನಗದುರಹಿತ ಬ್ಯಾಂಕಿಂಗ್

**ಎನ್. ಕುಮಾರಸ್ವಾಮಿ, ಶ್ರೀಮತಿ ಹೆಚ್.ವಿ. ದಿವ್ಯಾ, ಅರುಣ್ ಬಳಮಟ್ಟಿ**





ದಿನಾಂಕ 8 ನವೆಂಬರ್ 2016ರಂದು ಯಾವುದೇ ಮುನ್ಸೂಚನೆ ಇಲ್ಲದೆ ರೂ. 500 ಹಾಗೂ ರೂ. 1000 ನೋಟುಗಳನ್ನು ಅಮೌಲ್ಯೀಕರಣಗೊಳಿಸಿ ಆದೇಶ ಹೊರಡಿಸುತ್ತಿದ್ದಂತೆಯೆ ದೇಶಾದ್ಯಂತ ಸಂಚಲನ ಉಂಟಾಯಿತು. ನಗದು ವ್ಯವಹಾರವನ್ನೆ ಅವಲಂಬಿಸಿದ ದೇಶದ ಬಹುತೇಕ ಜನರಿಗೆ ಮುಂದೇನು ಎಂದು ಗಾಬರಿಯಾಗಿದ್ದು ಸಹಜ. ಹಠಾತ್ತಾಗಿ ಜಾರಿಗೆ ಬಂದ ಕಾನೂನಿನಿಂದ ಎಲ್ಲರೂ ದಿಗ್ಭ್ರಮೆಗೊಳಗಾಗಿದ್ದಾರೆ. ದಿನನಿತ್ಯದ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸಲು ಈಗಾಗಲೆ ಲಭ್ಯವಿದ್ದ ಮತ್ತು ನವೆಂಬರ್ 8ರ ನಂತರ ಹೊರಬರುತ್ತಿರುವ ಅನೇಕ ಪರ್ಯಾಯಗಳು ನಮ್ಮ ಮುಂದೆ ಅನೇಕ ಸಾಧ್ಯತೆಗಳನ್ನು ಪ್ರಸ್ತುತಪಡಿಸುತ್ತಿವೆ. ಆದರೆ, ಇಂಟರ್‌ನೆಟ್ ಹಾಗೂ ಸ್ಮಾರ್ಟ್ ಫೋನ್ ಆಧಾರಿತ ಹೆಚ್ಚಿನ ಉಪಕ್ರಮಗಳು ಅನೇಕರ ಕೈಗೆಟುವುದು ಸುಲಭವಲ್ಲ.

ಹೆಚ್ಚಾಗಿ ನಗದು ರೂಪದಲ್ಲೇ ವ್ಯವಹಾರ ನಡೆಸುವ ರೈತಾಪಿ ವರ್ಗ ಇತ್ತ ನಗದು ವ್ಯವಹಾರ ನಡೆಸಲು ಹಣವಿಲ್ಲದೆ, ಅತ್ತ ಮಾಹಿತಿ ತಂತ್ರಜ್ಞಾನದ ಕೊರತೆಯಿಂದಾಗಿ ಆಧುನಿಕ ಮೊಬೈಲ್, ಇಂಟರ್‌ನೆಟ್ ಬಳಸಿ ವ್ಯವಹಾರ ಮಾಡಲು ತಿಳಿಯದೆ ಹೆಚ್ಚಿನ ತೊಂದರೆ ಅನುಭವಿಸುವಂತಾಗಿದೆ. ಈ ನಿಟ್ಟಿನಲ್ಲಿ ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರವು ಈ ಬಾರಿಯ ರೈತ ದಿನಾಚರಣೆಯ ಅಂಗವಾಗಿ ರೈತರ ಆದಾಯ ದ್ವಿಗುಣಗೊಳಿಸುವಿಕೆ ಹಾಗು ನಗದುರಹಿತ ವಹಿವಾಟು ನಡೆಸುವ ಮಾರ್ಗೋಪಾಯಗಳನ್ನು ಚರ್ಚಿಸಲು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್), ಮೈಸೂರು, ಹಾಗೂ ಕೃಷಿ ತಂತ್ರಜ್ಞರ ಸಂಸ್ಥೆ – ಮೈಸೂರು ಅಧ್ಯಾಯ, ಇವರ ಸಹಯೋಗದೊಂದಿಗೆ ಡಿಸೆಂಬರ್ 28ರಂದು ಒಂದು ದಿನದ ಕಾರ್ಯಾಗಾರವನ್ನು ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಂಡಿತ್ತು.

**ರೈತರ ಆದಾಯ ದ್ವಿಗುಣ**: ಕೆವಿಕೆಯ ಮುಖ್ಯಸ್ಥರಾದ ಡಾ॥ ಅರುಣ್ ಬಳಮಟ್ಟಿಯವರು, ರೈತರು ತಮ್ಮ ಆದಾಯವನ್ನು ದ್ವಿಗುಣ ಗೊಳಿಸಿಕೊಳ್ಳಬೇಕಾದರೆ ಉತ್ಪಾದಕತೆ ಹೆಚ್ಚಿಸಿಕೊಳಲು ತಂತ್ರಜ್ಞಾನ ಬಳಸುವುದರೊಂದಿಗೆ ತಜ್ಞರ ಮಾರ್ಗದರ್ಶನ ಪಡೆದು ಖರ್ಚು ತಗ್ಗಿಸುವ ಪ್ರಯತ್ನಗಳನ್ನೂ ಮಾಡಬೇಕು; ಹಾಗೆಯೆ, ಇದುವರೆಗೆ ಸಾಂಪ್ರದಾಯಿಕ ಮನೋಭಾವದಿಂದ ಉತ್ಪಾದಕತೆ, ಉತ್ಪಾದನೆ ಇವುಗಳಿಗೆ ಸೀಮಿತವಾಗದೆ, ಉತ್ಪಾದನೆಯ ನಂತರದ ಮಾರುಕಟ್ಟೆ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವುದರೊಂದಿಗೆ ರೈತ ಉದ್ಯಮಿಯಾಗಿ ಹೊರಹೊಮ್ಮಬೇಕು ಎಂದು ಅಭಿಪ್ರಾಯಪಟ್ಟರು. ಇದಕ್ಕಾಗಿ ಇದೀಗ ರೈತ ಉತ್ಪಾದಕರ ಕಂಪನಿ ಸ್ಥಾಪನೆಗೆ ಲಭ್ಯವಿರುವ ಅವಕಾಶವನ್ನು ಬಳಸಿಕೊಂಡು ಸಂಘಟಿತರಾಗಬೇಕು. ಕೃಷಿ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವುದು, ಬೆಳೆಯ ಖರ್ಚು–ವೆಚ್ಚಗಳನ್ನು ಕಡಿಮೆ ಮಾಡಿಕೊಳ್ಳುವುದು ಹಾಗೂ ಉಪಕಸುಬುಗಳನ್ನು ಜೊತೆ ಜೊತೆಯಲ್ಲೇ ಸರಿದೂಗಿಸಿಕೊಂಡು ಹೋಗುವುದರಿಂದ ತಮ್ಮ ಆದಾಯವನ್ನು ದ್ವಿಗುಣಗೊಳಿಸಿಕೊಳ್ಳ ಬಹುದಾಗಿದೆ ಎಂದು ತಿಳಿಸಿದರು.

ಮೈಸೂರಿನ ಕೃಷಿ ತಂತ್ರಜ್ಞಾನ ಸಂಸ್ಥೆ – ಮೈಸೂರು ಅಧ್ಯಾಯದ ಅಧ್ಯಕ್ಷರಾದ ಡಾ॥ ಎಂ. ಮಹಾಂತೇಶಪ್ಪನವರು ಮಾತನಾಡಿ, ಬರಗಾಲದಿಂದಾಗಿ ರೈತರು ಕಂಗಾಲಾಗಿದ್ದಾರೆ; ಈ ಕುರಿತು ಕೇಂದ್ರಸರ್ಕಾರವು ಮುಂದಿನ ಆರು ವರ್ಷದೊಳಗೆ ರೈತರ ಆದಾಯವನ್ನು ದ್ವಿಗುಣಗೊಳಿಸಲು 40 ಅಂಶದ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದನ್ನು ವಿವರಿಸಿದರು. ಉತ್ಪಾದಕತೆಯನ್ನು ಹೆಚ್ಚಿಕೊಳ್ಳುವುದರ ಮೂಲಕ ಆದಾಯವನ್ನು ಹೆಚ್ಚಿಕೊಳ್ಳುವುದು, ನೀರಿನ ಸಮರ್ಪಕ ಬಳಕೆ, ಸಮಗ್ರ ಕೃಷಿ ಪದ್ಧತಿ, ಯೋಗ್ಯ ಮಾರುಕಟ್ಟೆ ದರ ಹಾಗೂ ಜೈವಿಕ ತಂತ್ರಜ್ಞಾನ ಬಳಕೆ, ಖುಷ್ಕಿ ಆಧಾರಿತ ರೈತರು ಕಡ್ಡಾಯವಾಗಿ ಕೃಷಿ ಹೊಂಡಗಳನ್ನು ನಿರ್ಮಿಸಿಕೊಳ್ಳುವುದು, ಪ್ರತಿಯೊಬ್ಬ ರೈತರು ಕೃಷಿ ಯಾಂತ್ರೀಕರಣ, ಹೈನುಗಾರಿಕೆ ಹಾಗೂ ಇತರೆ ಉಪಕಸುಬುಗಳನ್ನು ಮಾಡುವುದರಿಂದ ತಮ್ಮ ಆದಾಯವನ್ನು ದ್ವಿಗುಣಗೊಳ್ಳಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

**ನಗದುರಹಿತ ಬ್ಯಾಂಕಿಂಗ್**: ನಗದು ರಹಿತ ಬ್ಯಾಂಕಿಂಗ್ ಕುರಿತ ಸಂವಾದದಲ್ಲಿ ರೈತರು ತಮ್ಮ ಹಲವಾರು ಸಂದೇಹಗಳಿಗೆ ಉತ್ತರವನ್ನು, ನಬಾರ್ಡ್‌ನ ಸಹಾಯಕ ಪ್ರಬಂಧಕರಾದ ಶ್ರೀ ಎನ್. ಅರವಮುದನ್, ಮೈಸೂರಿನ ಲೀಡ್ ಬ್ಯಾಂಕ್‌ನ ಹಿರಿಯ ವ್ಯವಸ್ಥಾಪಕರಾದ ಶ್ರೀ ಕೆ. ಶಿವಲಿಂಗಯ್ಯ, ಸುತ್ತೂರು ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ವ್ಯವಸ್ಥಾಪಕರಾದ ಹೆಚ್.ಕೆ. ಮಂಜುನಾಥ್ ಹಾಗೂ ಕಾವೇರಿ ಗ್ರಾಮೀಣ ಬ್ಯಾಂಕ್‌ನ ಅಧಿಕಾರಿಗಳಿಂದ ಪಡೆದುಕೊಂಡರು.

ರೈತರ ಪ್ರಶ್ನೆಗಳು ಹಾಗು ಅವುಗಳಿಗೆ ಉತ್ತರಗಳು ಕೆಳಕಂಡಂತಿದ್ದವು:

**ಪ್ರಶ್ನೆ: ತೆಂಗು ಬೆಳೆಯಿಂದ 10 ಲಕ್ಷ ಆದಾಯ ನಗದು ರೂಪದಲ್ಲಿ ದಳ್ಳಾಳಿಯಿಂದ ಬಂದಿದೆ. ದಳ್ಳಾಳಿಗಳು ರಶೀದಿಯನ್ನು ಕೊಡುವುದಿಲ್ಲ. ಅದನ್ನು ಖಾತೆಗೆ ಜಮಾ ಮಾಡಿದರೆ ತೆರಿಗೆ ವಿಧಿಸುತ್ತಾರೆಯೇ?**

**ಉತ್ತರ**: ಕೃಷಿ ಆದಾಯಕ್ಕೆ ರೂ. 25 ಲಕ್ಷದವರೆಗೂ ರಿಯಾಯಿತಿ ಇದೆ. ಅಲ್ಲದೇ

ಆದಷ್ಟು ರಶೀದಿ ಪಡೆದು ದಾಖಲೆ ಇಟ್ಟುಕೊಳ್ಳುವುದು ಒಳ್ಳೆಯದು. ಇಲ್ಲವಾದರೆ, ರೈತರೇ ಹಣ ಬಂದಿರುವ ಕುರಿತು ಯಾವ ಬೆಳೆಯಿಂದ ಹಣ ಬಂದಿದೆ, ಬೆಳೆ ಬೆಳೆಯಲು ಮಾಡಲಾದ ಖರ್ಚಿನ ವಿವರ ಮುಂತಾದುವನ್ನು ಒಂದು ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುವ ಹವ್ಯಾಸ ಬೆಳೆಸಿಕೊಳ್ಳಬೇಕು. ಫಾರಂ 15ಎ ಮೂಲಕ ರೈತರು ತಮ್ಮ ಆದಾಯವನ್ನು ಘೋಷಿಸಿಕೊಳ್ಳಬೇಕು ಎಂದು ಸಲಹೆ ನೀಡಲಾಯಿತು.



**ಪ್ರಶ್ನೆ: ಪೇಟಿಯಂ ಚೈನಾದ ಆಪ್? ನಮ್ಮ ದೇಶದವರು ಅಭಿವೃದ್ಧಿಪಡಿಸಿದ ಆಪ್ ಹಾಗು ಜನಸಾಮಾನ್ಯರಿಗೆ ನಿಲುಕುವ ಸವಲತ್ತುಗಳು ಯಾವುವು?**

**ಉತ್ತರ**: ಐಎಂಪಿಎಸ್, ಎಸ್‌ಬಿಐನ-ಬಡ್ಡಿ (e-buddy), ಯೂಪಿಐ ಆಪ್, MATM (Mobile ATM) ಅನ್ನು ಬಳಸಿ ಆಧಾರ್ ಸಂಖ್ಯೆ ಹಾಗೂ ಬಯೋಮೆಟ್ರಿಕ್ ಮುಂಖಾಂತರ ಹಣ ವರ್ಗಾವಣೆ, ಡಿಪಾಸಿಟ್ ಹಾಗೂ ಹಣ ಪಡೆದುಕೊಳ್ಳುವ ವ್ಯವಹಾರವನ್ನು ಪ್ರಾತ್ಯಕ್ಷಿಕೆಯ ಮೂಲಕ ರೈತರಿಗೆ ತೋರಿಸಿಕೊಡಲಾಯಿತು. ಮುಂದಿನ ದಿನಗಳಲ್ಲಿ ಎಲ್ಲಾ ಎಟಿಎಂ ಮಷೀನ್‌ಗಳಿಗೂ ಸಹ ಬಯೋಮೆಟ್ರಿಕ್ ಸೌಲಭ್ಯವನ್ನು ಅಳವಡಿಸಲಾಗುವುದು ಎಂದು ಬ್ಯಾಂಕ್ ಅಧಿಕಾರಿಗಳು ತಿಳಿಸಿದರು.

**ಪ್ರಶ್ನೆ: ಡೆಬಿಟ್ ಕಾರ್ಡ್ ಹಾಗು ನಗದು ರಹಿತ ವ್ಯವಹಾರಗಳಾದ ಆನ್ ಲೈನ್ ವ್ಯವಹಾರಕ್ಕೆ ಸೇವಾ ಶುಲ್ಕ ಹಾಕಲಾಗುತ್ತದೆಯೇ?**

**ಉತ್ತರ**: ಸದ್ಯದ ಪರಿಸ್ಥಿತಿಯಲ್ಲಿ ಡಿಸೆಂಬರ್ 30ರ ತನಕ ಯಾವುದೇ ಶುಲ್ಕ ನಿಗದಿಯಾಗಿಲ್ಲ. ನಂತರ ವಿಧಿಸಲಾಗುವ ಶುಲ್ಕವು ಗ್ರಾಹಕ ಸ್ನೇಹಿಯಾಗಿರಲಿದೆ. ಅಲ್ಲದೆ, ಶುಲ್ಕರಹಿತ ಪಾವತಿ ಉಪಕ್ರಮಗಳೂ ಲಭ್ಯವಾಗಲಿವೆ ಎಂದು ತಿಳಿಸಲಾಯಿತು.

**ಪ್ರಶ್ನೆ: ಪೆಟ್ರೋಲ್ ಬಂಕ್‌ಗಳಲ್ಲಿ ಕಾರ್ಡ್ ಬಳಸಿದರೆ ಸೇವಾಶುಲ್ಕ ಪಡೆದುಕೊಳ್ಳಲಾಗುತ್ತಿದೆ, ಏಕೆ?**

**ಉತ್ತರ**: ನೋಟು ಅಮೌಲ್ಯೀಕರಣಗೊಂಡ ಮೊದಲ ಕೆಲ ದಿನಗಳಲ್ಲಿ ಸೇವಾ ಶುಲ್ಕ ವಿಧಿಸಲಾಗಿತ್ತು ಆದರೆ ಈಗ ವಿಧಿಸಲಾಗುತ್ತಿಲ್ಲ. ವಿಧಿಸಲಾದ ಶುಲ್ಕವನ್ನು ಬ್ಯಾಕ್ ಖಾತೆಗೆ ಮರಳಿಸಿದ ಉದಾಹರಣೆಗಳನ್ನೂ ಪ್ರಸ್ತಾಪಿಸಲಾಯಿತು.

**ಪ್ರಶ್ನೆ: ಅಕೌಂಟ್ ಹ್ಯಾಕ್ ಆಗದಂತೆ ಹೇಗೆ ನೋಡಿಕೊಳ್ಳುವುದು?**

**ಉತ್ತರ**: ಯಾವುದೇ ಕಾರಣಕ್ಕೂ ಓಟಿಪಿ ಸಂಖ್ಯೆ, ಕೀಲಿ ಪದ (ಪಾಸ್‌ವರ್ಡ್ ಸಂಖ್ಯೆ), ಬ್ಯಾಂಕಿನ ಅಕೌಂಟ್ ಸಂಖ್ಯೆಗಳನ್ನು ಯಾರಿಗೂ ತಿಳಿಸಬೇಡಿ ಎಂದು ಎಚ್ಚರಿಸಲಾಯಿತು.

**ಪ್ರಶ್ನೆ: ಕೃಷಿಕಾರ್ಮಿಕಗೆ ಕೂಲಿ ಪಾವತಿಸುವುದು ಹೇಗೆ?**

**ಉತ್ತರ**: ಪೇಟಿಯಂ ಅಥವಾ ಆನ್ ಲೈನ್ ಮುಖಾಂತರ ಹಣ ವರ್ಗಾವಣೆ ಮಾಡುವುದು. ಇದು ಸದ್ಯದ ಪರಿಸ್ಥಿತಿಯಲ್ಲಿ ಕಷ್ಟವಾಗುತ್ತದೆ. ಆದರೆ ಎಲ್ಲರಿಗೂ ಇದು ಅನಿವಾರ್ಯವಾಗಲಿರುವುದರಿಂದ ಜನ ರೂಢಿ ಮಾಡಿಕೊಳ್ಳಬೇಕು.

**ಪ್ರಶ್ನೆ: ಬ್ಯಾಂಕಿನಲ್ಲಿ ಹಣ ಕಟ್ಟಲು ಹಾಗು ಪಡೆಯಲು ಕನ್ನಡದಲ್ಲಿ ಮಾಹಿತಿ ದೊರಕುವಂತಾಗಬೇಕು ಹಾಗು ನಗದುರಹಿತ ವ್ಯವಹಾರ ನಡೆಸಲು ಕನ್ನಡದ ಆಪ್ ಇದೆಯಾ?**

**ಉತ್ತರ**: ನಗದುರಹಿತ ವ್ಯವಹಾರ ನಡೆಸಲು ಕನ್ನಡದ ಆಪ್ ಅಭಿವೃದ್ಧಿಪಡಿಸಬೇಕಿದೆ.

**ಪ್ರಶ್ನೆ: ಅಂಗಡಿಗಳಲ್ಲಿ ಬಿಲ್ ಕೇಳಿದರೆ ವ್ಯಾಟ್ ಹಾಕುತ್ತಾರೆ, ಏನು ಮಾಡುವುದು?**

**ಉತ್ತರ**: ವ್ಯಾಟ್ ಹಾಕುವುದರಿಂದ ದೇಶದ ಪ್ರಗತಿ ಸಾಧ್ಯವಾಗುತ್ತದೆ, ಇದಕ್ಕಾಗಿ ಎಲ್ಲರೂ ಸಹಕರಿಸಬೇಕು ಹಾಗು ರಶೀದಿ ತಪ್ಪದೆ ಪಡೆಯಬೇಕು.

**ಪ್ರಶ್ನೆ: ಆಂಡ್ರಾಯ್ಡ್ ಮೊಬೈಲ್ ಇಲ್ಲದವರು ಹೇಗೆ ವ್ಯವಹಾರ ಮಾಡಬಹುದು?**

**ಉತ್ತರ**: ಡೆಬಿಟ್ ಕಾರ್ಡ್ ಮುಖಾಂತರ ವ್ಯವಹಾರ ನಡೆಸಬಹುದು ಹಾಗು ಆಧಾರ್ ಸಂಖ್ಯೆ ಹಾಗೂ ಬಯೋಮೆಟ್ರಿಕ್ ಮುಂಖಾಂತರ ವ್ಯವಹಾರ ನಡೆಸಲು ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗುತ್ತಿದೆ. ನಿಮ್ಮ ಮೊಬೈಲ್ ಸಂಖ್ಯೆಯನ್ನು ಬ್ಯಾಂಕಿನಲ್ಲಿ ರಿಜಿಸ್ಟರ್ ಮಾಡಿಸಿ ಮೆಸೇಜ್ ಕಳುಹಿಸುವ ಮೂಲಕವೂ ಸಹ ವ್ಯವಹಾರ ನಡೆಸಬಹುದು.

**ಪ್ರಶ್ನೆ: ಪೇಟಿಎಂ ಅಪ್‌ನಲ್ಲಿ ವ್ಯವಹರಿಸಿದರೆ ಶುಲ್ಕ ಪಾವತಿಸಬೇಕಾಗುತ್ತದೆಯಾ?**

**ಉತ್ತರ**: ಪೇಟಿಎಂ ಅಪ್‌ನಲ್ಲಿ ವ್ಯವಹರಿಸಿದರೆ ಶುಲ್ಕ ಇಲ್ಲ ಬದಲಾಗಿ ನಿಮಗೆ ರಿಯಾಯಿತಿ ದರ ಅಥವಾ ಅವರೇ ನಿಮಗೆ ಬೋನಸ್ ಹಣ ಹಿಂದಕ್ಕೆ ನೀಡುತ್ತಾರೆ.

ಹಿರಿಯ ವ್ಯವಸ್ಥಾಪಕರಾದ ಶ್ರೀ ಕೆ. ಶಿವಲಿಂಗಯ್ಯನವರು ಮಾತನಾಡುತ್ತಾ, ನಗದು ರಹಿತ ಬ್ಯಾಂಕಿಂಗ್‌ಗೆ ಇನ್ನು ಮುಂದೆ ಹೆಚ್ಚು ಉತ್ತೇಜನ ದೊರೆಯಲಿದ್ದು, ರೈತರು ತಮ್ಮ ಫೋನ್‌ಗಳ ಮುಖಾಂತರ ಚಾಲ್ತಿಯಲ್ಲಿರುವ ಅಪ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ದೈನಂದಿನ ವಹಿವಾಟುಗಳನ್ನು ನಡೆಸಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಶ್ರೀ ಎನ್. ಅರವಮುದನ್‌ರವರು ನವೀನ ಫೋನ್ ತಂತ್ರಜ್ಞಾನಗಳನ್ನು ಹೊಸದಾಗಿ ಅಳವಡಿಸಿಕೊಳ್ಳುವಾಗ ಸ್ವಲ್ಪ ಗೊಂದಲ ಉಂಟಾಗುವುದು ಸಹಜ, ಆದರೆ ನಾವು ಅನುಭವದಿಂದ ಕ್ರಮೇಣ ಎಲ್ಲಾ ಬ್ಯಾಂಕಿಂಗ್ ವ್ಯವಹಾರಗಳನ್ನು ಪೋನ್‌ನಲ್ಲಿಂಯೇ ಮಾಡಬಹುದಾಗಿದೆ ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಪ್ರತಿ ಬ್ಯಾಂಕಿನ ಸುತ್ತಮುತ್ತಲ ಗ್ರಾಮಗಳಿಗೆ "ಬ್ಯಾಂಕ್ ವ್ಯವಹಾರ ಪ್ರತಿನಿಧಿ"ಯೊಂದಿಗೆ (Bank Correspondent) "MATM" (Mobile ATM)ನ್ನು ನೀಡುತ್ತಲಿದ್ದು ರೈತರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು. ●

# ಒಂದು ಯಶೋಗಾಥೆ: ಗುಜರಾತ್ ರಾಜ್ಯವು ಕೃಷಿಯ ನಂದನವನ ಹೇಗಾಯಿತು?

ಡಾ॥ ಕೆ.ಆರ್. ಮಲ್ಲಿಕಾರ್ಜುನ ಸ್ವಾಮಿ.

ಗುಜರಾತ್ ರಾಜ್ಯದ ಸೌರಾಷ್ಟ್ರ ಪ್ರದೇಶದಲ್ಲಿ ಬೇಸಿಗೆಯ ಪ್ರಾರಂಭವು ಒಂದು ಭಯಾನಕ ಪರಿಸ್ಥಿತಿ. ಬಂಡೆಗಳಿಂದ ಕೂಡಿದ ಈ ಭೂಭಾಗವು ಸಣ್ಣ ಸಣ್ಣ ಬೆಟ್ಟಗಳು ಮತ್ತು ಅತಿ ಶುಷ್ಕ ಮೈದಾನ ಪ್ರದೇಶಗಳನ್ನು ಹೊಂದಿದ್ದು, ಅವುಗಳು ಅಧಿಕ ಪ್ರಮಾಣದಲ್ಲಿ ಶಾಖ ಅಥವಾ ಉಷ್ಣತೆಯನ್ನು ಹರಡುತ್ತವೆ. ನದಿಗಳು ಮತ್ತು ಬಾವಿಗಳು ಒಂದರ ನಂತರ ಒಂದು ಬತ್ತಿ ಹೋಗುತ್ತವೆ; ನೀರಿನ ಕೊರತೆ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ ಮತ್ತು 1999-2000 ಇಸವಿಗಳಲ್ಲಿ ಉಂಟಾಗಿದ್ದ ಬರಗಾಲದ ಅಥವಾ ಕ್ಷಾಮದ ನೆನಪು ಸುಳಿದಾಡುತ್ತಿರುತ್ತದೆ. ಈ ಪ್ರದೇಶದಲ್ಲಿ ಆಹಾರ ಬೆಳೆಗಳನ್ನು ಬೆಳೆಯಲು ಪ್ರಯತ್ನಿಸುವ ಮನುಷ್ಯನನ್ನು ದೇವರು ಆಶೀರ್ವದಿಸಲಿ.



175 ಎಕರೆ ಒಣ ಭೂಮಿಯನ್ನು ಹಸಿರಾಗಿಸಿರುವ ಸ್ವಾಮಿ ಅರುಣೀಭಗತ್

ಅದರೆ, ನೂರಾರು ರೈತರು ಈ ಶುಷ್ಕ ಭೂಪ್ರದೇಶದಲ್ಲಿ ಪ್ರತಿವರ್ಷವೂ ಅನೇಕ ಬಾರಿ ಬೆಳೆಗಳನ್ನು ಬೆಳೆಯಲು ಪ್ರಯತ್ನಿಸುತ್ತಿದ್ದಾರೆ. **'ಅಡ್ತಲಾ'** ಹಳ್ಳಿಯಲ್ಲಿ, **ವಲ್ಲಭಾಯ್ ಪಟೇಲ್** ಎಂಬ ರೈತನು ಹಿಂದೆ ಹತ್ತಿ ಬೆಳೆಯುತ್ತಿದ್ದನು; ಈಗ ಆತನು ಪಪಾಯ, ಬಾಳೆ, ಟೊಮ್ಯಾಟೋ, ಮುಂತಾದವುಗಳನ್ನು ಬೆಳೆಯುತ್ತಿದ್ದಾನೆ. ಕಡಿಮೆ ನೀರಾವರಿಯಿಂದ ಹೇರಳವಾಗಿ ಇಳುವರಿ ಪಡೆಯುತ್ತಿದ್ದಾನೆ.

ಸೌರಾಷ್ಟ್ರದ 'ಸೌರಂಗಪುರ' ಎಂಬ ಹಳ್ಳಿಯಲ್ಲಿಯೂ ಸಹಾ, **'ಸ್ವಾಮಿ ಅರುಣೀಭಗತ್'** ಎಂಬ ರೈತ ನಿಜವಾಗಿಯೂ ದೇವರಿಂದ ಅಶೀರ್ವದಿಸಲ್ಪಟ್ಟಿರುವ ಒಬ್ಬ ವ್ಯಕ್ತಿ. ಇವನು ಮುಕ್ತ ಮನಸ್ಸಿನ ಮತ ಶ್ರದ್ಧೆಯುಳ್ಳ " ಸ್ವಾಮಿ ನಾರಾಯಣ ಚಳುವಳಿ" ಗುಂಪಿನ ಒಬ್ಬ ನಾಯಕ. ಈ ರೈತನು 175 ಎಕರೆ ಖುಷ್ಕಿ ಭೂಮಿಯನ್ನು ಹಸಿರು ಸ್ವರ್ಗವನ್ನಾಗಿ ಪರಿವರ್ತಿಸಿದ್ದಾನೆ. ಈ ಭೂಮಿಯಲ್ಲಿ ಕಬ್ಬು, ಟೊಮ್ಯಾಟೊ, ಮತ್ತು ಬಿ.ಟಿ. ಹತ್ತಿಯನ್ನು ಬೆಳೆಯಲಾಗುತ್ತಿದೆ. ಈ ರೈತನು ಪಡೆದ ಅಧಿಕ ಇಳುವರಿಯಿಂದ, ಅಧಿಕ ಫಲವತ್ತತೆ ಇರುವ ಜಮೀನುಳ್ಳ ರೈತರೂ ಸಹಾ ಆಕರ್ಷಿತರಾಗಿ ಈತನ ಬೆಳೆಯನ್ನು ನೋಡಲು ಬರುತ್ತಿದ್ದಾರೆ ಮತ್ತು 'ಸ್ವಾಮಿ ಅರುಣೀಭಗತ್'ರವರು ಇದನ್ನು ಹೇಗೆ ಮಾಡಿದರು ಎಂದು ತಿಳಿದುಕೊಳ್ಳುತ್ತಿದ್ದಾರೆ. ಇದು ಸೌರಂಗಮರ ದೇವಸ್ಥಾನದ ಹನುಮಾನ್ ದೇವರೇ ರೂಪಿಸಿದ ಪವಾಡದಂತೆ ಕಂಡುಬರುತ್ತಿದೆ. ಈ ರೀತಿ ಮಾಡಿದವರಲ್ಲಿ 'ಸ್ವಾಮಿ ಅರುಣಿ ಭಗತ್' ಒಬ್ಬರೇ ಅಲ್ಲ. ಇಡೀ ಸೌರಾಷ್ಟ್ರ ಪ್ರದೇಶ ಮತ್ತು ನೆರೆಯ ಕಚ್ಛ್ ಪ್ರದೇಶಗಳೂ (ಅರ್ಧ ಮರುಭೂಮಿ, ಅರ್ಧ ಉಪ್ಪು ಮತ್ತು ನೀರು ನಿಲ್ಲುವ ಪ್ರದೇಶ) ಸಹಾ ಗುಜರಾತಿನ ಕೃಷಿ ಕ್ರಾಂತಿಯ ಯಂತ್ರಸಾಧನಗಳಾಗಿದ್ದು, ಗುಜರಾತ್ ರಾಜ್ಯವನ್ನು ದೇಶದ ಅತೀ ವೇಗವಾಗಿ ಬೆಳೆಯುತ್ತಿರುವ ಕೃಷಿ ಆರ್ಥಿಕತೆಯ ರಾಜ್ಯಗಳ ಜೊತೆಗೆ ಸೇರಿಸಿವೆ. ಕಳೆದ ದಶಕದಲ್ಲಿ ಗುಜರಾತಿನ ಕೃಷಿ ಬೆಳವಣಿಗೆಯು ಶೇಕಡಾ 9.6 ಇದ್ದು, ಇದು ರಾಷ್ಟ್ರೀಯ ಕೃಷಿ ಬೆಳವಣಿಗೆಯನ್ನು (ಶೇಕಡಾ 2.9) ಮೀರಿಸಿದೆ. ಇದರಿಂದ ಗ್ರಾಮೀಣ ಪ್ರದೇಶಗಳ ಆದಾಯ ಹೆಚ್ಚಾಗಿದೆ.



ಕಡಿಮೆ ನೀರಿನಿಂದ ಅಧಿಕ ಇಳುವರಿ ಪಡೆದಿರುವ ಶ್ರೀ ವಲ್ಲಭಾಯ್ ಪಟೇಲ್

ಭಾರತದ ವಾರ್ಷಿಕ ಕೃಷಿ ಬೆಳವಣಿಗೆ ಶೇಕಡಾ 4 ಅಥವಾ ಅದಕ್ಕಿಂತ ಕಡಿಮೆ. ಆರು ದಶಕಗಳಿಗಿಂತ ಹಿಂದೆ ಇದ್ದ ಶೇಕಡಾ 46.3 ಜಿ.ಡಿ.ಪಿ.ಯು (ಒಟ್ಟು ದೇಶೀಯ ಉತ್ಪನ್ನ), ಈಗ ಶೇಕಡಾ 16.6ಕ್ಕೆ ಇಳಿದಿದೆ. ದೇಶದ ಅರ್ಥಿಕತೆಯಲ್ಲಿ ಕೃಷಿಯ ಪ್ರಾಮುಖ್ಯತೆಯನ್ನು ಕಾರ್ಯನೀತಿ ರೂಪಿಸುವವರು ಎಲ್ಲೋ ನಿರ್ಲಕ್ಷಿಸಿದ್ದಾರೆ ಅಥವಾ ಕಡೆಗಣಿಸಿದ್ದಾರೆ ಎಂದೆನಿಸುತ್ತದೆ. ಅದರೆ, ಗುಜರಾತ್ ರಾಜ್ಯ ಸರ್ಕಾರವು, ಕೈಗಾರಿಕೆಗಳ ಪ್ರಗತಿಗೆ ಕೊಡುವ ಉತ್ತೇಜನವು, ಕೃಷಿ ವಿಭಾಗವನ್ನು ಹಿಂದಕ್ಕೆ ತಳ್ಳದಂತೆ ಜಾಗ್ರತೆ ವಹಿಸಿದೆ. "ಗುಜರಾತ್ ರಾಜ್ಯ ಸರ್ಕಾರದ ಆಕ್ರಮಣಶೀಲ ಕೈಗಾರಿಕಾ ಕಾರ್ಯನೀತಿಯನ್ನು ಹೊಗಳಲಾಗಿದ್ದು, ಈ ರಾಜ್ಯವು ಬಂಡವಾಳ ಹೂಡಲು

ವಿಶೇಷವಾದ ಸ್ಥಳ ಎಂದೂ ತಿಳಿಯಲಾಗಿದೆ. ಆದರೂ, ಗುಜರಾತಿನ ಭಾರತೀಯ ಜನತಾ ಪಕ್ಷದ ಸರ್ಕಾರವು ನಿಜವಾಗಿಯೂ ಹೆಚ್ಚು ಶಕ್ತಿ ಮತ್ತು ಸಂಪನ್ಮೂಲಗಳನ್ನು ಕೃಷಿ ಕ್ಷೇತ್ರದ ಅಭಿವೃದ್ಧಿ ಅಥವಾ ಬೆಳವಣಿಗೆ ತೀವ್ರಗೊಳ್ಳಲು ವಿಶಾಲವಾದ ಸಟ್ಟಾ ವ್ಯಾಪಾರ ಕಾರ್ಯನೀತಿಗಳನ್ನು ರೂಪಿಸಿದೆ, ಎಂದು ಕೃಷಿ ವಿಜ್ಞಾನಿ 'ಅಶೋಕ್ ಗುಲಾಟಿ' ಮತ್ತು ಇತರ 4 ವಿಜ್ಞಾನಿಗಳು, "ಎಕನಾಮಿಕ್ಸ್ ಮತ್ತು ಪೊಲಿಟಿಕಲ್ ವೀಕ್ಲಿ"ಯಲ್ಲಿ ಪ್ರಕಟಿಸಿದ ಅವರ ಲೇಖನದಲ್ಲಿ ತಿಳಿಸಿರುತ್ತಾರೆ.

ಕೃಷಿಯನ್ನು ಪುನರುಜ್ಜೀವನಗೊಳಿಸಲು ಗುಜರಾತ್ ರಾಜ್ಯ ಸರ್ಕಾರವು ಉಪಯೋಗಿಸಿಕೊಂಡ, ಅನೇಕ ಮುನ್ನುಗ್ಗುವ ಅಂಶಗಳನ್ನು ಅಭ್ಯಾಸ ಮಾಡುವುದರಿಂದ ಇಡೀ ದೇಶಕ್ಕೆ ಮುಖ್ಯವಾದ ಪಾಠಗಳನ್ನು ಇದು ಅನಾವರಣ ಮಾಡಬಲ್ಲದು. ಅಂತ್ಯದಲ್ಲಿ ಹೇಳುವುದಾದರೆ, ನೀರಿನ ಕೊರತೆಯುಳ್ಳ ಸೌರಾಷ್ಟ್ರ ಮತ್ತು ಕಚ್ಛ್ ಪ್ರದೇಶಗಳು ಇದನ್ನು ಸಾಧಿಸಿರಬೇಕಾದರೆ, ಭಾರತದ ಇತರ ಪ್ರದೇಶಗಳು ಏಕೆ ಸಾಧಿಸಲಾರವು?

**ಫಲವತ್ತಾದ ಕಾರ್ಯನೀತಿಗಳು**

ಒಂದು ಕ್ಷಣ ಯೋಚಿಸಿನೋಡಿದರೆ, ಗುಜರಾತಿನಲ್ಲಿ ಕೃಷಿ ಪವಾಡವು ಉಂಟಾಗಲು ಮುಖ್ಯವಾದ ಕಾರಣಗಳೆಂದರೆ, ಅನೇಕ ದಶಕಗಳಿಂದ ಉಂಟಾದ ಉತ್ತಮ ಮುಂಗಾರು ಮಳೆ; ಕೇಂದ್ರ ಸರ್ಕಾರದಿಂದ ದೊರೆತ ಹೆಚ್ಚಿನ ಕನಿಷ್ಠ ಬೆಂಬಲ ಬೆಲೆ; ಮತ್ತು ಬಿ.ಟಿ. ಹತ್ತಿಯ ವಿಸ್ತೀರ್ಣ ಹೆಚ್ಚಾದದ್ದು. ಬಿ.ಟಿ. ಹತ್ತಿಯು ಒಂದು ಲಾಭದಾಯಕ ಬೆಳೆ. ಆದರೆ ಈ ಅನುಕೂಲಗಳು ದೇಶದ ಇತರ ಭಾಗಗಳಿಗೂ ದೊರಕಿದ್ದವು ಮತ್ತು ಗುಜರಾತ್ ರಾಜ್ಯದ ಅತ್ಯುತ್ತಮ ಸಾಧನೆಗೆ ಇವುಗಳು ಕಾರಣ ಎಂದು ವಿವರಿಸಿರಲಿಲ್ಲ.

ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದ ಕಾನೂನುಗಳ ತಿದ್ದುಪಡಿ ಮಾಡಿದ ಅಥವಾ ಸುಧಾರಣೆ ಮಾಡಿದ ಮತ್ತು ರೈತರು ಅವರು ಬೆಳೆದ ಬೆಳೆಗಳನ್ನು ನೇರವಾಗಿ ಖಾಸಗಿ ಖರೀದಿದಾರರಿಗೆ ಮಾರಾಟ ಮಾಡಲು ಅನುಮತಿ ಕೊಟ್ಟ ಮೊದಲನೆಯ ರಾಜ್ಯ ಗುಜರಾತ್. ಈಗಲೂ ಸಹಾ, ಅನೇಕ ರಾಜ್ಯಗಳು ಈ ಕೆಲಸವನ್ನು ಮಾಡಿರುವುದಿಲ್ಲಾ. ಮತ್ತು ರೈತರಿಗೂ ಮತ್ತು ಅವರ ಉತ್ಪನ್ನಗಳನ್ನು ಖರೀದಿಸುವ ಸರ್ಕಾರೀ ಕೇಂದ್ರಗಳ ಜೊತೆಗೂ ಗಂಟು ಹಾಕಲಾಗಿದೆ. ಕೆಲವು ರಾಜ್ಯಗಳು ಈ ಸುಧಾರಣೆಗಳಿಂದ ಹಿಂದೆಸರಿದಿವೆ. ಆದರೆ ಗುಜರಾತ್ ರಾಜ್ಯವು ರೈತರಿಗೆ ಮಾರುಕಟ್ಟೆ ಮಾರ್ಗಗಳು ತೆರೆದುಕೊಳ್ಳಲು ಅನುಕೂಲವಾಗುವಂತೆ ದೃಢವಾಗಿ ನಿಂತಿದೆ. ಒಪ್ಪಂದ ಕೃಷಿಗೂ ಸಹಾ ಇದು ದಾರಿ ಮಾಡಿಕೊಟ್ಟಿದೆ. ಗುಜರಾತ್ ರಾಜ್ಯವು 2004–05ರಲ್ಲಿ ಒಂದು ಅಸಾಮಾನ್ಯವಾದ ಹೆಜ್ಜೆಯನ್ನು ಹಾಕಿತು. ಒಂದು ವರ್ಷ ಮುಂಚಿತವಾಗಿ ಖಾಸಗಿ ಸಂಸ್ಥೆಗಳು ರೈತರಿಂದ ಅವರ ಬೆಳೆಗಳನ್ನು ಕೊಳ್ಳಲು ಅನುಮತಿಕೊಟ್ಟಿತು. ಇದರಿಂದ ರೈತರು ಕೃಷಿ ಉತ್ಪನ್ನಗಳ ಬೆಲೆಗಳ ಏರಿಳಿತಗಳಿಂದ ರಕ್ಷಣೆ ಪಡೆಯಲು ಸಹಾಯವಾಯಿತು ಮತ್ತು ಅವರ ಬೆಳೆಗಳಿಗೆ ಕನಿಷ್ಠ ಬೆಲೆ ದೊರಕಿಸಿಕೊಡುವ ಭರವಸೆ ಸಿಕ್ಕಿದಂತಾಯಿತು. ಇದಲ್ಲದೆ, ವಹಿವಾಟು ನಡೆಸುವ ಕಾಲದಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳು ಹೆಚ್ಚಾದಲ್ಲಿ, ರೈತರಿಗೂ ಹೆಚ್ಚು ಬೆಲೆಯನ್ನು ಕೊಡುವ ಮೃದು–ಧೋರಣೆಯನ್ನೂ ಅನುಸರಿಸಲಾಯಿತು. ಇದರಿಂದ ರೈತರಿಗೆ ಮಾರುಕಟ್ಟೆಯಲ್ಲಿ ಆಗುತ್ತಿದ್ದ ನಷ್ಟ ಕಡಿಮೆಯಾಯಿತು ಮತ್ತು ಖಾಸಗಿ ಸಂಸ್ಥೆಗಳು ಕೃಷಿ ಕ್ಷೇತ್ರದಲ್ಲಿ ಪರೋಕ್ಷವಾಗಿ ಬಂಡವಾಳ ಹೂಡಲು ಪ್ರೇರಣೆ ಸಿಕ್ಕಿದಂತಾಯಿತು.

(ಆಧಾರ: Bhaskar, R.N. 2010. How did Gujarat become a farming paradise. Forbes India Magazine, 19 March 2010).



## ನೀರು ಕೊಯ್ಲು

ಒಡುವ ನೀರ ನಡೆಸಿ, ನಡೆಯುವ ನೀರ ನಿಲ್ಲಿಸಿ
ನಿಂತ ನೀರ ಇಂಗಿಸಿ, ಈ ನೀರುಣಿಸಿ ಬೆಳೆಗಳ ರಕ್ಷಿಸಿ
ಇಳಿಜಾರಿಗೆ ಅಡ್ಡ ಉಳುಮೆ ಪಾಲಿಸಿ
ಜೊತೆಗೆ ಹುಲ್ಲುಗಳ ಬದು ನಿರ್ಮಿಸಿ
ಹೆಚ್ಚುವರಿ ನೀರಿಗೆ ತಡೆಗಟ್ಟೆ ಕಟ್ಟಿಸಿ

– ಡಾ। ಎಂ.ಎಂ. "ರೈತಗೀತೆ"

# ವಚನ ವಾಙ್ಮಯದಲ್ಲಿ ವೈಜ್ಞಾನಿಕ ಕೃಷಿಯ ಪ್ರತಿಪಾದನೆ

ಪ್ರೊ॥ ಎಂ. ರುದ್ರಾರಾಧ್ಯ

ವಚನಗಳು ಸರಳತೆಯ ಸಾಕಾರ. ವಚನಕಾರರು ನೇರನುಡಿಗಳಲ್ಲಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ಅರಿವಿನ ಮಹಾಪೂರಗಳನ್ನೇ ಹರಿಸುವಲ್ಲಿ ಸಿದ್ಧಹಸ್ತರು, ಪ್ರಸ್ತುತ ನಾವು ಕೈಗೆತ್ತಿಕೊಂಡಿರುವ ವಚನವೊಂದರಲ್ಲಿ ಕೃಷಿ ಕ್ಷೇತ್ರದ ವೈಜ್ಞಾನಿಕ ಪ್ರತಿಪಾದನೆ ಸ್ಪಷ್ಟವಾಗಿರುವುದನ್ನು ಕಾಣುತ್ತೇವೆ. ವಿಚಾರಮಂಡನೆಯಲ್ಲಿ ಇದನ್ನು ಸುಸ್ಪಷ್ಟಗೊಳಿಸುವುದೇ ನಮ್ಮ ಆಶಯವಾಗಿದೆ. ಅಂತಹ ಒಂದು ಪ್ರಾಮಾಣಿಕ ಪ್ರಯತ್ನವೇ ಈ ವಚನ ವಾಙ್ಮಯದ ಸದುದ್ದೇಶವಾಗಿದೆ.

ವಚನಕಾರರ ಕಾಲದಲ್ಲಿ ಪುರುಷರಂತೆ ಮಹಿಳೆಯೂ ಸಹ ಗರಿಗೆದರಿ ನಿಂತು ವಚನ/ಸಾಹಿತ್ಯ ರಚಿಸುವಷ್ಟು ಮುಂದಾದಳೆಂಬುದು ನಿತ್ಯಸತ್ಯ. ಆ ಕಾಲದಲ್ಲೇ (ಹನ್ನೆರಡನೆಯ ಶತಮಾನ) ಮಹಿಳೆಯು ತನ್ನ ವೈಚಾರಿಕ ಮನೋಭಾವನೆಗಳನ್ನು ಸ್ಫುರಿಸಿ, ತನ್ನ ಅಂತರಂಗದ ಭಾವನೆಯನ್ನು ಅಭಿವ್ಯಕ್ತಿ ಪಡಿಸುವುದರ ಜೊತೆಗೆ ಸಮಾಜದ ಆಗುಹೋಗುಗಳಿಗೆ ಸಾರ್ಥಕ ರೀತಿಯಲ್ಲಿ ಸ್ಪಂದಿಸಿದಳು. ಇಂತಹವರ ಸಾಲಿನಲ್ಲಿ ಮೊದಲು ನೆನೆಪಾಗುವವರು ಶಿವಶರಣೆ ಅಕ್ಕಮಹಾದೇವಿ. ಆಕೆಯು ವಚನಗಳು ಜನಭಾಷೆಯ ಸ್ಪರ್ಶವನ್ನು ಹೊಂದಿದ ದಟ್ಟ ಅನುಭವದ ದಿಟ್ಟ ನುಡಿಗಳೇ ಸೈ!

ವಿಚಾರ ಮಂಡನೆಗೆ ಆಯ್ಕೆಮಾಡಿಕೊಂಡಿರುವ ಪ್ರಧಾನ ವಚನವೆಂದರೆ–ಶಿವಶರಣೆ ಅಕ್ಕಾಮಹಾದೇವಿಯವರು ರಚಿಸಿದ ಒಂದು ಅರ್ಥಪೂರ್ಣ ವಚನ. ಕೃಷಿ ವಿಜ್ಞಾನದೊಂದಿಗೆ ತಾದ್ಯಾತ್ಮಗೊಂಡಿರುವ ಅಂತಹ ಒಂದು ವಚನವನ್ನು ನೋಡುವುದಾದರೆ–

*ಈಳೆ ನಿಂಬೆ ಮಾವು ಮಾದಲಕ್ಕೆ* [1]
*ಹುಳಿ ನೀರನೆರೆದವರಾರಯ್ಯ?*
*ಕಬ್ಬು ಬಾಳೆ ಹಲಸು ನಾರಿವಾಳಕ್ಕೆ*
*ಸಿಹಿ ನೀರನೆರೆದವರಾರಯ್ಯ?*
*ಕಳವೆ ರಾಜಾನ್ನ ಶಾಲ್ಯನ್ನಕ್ಕೆ*
*ಓಗರದ ಉದಕವನೆರೆದವರಾರಯ್ಯಾ?*
*ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ*
*ಪರಿಮಳದುದಕವನೆರೆದವರಾರಯ್ಯಾ?*
*ಇಂತೀ ಜಲವು ಒಂದೆ ನೆಲನು ಒಂದೆ*
*ಆಕಾಶವು ಒಂದೆ–*
*ಜಲವು ಹಲವು ದ್ರವ್ಯಂಗಳ ಕೂಡಿ,*
*ತನ್ನ ಪರಿ ಬೇರಾಗಿಹ ಹಾಗೆ,*
*ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನು*
*ಹಲವು ಜಗಂಗಳ ಕೂಡಿಕೊಂಡಿರ್ದದೇನು*
*ತನ್ನ ಪರಿಬೇರೆ !,* ಎಂಬುದಾಗಿದೆ.

ಇದನ್ನು ಕೂಲಂಕುಷವಾಗಿ ವಿಶ್ಲೇಷಿಸಿ ನೋಡೋಣ. **ವಚನದಲ್ಲಿ ಹಾಸುಹೊಕ್ಕಾಗಿರುವ ಜೀವವೈವಿಧ್ಯತೆ**: ಈ ವಚನದಲ್ಲಿ ಎಂಟು ಸಾಲುಗಳಿದ್ದು, ಮೊದಲ ನಾಲ್ಕು ಸಾಲುಗಳು – ನಮ್ಮ ಕೃಷಿ ವಿಜ್ಞಾನದಲ್ಲಿ ಯಾವುದೇ ಬೆಳೆಯ ತಳಿಯ(ಗಳ) ಸುಧಾರಣೆಯನ್ನು ಸಾಧಿಸಬೇಕಾದರೆ, ನಮಗೆ ಅತ್ಯಗತ್ಯವಾದ "ಜೀವವೈವಿಧ್ಯ" ಯು ಅತ್ಯಂತ ಅರ್ಥಪೂರ್ಣವಾಗಿ ಚಿತ್ರಿಸಲ್ಪಟ್ಟಿದೆ. ಇದನ್ನು ಪಠಿಸುವಾಗ ಎಂತಹ ಶ್ರೇಷ್ಠ ವಿಜ್ಞಾನಿಯಾದರೂ ಬೆಕ್ಕಸಬೆರಗಾಗುತ್ತಾನೆ. ಅಷ್ಟುಮಾತ್ರವಲ್ಲದೆ, ವಿವಿಧ ಬೆಳೆತಳಿಗಳ ಸ್ವಂತಿಕೆಗೆ ಅಥವಾ ತನ್ನತನಕ್ಕೆ ಇದಕ್ಕಿಂತ ಹಿರಿದಾದ ವರ್ಣನೆ ಅಗತ್ಯವೇ? ಎಂದು ಮೂಗಿನ ಮೇಲೆ ಬೆರಳಿಡುತ್ತೇವೆ, ಒಟ್ಟಿನಲ್ಲಿ ಹೇಳಬೇಕೆಂದರೆ – ಕೃಷಿಯಲ್ಲಿ ಜೀವ ವೈವಿಧ್ಯದ ಪ್ರಸ್ತುತತೆ, ಪ್ರಾಮುಖ್ಯತೆ ಮತ್ತು ಪ್ರಬುದ್ಧತೆಗಳೆಲ್ಲವನ್ನೂ ಅರ್ಥಪೂರ್ಣವಾಗಿ ಮನಗಾಣುತ್ತೇವೆ.

**ಕೃಷಿ ವಿಜ್ಞಾನಿಗಳ ಸಂಶೋಧನಾತ್ಮಕ ಪರಿಗಣನೆ**: ವಚನದಲ್ಲಿ ಕಂಡುಕೊಳ್ಳಲಾಗಿರುವ ಜೀವವೈವಿಧ್ಯತೆ (biodiversity)ಯು ವಿವರಣೆಯನ್ನು ಕೃಷಿವಿಜ್ಞಾನಿಗಳಾದ ಫಿಲರೋಪ್ (1956) ಮತ್ತು ಹ್ಯಾಮಿಲ್ಟನ್ (2005) ತಮ್ಮ ಲೇಖನಗಳಲ್ಲಿ ಮಂಡಿಸಿದ್ದಾರೆ. ನಾಸ್ (1994) ರವರು ಜೀವವೈವಿಧ್ಯತೆಯ ಸಂರಕ್ಷಣೆಯ ಬಗ್ಗೆ ವಿವರಿಸಿದ್ದಾರೆ.

ಪರಿಸರ ಮತ್ತು ಜೀವವೈವಿಧ್ಯತೆ (ಮೇಸ್ ಇತರರು 2012) ಬದಲಾಗುವ ಜೀವವೈವಿಧ್ಯತೆಯ ಪರಿಣಾಮಗಳು (ಚಾಪ್ಲಿನ್ 2000), ಜೀವ ವೈವಿಧ್ಯತೆಯ ಅವಕಾಶಗಳು (ಜಂಕಿನ್ಸ್ 2003), ಜೀವವೈವಿಧ್ಯತೆಯ ನಷ್ಟದಿಂದಾಗುವ ದುಷ್ಪರಿಣಾಮ (ಕಾರ್ಡಿನೇಲ್ 2012), ಹಾಗೂ ಜೀವವೈವಿಧ್ಯತೆಯ ನಿರ್ವಹಣೆ ಮತ್ತು ಸಂರಕ್ಷಣೆ (ಬೇಲಿ ಮತ್ತು ಇತರರು 2008) ಈ ಎಲ್ಲಾ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಇವೆಲ್ಲವೂ ಕೂಡ ನಮ್ಮ ವಚನದ ಮೂಸೆಯಲ್ಲಿ ತಿಕ್ಕಿನೋಡಿದಾಗ ತಪ್ಪದೆ ದೊರೆಯುವ ನಿತ್ಯಸತ್ಯಗಳಾಗಿವೆ. ಉದಾಹರಣೆಗೆ ನಮ್ಮ ರಾಷ್ಟ್ರದಲ್ಲಿ ಅತ್ಯಂತ ಉತ್ಕೃಷ್ಟವಾದ ಕಿರುಧಾನ್ಯಗಳೆನಿಸಿದ್ದ ನವಣೆ, ಸಾಮೆ, ಬರಗು ಕೊರಲೆ, ಸಜ್ಜೆ, ಹಾರಕ ಮುಂತಾದ ಸಿರಿಧಾನ್ಯಗಳು ನಮ್ಮ ಉದಾಸೀನತೆಯಿಂದಾಗಿ ಅವನತಿಯ ಹಾದಿ ಹಿಡಿದಿದ್ದವು. ಇದೀಗ ಅವುಗಳ ಬಗ್ಗೆ ಹಲವರು ಮನಗಂಡು ಅವುಗಳ ಪುನರುಜ್ಜೀವಗೊಳಿಸುವ ಕಾರ್ಯ ಭರದಿಂದ ಸಾಗಿದೆ (ಶ್ರೀಧರಮೂರ್ತಿ 2016).

ಪ್ರಕೃತಿಯಲ್ಲಿ ಲಭ್ಯವಿರುವ ಜೀವವೈವಿಧ್ಯದ ಬಗ್ಗೆ ವಿಚಾರಮಾಡುವಾಗ ಸಾಮಾನ್ಯವಾಗಿ ಕೃಷಿಕರು ಒಂದು ಬೆಳೆಯ ವಿವಿಧ ತಳಿಗಳ ಬಗ್ಗೆ ಪರಾಮರ್ಶಿಸುತ್ತಾರೆಯೆ ಹೊರತು ವಿವಿಧ ಬೆಳೆಗಳನ್ನಲ್ಲ ಎಂದು ಭಾವಿಸುತ್ತಾರೆ. ಇದಕ್ಕುತ್ತರವಾಗಿ (ಇ.ಓ. ವಿಲ್ಸನ್ 1988) ಅವರು ನೀಡುವ ವಿವರಣೆ ಅತ್ಯಂತ ಸುಸ್ಪಷ್ಟವಾಗಿದೆ. The variety of life at hierarchical level and spatial scale of biological organisation: genes within populations. Populations within species, species within communities, communities within landscapes, landscapes within biomes. Biomes within the biosphere. ಅಂದರೆ ಉತ್ತರದಾಯಿತ್ವ ಮಟ್ಟದಲ್ಲಿ ಗುಣಾಣುಗಳು ಅಥವಾ ವಂಶವಾಹಿಗಳು, ವಂಶವಾಹಿ ಸಮೂಹಗಳು (ಜೀನೋಮ್ಸ್) ಪ್ರಭೇದದೊಳಗಿನ, ಸಮೂಹದೊಳೊಳಗಿನ, ಒಳ ಪ್ರದೇಶಗಳು ಮುಂತಾಗಿ ಎಲ್ಲವೂ ಜೀವವೈವಿಧ್ಯಗಳೆಂದು ಪರಿಗಣಿಸಲ್ಪಡುತ್ತವೆ.

ಹಿಂದೂ ಸಂಪ್ರದಾಯದಲ್ಲಿ ದೇವತೆಗಳನ್ನು ಹಾಡಿಕೊಂಡಾಡಿ ಸ್ತುತಿಸುವಾಗ ಅಷ್ಟೋತ್ತರಗಳನ್ನು ಬಳಸುವುದು ಸನಾತನ ಕಾಲದಿಂದಲೂ ರೂಢಿಯಲ್ಲಿದೆ. ಇವುಗಳಲ್ಲೂ ಕೃಷಿಯ ವಿಚಾರವನ್ನು ಕಾಣಲು ಸಾಧ್ಯವೇ? ಎಂದು

ಪರಿಶೀಲಿಸುವಾಗ ಯಾವುದೇ ದೇವತೆಗಳ ಪೂಜೆಮಾಡುವಾಗ ಮೊದಲಿಗೆ ಪೂಜಿಸಲ್ಪಡುವ ಗಣೇಶನ ಅಷ್ಟೋತ್ತರಗಳಲ್ಲಿ ಇದನ್ನು ಕಂಡದ್ದು ನಿಜಕ್ಕೂ ಸಂತೋಷವಾಯಿತು. ವರಸಿದ್ಧಿವಿನಾಯಕ ಅಷ್ಟೋತ್ತರ 46ನೆಯ ಸ್ತುತಿಯಲ್ಲಿ *"ಓಂ ಬೀಜಪೂರಕಾಯ ನಮಃ"* ಎಂಬುದನ್ನು ನೋಡುತ್ತೇವೆ. ಅಂದರೆ ಕೃಷಿಯಲ್ಲಿ ಅತ್ಯಂತ ಪ್ರಶಸ್ತ ಪರಿಕರ ಸಾಮಗ್ರಿಯಾದ ಬೀಜವು ಗಣೇಶನಿಂದ ಕೊಡಲ್ಪಟ್ಟಿದೆ ಎಂದಾಯಿತಲ್ಲವೆ? ಅದರ ಆಸುಪಾಸಿನ ಸ್ತುತಿ ವಚನಗಳನ್ನು ನೋಡುವಾಗ *"ಓಂ ಅಕಲ್ಮಶಾಯ ನಮಃ"* ಎನ್ನುವುದನ್ನು ನೋಡುತ್ತೇವೆ. ಅಂದರೆ ನಮ್ಮ ಬೀಜದಲ್ಲಿ ಯಾವುದೇ ಕಲ್ಮಶವಿರಬಾರದು. ಕಳೆಬೀಜ, ಧೂಳು, ಗಂಡುಬೀಜ, ಇತರೆ ಬೀಜ ಇತ್ಯಾದಿಯಾಗಿ ಇರಬಾರದಲ್ಲವೆ?. ಮುಂದುವರೆದು *" ಓಂ ಶುದ್ಧಾಯನಮಃ"* ಎಂದು ಕೊಂಡಾಡುತ್ತೇವೆ. ಇದು ಶುದ್ಧಬೀಜ ಬಗ್ಗೆ ಹೇಳುತ್ತದೆ. ನಂತರ *"ಓಂ ಸ್ವಯಂ ಸಿದ್ಧಾರ್ಚಿತ ಪ್ರದಾಯ ನಮಃ"* ಎಂಬಲ್ಲಿ ನಮಗೆ ಬೇಕಾದ ಬೀಜವನ್ನ ನಾವೇ ಸಿದ್ಧಪಡಿಸಿಕೊಳ್ಳಬೇಕು. ಎಂಬ ಸತ್ಯಾಂಶವನ್ನು ಮನಗಾಣುತ್ತೇವೆ. ಹೀಗೆ ನಮ್ಮ ಪೂರ್ವಿಕರು ಏನೇ ಮಾಡುವಾಗ ತಮ್ಮ ಅನುಭಾವದ ಮೂಸೆಯ ಮೇಲೆ ವೈಜ್ಞಾನಿಕ ತಳಹದಿಯಲ್ಲಿ ಚೌಕಟ್ಟು ನೀಡುತ್ತಿದ್ದರು. ಎಂಬುದಕ್ಕೆ ಇದೊಂದು ಉದಾಹರಣೆ ಮಾತ್ರ.

**ಭೂಮಿಯ ಬಗ್ಗೆ ವಿವರಣೆ – ವಚನಾತ್ಮಕ ಮತ್ತು ವೈಜ್ಞಾನಿಕ**: ಪ್ರಸ್ತುತ ಪಡಿಸಲಾಗುತ್ತಿರುವ ವಚನದ ಮುಂದಿನ ಮೂರು ಸಾಲುಗಳಲ್ಲಿ ಇಂದಿಗೂ ಅಂದರೆ 2016ಕ್ಕೂ ಭೂಮಿ ಎಂಬುದಕ್ಕೆ ವಿಜ್ಞಾನಿಗಳು ನೀಡುವ ವ್ಯಾಖ್ಯಾನವನ್ನು ಆಕೆ ಅಂದೇ ಕಂಡುಕೊಂಡಿದ್ದಾಳೆ. ಕೃಷಿಯೋಗ್ಯ "ಭೂಮಿ"ಯ ವಿವರಣೆಯನ್ನು ಉತ್ಕೃಷ್ಟ ಮಟ್ಟದಲ್ಲಿ ಕಾಣುತ್ತೇವೆ. ವಾಸ್ತವದಲ್ಲಿ ಕಂಡುಬರುವ ಕಟುಸತ್ಯವೆಂದರೆ ಹನ್ನೆರಡನೆಯ ಶತಮಾನದ ಈ ಶಿವಶರಣೆ (ವಂಶವಾಹಿ ವಿಜ್ಞಾನ ಅಥವಾ ತಳಿ ಅಭಿವೃದ್ಧಿ ವಿಜ್ಞಾನ ಬೆಳಕಿಗೆ ಬಂದದ್ದೇ ಜಾನ್ ಗ್ರಿಗರ್ ಮೆಂಡೆಲ್ ಅವರ ಸಂಶೋಧನೆ ಫಲವಾಗಿ 1900ರಲ್ಲಿ ಜನ್ಮತಾಳಿದ ಈ ಸಸ್ಯ ತಳಿಶಾಸ್ತ್ರದ ಅದ್ಭುತ ಪ್ರಕ್ರಿಯೆಯಿಂದಾಗಿ; ಇಂದು 2016ನೇ ವರ್ಷದಲ್ಲೂ ಕೂಡ ಕೃಷಿ ಭೂಮಿ ಎಂಬ ಶಬ್ದಕ್ಕೆ ನೀಡಬಹುದಾದ ವಿವರಣೆಯನ್ನು ಶರಣೆ ಅಕ್ಕಾಮಹಾದೇವಿಯವರು ಅಂದೇ ನೀಡಿದ್ದಾರೆ ಎಂಬುದನ್ನು ನೋಡುವಾಗ ಆಕೆಯ ದಿವ್ಯದೃಷ್ಟಿಯ ಗಾಢ ಪರಿಚಯ ನಮ್ಮದಾಗುತ್ತದೆ. ವಾಸ್ತವವಾಗಿ ವಿಜ್ಞಾನದಲ್ಲಿಯೂ ಸಹ ಮಣ್ಣೆಂದರೆ ಭೂಮಿಯ ಚೌಕಟ್ಟು ಮಾತ್ರವಲ್ಲದೆ ಅದರ ಮೇಲೆ ಲಭ್ಯವಾಗುವ ಪ್ರಾಕೃತಿಕ ಸಂಪನ್ಮೂಲಗಳನ್ನೂ ಒಳಗೊಂಡಿರುತ್ತದೆ. ಎಂದು ಸ್ಪಷ್ಟವಾಗಿ ಹೇಳಲಾಗಿದೆ. (ಮನೋಜ್ ಗುಪ್ತ, 2010; ಗೋಪಾಲ್ ಜಿ ಮತ್ತು ಅಗರ್‌ವಾಲ್ 2010).

ಭೂಮಿ ಎಂಬುದಕ್ಕೆ ವಿಜ್ಞಾನಿಗಳು ನೀಡುವ ವ್ಯಾಖ್ಯಾನವನ್ನು ಆಕೆ ಅಂದೇ ಕಂಡುಕೊಂಡಿದ್ದಾಳೆ. ಭೂಮಿಯೆಂದರೆ ಕೇವಲ ಮಣ್ಣು ಮಾತ್ರವಲ್ಲ ಅದೊಂದು ಪರಿಸರ. ಆ ಭೂಮಿಯ ಮೇಲೆ ಬೀಳುವ ಮಳೆ, ಸೂರ್ಯನ ಬಿಸಿಲು ಎಲ್ಲದರ ಒಟ್ಟು ಪರಿಣಾಮಕ್ಕೆ ಭೂಮಿ ಎಂದು ವಿಜ್ಞಾನ ಇಂದಿಗೂ ವ್ಯಾಖ್ಯಾನಿಸುತ್ತದೆ. *"ಜಲವು ಒಂದೇ" "ನೆಲನು ಒಂದೇ", "ಆಕಾಶವು ಒಂದೇ"* ಎಂಬೀ ನುಡಿ ಮುತ್ತುಗಳು ಇದನ್ನು ಸಮರ್ಥಿಸುವುದಿಲ್ಲವೇ? ನೀರು ಯಾವ ಪಾತ್ರೆಯನ್ನು ಸೇರುತ್ತದೆಯೋ ಆ ಆಕಾರವನ್ನು ಹೊಂದುತ್ತದೆ, (ಡ್ಯಾನಿಲೋವ್, 1956) ಎಂಬ ವೈಜ್ಞಾನಿಕ ಸತ್ಯವು ಇಲ್ಲಿ ಬಿಂಬಿತವಾಗಿದೆ. *"ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿ ಬೇರಾಗಿಹ ಹಾಗೆ ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನು ಹಲವು ಜಗಂಗಳ ಕೂಡಿರ್ದಡೇನು? – ತನ್ನ ಪರಿ ಬೇರೆ* ಎಂಬಲ್ಲಿ ಈ ಅಂಶವನ್ನು ಮನಗಾಣುತ್ತೇವೆ. ಮಾತ್ರವಲ್ಲದೆ, ದೇವನೊಬ್ಬ ನಾಮ ಹಲವು;– ಅಲ್ಲಾ, – ಅಲ್ಲಮಾ – ಅಲ್ಲೇಲೂಯ ಎಂಬ ಪರಿಕಲ್ಪನೆಯನ್ನು ಮನಗಾಣಬಹುದಾಗಿದೆ.

ಇನ್ನೊಂದು ವಚನದಲ್ಲಿ ಆಕೆಯು, *'ಸುಕ್ಷೇತ್ರವನರಿತು ಬೀಜವ ಬಿತ್ತುವಂತೆ'* ಎನ್ನುತ್ತಾರೆ. ಬೀಜವನ್ನು ಬಿತ್ತುವ ಪೂರ್ವದಲ್ಲಿ (ಅಥವಾ ಭೂಮಿ ಸಿದ್ಧತೆಗೂ ಮುನ್ನ) ಬಿತ್ತನೆ ಕ್ಷೇತ್ರವನ್ನು ಪರೀಕ್ಷಿಸುವುದಷ್ಟೇ ಅಲ್ಲ, ಚೆನ್ನಾಗಿ ಹದಗೊಳಿಸುವ ಕ್ರಿಯೆಯೂ ನಡೆಯಬೇಕು ಎನ್ನುತ್ತಾರೆ. ಇಲ್ಲವಾದರೆ ಬಿತ್ತಿದ ಬೀಜ ವ್ಯರ್ಥವಾಗುತ್ತದೆ. ಸುಬ್ಬಯ್ಯ ಮತ್ತು ಅಸೀಜಾ (1956) ಹಾಗೂ ಹೆಚ್.ಎಲ್.ಎಸ್. ಟಂಡನ್ (1978) ವೈಜ್ಞಾನಿಕವಾಗಿ ಭೂ ಪರೀಕ್ಷೆಯ ಬಗ್ಗೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಇದನ್ನೇ ಜನಪದದಲ್ಲಿ *'ನೆಲನೋಡಿ ಬೀಜ ಬಿತ್ತು,, ಕುಲನೋಡಿ ಹೆಣ್ಣುತತ್ತಾ, ಜಲನೋಡಿ ಬಾವಿತೆಗಿ'* ಎಂಬ ಗಾದೆ ಮಾತಿನಲ್ಲಿ ವ್ಯಕ್ತಪಡಿಸಲಾಗಿದೆ.

ಬಿತ್ತುವ ಭೂಮಿ ಮತ್ತು ಬಿತ್ತನೆಯ ಬೀಜಗಳ ಬಗ್ಗೆ ಅಣ್ಣ ಬಸವಣ್ಣನವರು ಅನನ್ಯವಾದ ವರ್ಣನೆಯನ್ನು ನೀಡಿ ಒಂದು ರೀತಿಯಲ್ಲಿ ನಮಗೆ ಇದಕ್ಕಿಂತ ಇನ್ನೇನಿದೆ ಎಂಬ ಅವಿನಾಭಾವವನ್ನು ನಮ್ಮ ಮುಂದಿಡುತ್ತಾರೆ. ಈ ಕೆಳಕಂಡ ವಚನವನ್ನು ನೋಡಿ:

*ಭಕ್ತಿಯೆಂಬ ಪೃಥ್ವಿಯ ಮೇಲೆ,*
*ಗುರುವೆಂಬ ಬೀಜವಂಕುರಿಸಿ,*
*ಲಿಂಗವೆಂಬ ಎಲೆಯಾಯಿತ್ತು*
*ಲಿಂಗವೆಂಬ ಎಲೆಯಮೇಲೆ*
*ವಿಚಾರವೆಂಬ ಹೂವಾಯಿತ್ತು*
*ಆಚಾರವೆಂಬ ಕಾಯಾಯಿತ್ತು*
*ನಿಷ್ಪತ್ತಿಯೆಂಬ ಹಣ್ಣಾಯಿತ್ತು*
*ನಿಷ್ಪತ್ತಿಯೆಂಬ ಹಣ್ಣು– ತೊಟ್ಟುಬಿಟ್ಟು ಕಳಚಿ ಬೀಳುವಲ್ಲಿ*
*ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ.*

ಆಚಾರ ವಿಚಾರಗಳಿಂದ ಬೆಳೆದ ಭಕ್ತಿಯ ಪರಿಪೂರ್ಣ ಸ್ವರೂಪವನ್ನು ಇಲ್ಲಿ ಆಸ್ವಾದಿಸುತ್ತಿದ್ದಾರೆ. ಶ್ರದ್ಧಾಭಕ್ತಿಯನ್ನು ಎಲ್ಲ ಬೆಳೆಗೂ ಆಧಾರಭೂತವಾದ ಭೂಮಿಗೆ ಹೋಲಿಸಿದ್ದಾರೆ. ಭಕ್ತಿ ಎಂಬುದು ಭೂಮಿ. ಇದರ ಮೇಲೆ ಗುರು ಎನ್ನುವ ಬೀಜ ಮೊಳಕೆಯೊಡೆದು ಲಿಂಗ ಎನ್ನುವ ಎಲೆಯಾಗುತ್ತದೆ. ಆ ಲಿಂಗ ಎನ್ನುವ ಎಲೆ, ದೈವತ್ವದ ಕಲ್ಪನೆ ಅರಳಿ ಬೆಳೆಯುವುದನ್ನು ಸೂಚಿಸುತ್ತದೆ. ಈ ದೈವತ್ವದ ಪರಿಕಲ್ಪನೆ ಮೇಲೆ ವಿಚಾರವೆಂಬ ಹೂ ಅರಳುತ್ತದೆ. ಅಂದರೆ ಧರ್ಮದಲ್ಲಿ ವೈಚಾರಿಕ ವಿವೇಚನೆ ಅಗತ್ಯವೆಂಬುದನ್ನು ಹೇಳುತ್ತಿದ್ದಾರೆ. ವಿಚಾರವೊಂದೇ ಸಾಲದು. ಅದರ ಜೊತೆಗೆ ಆಚಾರವೂ ಬೆಳೆಯಬೇಕು. ಅದು ವಿಚಾರವನ್ನು ಸಾರ್ಥಕಗೊಳಿಸುವ ಮುಂದಿನ ಹೆಜ್ಜೆ. ಆದ್ದರಿಂದಲೇ ಅದನ್ನು ಆಚಾರವೆಂಬ ಕಾಯಾಯಿತ್ತು ಎಂದು ಹೇಳುತ್ತಾರೆ. ಹೂ ಉದುರಿಹೋಗದೆ ಕಾಯಾಗಬೇಕಾದರೆ ಆಚಾರವಿಚಾರಗಳೆರಡೂ ಕೂಡಿ ಬೆಳೆಯಬೇಕು. ಬೆಳೆದ ಕಾಯಿ ಪೂರ್ಣಗೊಳ್ಳುವುದು ಅದು ಹಣ್ಣಾದಾಗ. ಅದೇ ನಿಷ್ಪತ್ತಿಯೆಂಬ ಹಣ್ಣು. ಇಲ್ಲಿ

'ನಿಷ್ಪತ್ತಿ' ಎಂಬ ಮಾತು ಬಹಳ ಅರ್ಥವತ್ತಾದದ್ದು. ಇಲ್ಲಿ ಅದನ್ನು ಮಾತಿಗೂ ಮೀರಿದ ಅನುಭಾವಿಕ ನಿಲವು. ಲಿಂಗಾಂಗಸಾಮರಸ್ಯ–ಮುಕ್ತಿ, ಎಂದು ಇಟ್ಟುಕೊಳ್ಳಬಹುದು. ಇಲ್ಲಿ ಭಕ್ತಿ ಸಾಧನೆ ಪಕ್ವವಾದ ಹಣ್ಣಾಗುತ್ತದೆ. ಆ ಹಣ್ಣು ಬೇರೆಯಾಗಿ ಉಳಿಯುವಂತಹುದಲ್ಲ, ಲಿಂಗಸ್ವರೂಪವಾಗಿ ಅದರಲ್ಲಿಯೇ ಬೆರೆಯುವಂತಹುದು. ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ ಎಂಬ ಮಾತು ಬಹಳ ಸಮರ್ಥವಾಗಿ ಅದನ್ನು ಚಿತ್ರಿಸುತ್ತದೆ. ಇಡೀ ವಚನ ಪರಿಪೂರ್ಣ ಸಾಧಕಜೀವನದ ಕೈಪಿಡಿಯಂತಿದ್ದು, ಹೇಳಿ ಮುಗಿಸಲಾಗದ ಅರ್ಥವನ್ನು ಅನುರಣನಗೊಳಿಸುತ್ತಾ ಸಾಧಕ ಬೆಳೆದ ಹಾಗೆ ತಾನೂ ಬೆಳೆಯುವ ಚಿರಂತನ ಚಲನಶೀಲ ಶಕ್ತಿಯನ್ನು ಪಡೆದಿದೆ. ಆಧ್ಯಾತ್ಮಿಕವಾಗಿ ಇಲ್ಲಿ ಸಾರ್ಥಕತೆಯನ್ನು ಕಂಡರೆ, ವೈಜ್ಞಾನಿಕವಾಗಿ ಸಫಲತೆಯನ್ನು ಕಾಣುತ್ತೇವೆ.

ಅಂತೆಯೇ ಬಸವಣ್ಣನವರು ಆ ಶತಮಾನದಲ್ಲಿ ಕೃಷಿಕನನ್ನೂ ಸಹ ಆಧ್ಯಾತ್ಮಿಕತೆಯ ಪ್ರತೀಕವಾಗಿಯೇ ಕಾಣುತ್ತಾರೆ. ನಿಜಕ್ಕೂ ಇದೊಂದು ಅತ್ಯುನ್ನತವಾದ ವಿಚಾರ. ಆ ಶತಮಾನದಲ್ಲಿ ರೈತ ಇದ್ದದ್ದೂ ಕೂಡ ಹಾಗೆಯೇ. ಬಸವಣ್ಣನವರ ನುಡಿಗಟ್ಟಿನಲ್ಲೇ ರೈತನನ್ನು ನೋಡುವುದಾದರೆ–

*ಕೃಷಿ ಕೃತ್ಯ ಕಾಯಕದಿಂದಾದಡೇನು?*
*ತನುಮನವ ಬಳಲಿಸಿ ತಂದು ದಾಸೋಹವ ಮಾಡುವ*
*ಪರಮ ಸದ್ಭಕ್ತನ ಪಾದವ ತೋರಯ್ಯ, ಎನಗೆ*
*ಅದೆಂತೆನೆ, ಆತನ ತನುಶುದ್ಧ, ಆತನ ಮನಶುದ್ಧ*
*ಆತನ ನಡೆಶುದ್ಧ, ನುಡಿಯೆಲ್ಲವೂ ಪಾವನ*
*ಆತಂಗೆ ಉಪದೇಶವ ಮಾಡಿದಾತನೇ ಪರಮ ಸದ್ಗುರು.*
*ಅಂತಪ್ಪ ಸದ್ಭಕ್ತನ ಮನೆಯಲ್ಲಿ ಲಿಂಗಾರ್ಚನೆಯ ಮಾಡುವ*
*ಜಂಗಮವೇ ಜಗತ್ಪಾವನ, ಇಂತಪ್ಪವರ ನೆರೆನಂಬಿ*
*ನಮೋ ನಮೋ ಎಂಬೆನಯ್ಯಾ,*
*ಕೂಡಲಸಂಗಮದೇವಾ.*

ಇದಕ್ಕಿಂತ ಬೇಕೆ? ಇದು ಸನ್ನಡತೆಯ ನಿಜವುಳ್ಳ ಕಾಯಕದ ಮಾರ್ಗ ಕಾಯಕವೇ ಕೈಲಾಸ. ಹೀಗೆ ಹೆಕ್ಕುತ್ತಾ ಹೋದರೆ ಶಿವಶರಣ–ಶರಣೆಯರ ವಚನಗಳು ಆಳವಾದ ಸಾಗರ. ಇಲ್ಲಿ ನನ್ನ ಪ್ರಯತ್ನ ಕೇವಲ ಒಂದು ಇಂಚುಪಟ್ಟಿಯಿಂದ ಹಿಮಾಲಯದ ಎತ್ತರ ಅಳೆಯುವ ಸಾಹಸ ಎನ್ನುವಷ್ಟು ಕಿರಿದು.

**ಸೂಚನೆ**: ದಿನಾಂಕ 02.10.2016ರಂದು ಶಿವಮೊಗ್ಗೆಯ ಜವಹರಲಾಲ್ ನೆಹರು ಇಂಜಿನಿಯರಿಂಗ್ ಕಾಲೇಜಿನ ಎಂ.ಬಿ.ಎ ಸಭಾಂಗಣದಲ್ಲಿ "ವಚನ ಸಾಹಿತ್ಯದಲ್ಲಿ ಕೃಷಿ ವಿಜ್ಞಾನ" ಎಂಬ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಿದ ಲೇಖನ.

## "ಕೃಷಿ ಕಾಯಕ" ಕ್ಕೆ ಅಭಿಪ್ರಾಯ ಪತ್ರ

**ಡಾ॥ ರಾಘವೇಂದ್ರ ಭಟ್ಟ,**

ಡಾ॥ ಮಹದೇವಪ್ಪ ಅವರ ಸಂಪಾದಕೀಯದಲ್ಲಿ ಪ್ರಕಟವಾಗುತ್ತಿರುವ "ಕೃಷಿ ಕಾಯಕ" ದ ಕೆಲವೊಂದು ಸಂಚಿಕೆಗಳನ್ನು ಓದುವ ಅವಕಾಶ ಸಿಕ್ಕಿತು . ಕೃಷಿ ಮತ್ತು ಸಂಬಂಧಿತ ವಿಷಯಗಳ ಬಗ್ಗೆ ಪ್ರಕಟವಾಗುವ ಹಲವಾರು ಲೇಖನಗಳು ನಿಜಕ್ಕೂ ಬಹು ಮುಖ್ಯವಾದ ಮತ್ತು ಉಪಯುಕ್ತವಾದ ವಿಷಯಗಳನ್ನು ಒಳಗೊಂಡು ಕೃಷಕ ಬಾಂಧವರಿಗೆ, ನಮಗೆ, ದೇಶದ ಜನತೆಗೆ ಆಹಾರ ಒದಗಿಸುವ ಕಾಯಕದಲ್ಲಿ ತೊಡಗಿರುವ ಮಣ್ಣಿನ ಮಕ್ಕಳಿಗೆ ನಿಜಕ್ಕೂ ಜ್ಞಾನವರ್ಧಕವಾಗಿವೆ . ಸರಳ ಕನ್ನಡದಲ್ಲಿ ಪ್ರಕಟವಾಗುವ ಲೇಖನಗಳು ರೈತ ಬಂಧುಗಳಿಗೆ ಅವರ ಕಾಯಕದಲ್ಲಿ ಸಹಾಯಕವಾಗುವುದು ಅಲ್ಲದೆ ಸ್ಫೂರ್ತಿಯನ್ನೂ ಉಂಟು ಮಾಡುತ್ತದೆಯೆಂದು ಭಾವಿಸುತ್ತೇನೆ . ಮುಂಬರುವ ಸಂಚಿಕೆಗಳು , ಕೃಷಿ ಮಾತ್ರವಲ್ಲದೆ , ಜಾನುವಾರು ಸಾಕಣೆ , ಕುಕ್ಕುಟ ವಿಜ್ಞಾನ ಮತ್ತು ಮತ್ಸ್ಯ ವಿಜ್ಞಾನದ ಬಗ್ಗೆಯೂ ಲೇಖನಗಳನ್ನು ಒಳಗೊಳ್ಳಲಿ ಎಂದು ಆಶಿಸುತ್ತೇನೆ . ಅಲ್ಲದೆ ದೇಶದ ಎಲ್ಲೆಡೆ ಇರುವ ಪ್ರಗತಿಪರ ಕೃಷಕರು ಮತ್ತು ಅವರ ಯಶೋಗಾಥೆಗಳನ್ನೂ ಪ್ರಕಟಿಸಿದರೆ , ಆತ್ಮಹತ್ಯೆಯಂಥ ಋಣಾತ್ಮಕ ಚಿಂತನೆಯಲ್ಲಿ ತೊಡಗಿರುವ ಅನೇಕಾನೇಕ ರೈತರು ಅಂತಹ ಲೇಖನಗಳಿಂದ ಪ್ರೇರಣೆಗೊಂಡು ಸಮಾಜಕ್ಕೂ ಅವರ ಕುಟುಂಬಕ್ಕೂ ಒಳಿತು ಮಾಡಲು ಅನುಕೂಲವಾಗಬಹುದು . ಸಂಚಿಕೆಯಲ್ಲಿ ಪ್ರಕಟವಾಗುವ "ನಿಮ್ಮ ಕೃಷಿ ಜ್ಞಾನಕ್ಕಿಷ್ಟು ಕಸರತ್ತು" ರೋಚಕವಾಗಿದ್ದು, ಓದುಗರಲ್ಲಿ ಮಾಹಿತಿಯ ಜೊತೆಗೆ ಆಸಕ್ತಿಯನ್ನೂ ಬೆಳೆಸುತ್ತದೆ . ಕೃಷಿ ಸೇವೆಯಲ್ಲಿ ಅನೇಕ ದಶಕಗಳಿಂದ ತಮ್ಮನ್ನು ತೊಡಗಿಸಿಕೊಳ್ಳುತ್ತಿರುವ ಪದ್ಮಭೂಷಣ ಡಾ॥ ಮಹದೇವಪ್ಪ ಅವರು ಕರ್ನಾಟಕದ ಹೆಮ್ಮೆ . ಅವರನ್ನೂ, ಇದನ್ನು ಪ್ರಕಟಿಸುತ್ತಿರುವ ಶ್ರೀ ಕ್ಷೇತ್ರವನ್ನೂ ನಾನು ಹಾರ್ದಿಕವಾಗಿ ಅಭಿನಂದಿಸುತ್ತೇನೆ .

ಡಾ॥ ರಾಘವೇಂದ್ರ ಭಟ್ಟ, ನಿರ್ದೇಶಕರು, ರಾಷ್ಟ್ರಿಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ (ಭಾ. ಕೃ. ಅ. ಪ. ), ಆಡುಗೋಡಿ ಅಂಚೆ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು – 560030. ಮೊಬೈಲ್ :9035665594

# ನಿಮ್ಮ ಕೃಷಿ ಜ್ಞಾನಕ್ಕಿಷ್ಟು ಕಸರತ್ತು

ಪ್ರೊ॥ ಎಂ.ರುದ್ರಾರಾಧ್ಯ ಮತ್ತು ಮೋಹನ್‌ಕುಮಾರ ಎನ್.ಜಿ.

**ಕೃಷಿಕಾಯಕದ ಪ್ರಿಯ ಓದುಗರೆ,**

**ಕೃಷಿಕ್ಷೇತ್ರದ ಒಡನಾಟವಿರುವವರ ಸಾಮಾನ್ಯ ಜ್ಞಾನಕ್ಕೆ ಬರುವ ಒಂದಿಷ್ಟು ಕುತೂಹಲಕರ ಮತ್ತು ಉಪಯುಕ್ತ ಮಾದರಿಗಳನ್ನು ಆಧರಿಸಿ ಈ ಕೆಳಗೆ ಕೆಲವೊಂದು ಪ್ರಶ್ನೆಗಳು, ಖಾಲಿ ಬಿಟ್ಟ ಸ್ಥಳಗಳನ್ನು ತುಂಬುವುದು, ಹೊಂದಾಣಿಕೆ ಮಾಡುವುದು ಸಂಕ್ಷಿಪ್ತರೂಪಗಳನ್ನು ವಿಸ್ತರಿಸುವುದು, ಪದಬಂಧ ತುಂಬುವುದು ಮುಂತಾದ, ಜ್ಞಾನದ ಜೊತೆಗೆ ಮನರಂಜನೆ ನೀಡುವಂತಹ ಅಂಕಣಗಳನ್ನು ನಿಮ್ಮ ಮುಂದೆ ಇಟ್ಟಿದ್ದೇವೆ. ಕೊನೆಯ ಪುಟದಲ್ಲಿ ನೀಡಲಾಗಿರುವ ಉತ್ತರಗಳನ್ನು ಮೊದಲೇ ನೋಡಬೇಡಿ. ನೀವೇ ಕಸರತ್ತು ಮಾಡಿ ಉತ್ತರ ದಾಖಲಿಸಿಕೊಳ್ಳಿ. ಎಲ್ಲಾ ಮುಗಿದ ಮೇಲೆ ಪತ್ರಿಕೆಯ ಕೊನೆಯಲ್ಲಿ ನೀಡಲಾಗಿರುವ ಸರಿ ಉತ್ತರಗಳೊಂದಿಗೆ ಹೋಲಿಸಿ ನಿಮ್ಮ ಕಸರತ್ತಿನ ಮೌಲ್ಯಮಾಪನ ನೀವೇ ಮಾಡಿಕೊಳ್ಳಿ.**

<u>ಮೌಲ್ಯಮಾಪನದ ಅಳತೆಗೋಲು:</u>

**ನಿಮ್ಮ ಉತ್ತರ**

| | |
|---|---|
| **1 ರಿಂದ 18 ಸರಿಯಿದ್ದರೆ** | **– ಸಾಮಾನ್ಯ ಜ್ಞಾನ;** |
| **19 ರಿಂದ 24 ಸರಿಯಿದ್ದರೆ** | **– ಉತ್ತಮ ಜ್ಞಾನ;** |
| **24 ರಿಂದ 30 ಸರಿಯಿದ್ದರೆ** | **– ಅತ್ಯುತ್ತಮ ಜ್ಞಾನ;** |
| **31 ಕ್ಕಿಂತ ಹೆಚ್ಚು ಸರಿಯಿದ್ದರೆ** | **– ನೀವು ಪರಿಣಿತರು;** |

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ಹಾಲಿನ ಗುಣಮಟ್ಟವನ್ನು ಪರೀಕ್ಷಿಸಲು ಬಳಸುವ ಮಾಪಕ ಯಾವುದು?

   ________________________________________

2. ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ (IARI) ಯಾವ ನಗರದಲ್ಲಿದೆ?

   ________________________________________

3. ಫರ್ಟಿಗೇಷನ್(ರಸಾವರಿ) ಎಂದರೇನು?

   ________________________________________

4. ಚಿನ್ನದ ಅಕ್ಕಿ ಯಾವ ಅನ್ನಾಂಗದಿಂದ ಸಂಪದ್ಭರಿತವಾಗಿದೆ?

   ________________________________________

5. ಕಾವೇರಿ ನದಿಯ ಉಗಮ ಸ್ಥಾನ ಯಾವುದು?

   ________________________________________

**ಆ. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸಮರ್ಪಕ ಉತ್ತರದಿಂದ ತುಂಬಿರಿ.**

1. ಕಾವೇರಿ ನದಿ ನೀರಿನ ಸಮಸ್ಯೆಗೆ ಈಡಾಗಿರುವ ರಾಜ್ಯಗಳು ______ ಮತ್ತು ______ .

2. ಚಿಕ್ಕಮಗಳೂರಿನಲ್ಲಿ ಹೆಚ್ಚಾಗಿ ______ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ.

3 .ರಾಷ್ಟ್ರೀಯ ಸಸ್ಯ ಜೈವಿಕತಂತ್ರಜ್ಞಾನ ಸಂಶೋಧನಾ ಕೇಂದ್ರ ______ ನಗರದಲ್ಲಿದೆ.

**ಇ. ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| 1. ಚಿನ್ನದ ಅಕ್ಕಿ | 1. ಕರ್ನಾಟಕ |
| 2. ಜಿ.ಎಂ. ತಳಿ | 2. ಅಕ್ಕಿ ಆಧಾರಿತ ಒಂದು ಮಾದಕ ಪೇಯ |
| 3. ಮೆಟ್ಟೂರು ಜಲಾಶಯ | 3. ಅಸ್ಸಾಂ |
| 4. ಕೆ.ಆರ್.ಎಸ್. ಜಲಾಶಯ | 4. ಎ–ಅನ್ನಾಂಗ |
| 5. ಸಾಕೆ | 5. ವಂಶಾಂತರಿ |
| | 6. ತಮಿಳುನಾಡು |
| | 7. ನವದೆಹಲಿ |

**ಈ. ಸರಿಯೋ ತಪ್ಪೋ ತಿಳಿಸಿ.**

1. ಕುದುರೆ ಮಸಾಲೆ ಒಂದು ಎಣ್ಣೆ ಕಾಳಿನ ಬೆಳೆ.
2. ಹೊಂಗೆ ಬೀಜದ ಎಣ್ಣೆಯನ್ನು ಜೈವಿಕ ಇಂಧನವಾಗಿ ಬಳಸುತ್ತಾರೆ.
3. ಕೆಲವು ಚರ್ಮರೋಗಗಳಿಗೆ ಬೇವಿನ ಎಲೆಯನ್ನು ಬಳಸುತ್ತಾರೆ.
4. ಈರುಳ್ಳಿ ಸೇವನೆ ಆರೋಗ್ಯಕ್ಕೆ ಒಳ್ಳೆಯದಲ್ಲ.
5. ಬೆಟ್ಟದ ನೆಲ್ಲಿಕಾಯಿಯಲ್ಲಿ ವಿಟಮಿನ್–ಸಿ ಹೇರಳವಾಗಿದೆ.

**ಉ. ಉ.ಕೆಳಗಿನ ಕೆಣಕು ಬಂಧದಲ್ಲಿ ನಾವುಗಳು ದಿನನಿತ್ಯ ಅಡುಗೆಗೆ ಬಳಸುವ ಏಳು ಸೊಪ್ಪುಗಳ ಹೆಸರನ್ನು ಗುರುತಿಸಬಲ್ಲಿರಾ?**

| | | | | | | | | | |
|---|---|---|---|---|---|---|---|---|---|
| ಪ್ರ | ಜ | ಪ | ತ್ರಿ | ಬ | ಶಂ | ಅ | ನ್ನ | ದಾ | ಆ |
| ದಂ | ತಾ | ದ್ರಾ | ಹೇ | ಸ | ಗು | ಜ್ | ರ್ಕಾ | ಅ | ಕೆ |
| ಸ | ಬ | ಗೆ | ಭ | ಅಂ | ಬಿ | ದ್ರ | ಜು | ಖ | ಮ |
| ಟು | ಲ | ಪಾ | ದೀ | ಟು | ಲಾ | ಕೊ | ಬ | ಕೆ | ರಾ |
| ಕೃ | ಪ | ಚ | ಮ | ಳೆ | ಹೊ | ವೇ | ಖ | ಎ | ದೀ |
| ಮೆಂ | ತ್ರೆ | ಲ | ದ್ವ | ದಾ | ನ್ನ | ತ್ತುಂ | ದಾ | ಲೆ | ನ |
| ಗೀ | ಪ | ಕ | ಪು | ಕ | ರಿ | ಮೆಂ | ರ್ಜೂ | ಬ | ಜಾ |
| ತೆ | ಗಂ | ಕ್ | ಶ್ರ | ಸ | ಬೇ | ತ | ಕ್ಷಿ | ಎ | ಣಿ |
| ಲೋ | ಷಾ | ತ್ರಾ | ಎ | ವಾ | ಗೆ | ವು | ಮಿ | ಸು | ವೆ |
| ಜಾ | ಕೊ | ವಾ | ಶಿ | ಳ | ವ್ಯ | ದ್ರಾ | ರ | ಣ್ಣ | ಷಾ |

**ಪ್ರಶ್ನೆಗೆ ಉತ್ತರ :**

1. ಲ್ಯಾಕ್ಟೋಮೀಟರ್,
2. ನವದೆಹಲಿ ,
3. ಬೆಳೆಗೆ ರಸಗೊಬ್ಬರ ಮತ್ತು ನೀರನ್ನು ಒಟ್ಟಿಗೆ ಕೊಡುವುದು,
4. ಎ–ಅನ್ನಾಂಗ,
5. ತಲಕಾವೇರಿ.

**ಖಾಲಿ ಬಿಟ್ಟ ಸ್ಥಳ :**

1.ಕರ್ನಾಟಕ ಮತ್ತು ತಮಿಳುನಾಡು,
2.ಕಾಫಿ.
3.ನವದೆಹಲಿ.

**ಹೊಂದಿಸಿ ಬರೆಯಿರಿ :**

1. 1–4 2. 2–5
3. 3–6 4. 4–1
5. 5–2

**ಸರಿ/ತಪ್ಪು :**

1. ತಪ್ಪು, 2. ಸರಿ,
3. ಸರಿ, 4. ತಪ್ಪು,
5. ಸರಿ

**ಕೆಣಕು ಬಂಧ :**

1. ಕೊತ್ತುಂಬರಿ 2.ಕರಿಬೇವು
3.ಪುದೀನ 4. ಬಸಳೆ
5.ಮೆಂತೆ 6.ಪಾಲಕ್
7.ದಂಟು

ಎಂ. ರುದ್ರಾರಾಧ್ಯ

**ಜ್ಞಾನಾರ್ಜನೆಯ ಜೊತೆಗೆ ಒಂದಿಷ್ಟು ಮನರಂಜನೆಯೂ ಬೇಕಲ್ಲವೆ?**

ರೈತರ ನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾಗಿ ಬರುವ ವಿಷಯಗಳ ಬಗ್ಗೆ ಸ್ವಲ್ಪ ಕಸರತ್ತು ಮಾಡಿಸಿ, ಖುಷಿ ಕೊಡಿಸುವ ಉದ್ದೇಶ ಈ ಕೃಷಿ ಬಂಧದ್ದು. ಇದನ್ನು ನಿಯತವಾಗಿ ಒಂದು ಅಂಕಣವಾಗಿಸುವ ಉದ್ದೇಶವಿದೆ. ಇದರ ಸರಿಯುತ್ತರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು, ಜಾಣ ಓದುಗರು ತಮ್ಮದೇ ಬಂಧಗಳನ್ನು ರಚಿಸಿ, ಉತ್ತರಗಳೊಡನೆ ಕಳುಹಿಸಿದಲ್ಲಿ ಉತ್ತಮವಾದವುಗಳನ್ನು ಆಯ್ದು ಪ್ರಕಟಿಸಲಾಗುವುದು.

**ಮೌಲ್ಯಮಾಪನ :**

**22–24 ಸರಿಯುತ್ತರ ನೀಡಿದವರು : ಪಂಡಿತರು**

**18–20 ಸರಿಯುತ್ತರ ನೀಡಿದವರು : ಜಾಣರು**

**15–17 ಸರಿಯುತ್ತರ ನೀಡಿದವರು : ಸಾಧಾರಣ**

## ಕೃಷಿ ಬಂಧ–22

| | | | | | | | | | | |
|---|---|---|---|---|---|---|---|---|---|---|
| 1 | | 2 | | 3 | ❋ | 4 | | 5 | | |
| | ❋ | | ❋ | 6 | ❋ | | ❋ | | ❋ | ❋ |
| 7 | | | ❋ | | ❋ | 8 | 9 | | | 10 |
| ❋ | ❋ | 11 | | | 12 | ❋ | 13 | | ❋ | |
| 14 | 15 | | ❋ | 16 | | 17 | ❋ | | ❋ | |
| ❋ | | ❋ | ❋ | ❋ | ❋ | 18 | | ❋ | ❋ | |
| ❋ | 19 | | 20 | | 21 | ❋ | ❋ | ❋ | 22 | |
| 23 | | ❋ | ❋ | ❋ | 24 | | | | ❋ | |

**ಎಡದಿಂದ ಬಲಕ್ಕೆ**

1. ತಾಳೆ ಜಾತಿಯ ಒಂದು ಮರ 5
4. ಕೆಸರು ಗದ್ದೆ ಮಾಡು 5
6. ತಪ್ಪು ಕೆಲಸಕ್ಕೆ ನೆರವಾಗುವುದು 3
7. ಪತ್ರ ಬರೆದು ಕಳುಹಿಸುವ ಕಾಗದದ ಚೀಲ ಹಿಂದುಮುಂದಾಗಿದೆ 3
8. ಆನಂದಪಡುವುದು 5
11. ಮನೆಯ ಒಡೆಯ 4
13. ಸಾಮಾನ್ಯವಾದದು 2
14. ಏನನ್ನಾದರು ಸಾಧಿಸಲು ತೊಡಗಿಕೊಳ್ಳುವಿಕೆ 3
16. ತಿಳುವಳಿಕೆ ಹಿಂದುಮುಂದಾಗಿದೆ 3
18. ಸಾಲದ ಮೇಲೆ ಕೊಡಬೇಕಾದ ಹಣ ತಿರುಗಿದೆ 2
19. ಕಂದಾಯ ವಸೂಲು ಮಾಡುವ ಅಧಿಕಾರಿ 5
22. ಸಮಯ ಹಿಂದುಮುಂದಾಗಿದೆ 2
23. ಕೆಲಸದಲ್ಲಿ ಶ್ರದ್ಧೆ ತೋರುವಿಕೆ ತಿರುಗಿದೆ 2
24. ಕಂದಾಯ ನಿಗದಿಪಡಿಸುವುದು 4

**ಮೇಲಿಂದ ಕೆಳಕ್ಕೆ**

1. ಆಲೂಗಡ್ಡೆಗೆ ಉತ್ತರ ಕರ್ನಾಟಕದಲ್ಲಿ ಹೀಗೂ ಕರೆಯುತ್ತಾರ 3
2. ಫಲಿಸದ ಪ್ರಯತ್ನ 5
3. ಒಂದು ಮಾವಿನ ತಳಿ 5
4. ಚೆನ್ನಾಗಿ ಬೆಳೆದಿರುವುದು 3
5. ನಷ್ಟ ಅನುಭವಿಸಿದವ 5
9. ಸ್ವಂತದ್ದು 2
10. ಮಳೆಗಾಲದ ಸಮಯ 6
12. ಮೋಸಕ್ಕೆ ಹೆಸರಾದ ಪ್ರಾಣಿ 2
15. ಮನೆಯ ಒಡತಿ 4
17. ತಡೆಯುವಿಕೆ 2
21. ಬಿಡುವಿನ ದಿನ 2

## ಕೃಷಿ ಬಂಧ–21ರ ಸರಿ ಉತ್ತರಗಳು

| | | | | | | | | | | | |
|---|---|---|---|---|---|---|---|---|---|---|---|
| | | | | 1 ಜ | ಮಾ | ಬಂ | 2 ದಿ | | | | |
| | | 3 ನ | ಗ್ಡಾ | ವಾ | ❋❋ | | 4 ವಿ | ಶಾ | 5 ಖ | | |
| | | ಸು | ❋ | 6 ರಿ | ಗೀ | ಹ | ಜ | ❋ | ರೀ | | |
| 7 ಸ | ಸ್ಯ | ಕು | 8 ಲ | | | | | 9 ಆ | ದಿ | ಶೇ | 10 ಷ |
| ಕ್ರ | ❋❋ | | ವಂ | | ❋ | | | ಗ | ❋❋ | | ಡ್ರ |
| 11 ಮ | ದು | 12 ಮ | ಗ | | | | | 13 ಸ | 14 ಮ | ರ | ಸ |
| | | ಸೂ | ❋ | 15 ಚ | ಪಂ | ರ | 16 ಸ | ❋ | ರು | | |
| | | 17 ರ | ಷಾ | ತು | ❋❋ | | 18 ರ | ಟಾ | ಗ | | |
| | | | | 19 ರ | ಧ | ಷ | ವಿ | | | | |

# 'ಕೃಷಿ ಕಾಯಕ' ತ್ರೈಮಾಸಿಕ ಪತ್ರಿಕೆಯ ಚಂದಾದಾರರಾಗಲು 'ಅರ್ಜಿ' ನಮೂನೆ

ಇಂದ : (ಹೆಸರು) :________________________________________________

ವಿಳಾಸ :________________________________________________

________________________________________________

______________________________ಪಿನ್ ಕೋಡ್ | | | | | | |

ದೂರವಾಣಿ ಸಂಖ್ಯೆ _______________ ಮೊಬೈಲ್ ಸಂಖ್ಯೆ ______________

ಗೆ : ಸಂಪಾದಕರು,
'ಕೃಷಿಕಾಯಕ' ತ್ರೈಮಾಸಿಕ, ನಂ.17/4
ಅಖಿಲ ಭಾರತ ವೀರಶೈವ ಮಹಾಸಭಾ, ವೀರಶೈವ–ಲಿಂಗಾಯತ ಭವನ,
ರಮಣ ಮಹರ್ಷಿ ರಸ್ತೆ, ಸದಾಶಿವನಗರ, ಬೆಂಗಳೂರು–560 080

ಮಾನ್ಯರೆ,

ನಾನು ವಾರ್ಷಿಕ/ಐದು ವರ್ಷಗಳ/ಆಜೀವ ಸದಸ್ಯತ್ವದ/ಪೋಷಕರ ಚಂದಾ ಹಣದ ಮೊತ್ತ ರೂ.______________ಗಳನ್ನು 'ಕೃಷಿಕಾಯಕ'ದ ಹೆಸರಿಗೆ ________________________ ಬ್ಯಾಂಕಿನ ಮೇಲೆ ಚೆಕ್/ಡಿ.ಡಿ.ಸಂಖ್ಯೆ ________________ದಿನಾಂಕ________________________ಅನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡುತ್ತಿದ್ದೇನೆ.

(ಚಂದಾ ವಿವರಗಳನ್ನು ಪತ್ರಿಕೆಯ ಪುಟ–1 ರಲ್ಲಿ ಕೊಡಲಾಗಿದೆ )

ಪತ್ರಿಕೆಯನ್ನು ನನ್ನ ಮೇಲಿನ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಕೋರುತ್ತೇನೆ.

**ತಮ್ಮ ವಿಶ್ವಾಸಿ,**

(ಚಂದಾದಾರರಾಗ ಬಯಸುವವರ ಸಹಿ)

ಹೆಸರು_____________________________

# ಶುಭಾರಂಭ

## ಕೃಷಿ ನವೋದ್ಯಮಿಗಳಿಗೆ

### ಜೆ.ಎಸ್.ಎಸ್. ಇನ್‌ಕ್ಯೂಬೇಟರ್



ಬೆಂಗಳೂರಿನ ಐಸಿಎಆರ್ ಆಟಾರಿ, ಪ್ರಧಾನ ವಿಜ್ಞಾನಿಗಳಾದ ಡಾ॥ ಎಂ.ಜೆ. ಚಂದ್ರೇಗೌಡರವರು ಹಾಗೂ ಶ್ರೀಮತಿ ಎನ್. ಜಮುನಾ ಅರಸ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು.



ಮೂರ್ತಿ ಸುಧಾಕರ್‌ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವುದು.

ವಸುಧಾ ಫುಡ್ ಪ್ರಾಡಕ್ಟ್ಸ್ ಮೈಸೂರು ರವರ ಲಾಂಛನ ಬಿಡುಗಡೆ





ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ "ಪದ್ಮಭೂಷಣ" ಡಾ॥ ಎಂ. ಮಹದೇವಪ್ಪನವರು. ಚಿತ್ರದಲ್ಲಿ ಎಡದಿಂದ ಡಾ॥ ಅರುಣ್ ಬಳಮಟ್ಟಿ, ಶ್ರೀ ಕೆ. ಶಿವಲಿಂಗಯ್ಯ, ಶ್ರೀ ಎನ್. ಎಂ. ಶಿವಶಂಕರಪ್ಪ, ಶ್ರೀ ಎನ್. ಅರವಮುದನ್ ಹಾಗೂ ಡಾ॥ ಎಂ. ಮಹಾಂತೇಶಪ್ಪನವರನ್ನು ಕಾಣಬಹುದಾಗಿದೆ.

ಕಾವೇರಿ ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧಿಕಾರಿಗಳು MATM (Mobile ATM)ನ್ನು ಆಧಾರ್ ಸಂಖ್ಯೆ ಹಾಗೂ ಬಯೋಮೆಟ್ರಿಕ್ ಮುಂಖಾಂತರ ಹಣ ವರ್ಗಾವಣೆ, ಡಿಪಾಸಿಟ್ ಹಾಗೂ ಹಣ ಪಡೆದುಕೊಳ್ಳುವುದನ್ನು ರೈತರಿಗೆ ಪ್ರಾತ್ಯಕ್ಷಿಕೆ ನೀಡುತ್ತಿರುವುದು





ರೈತರ ಆದಾಯವನ್ನು ದ್ವಿಗುಣಗೊಳಿಸುವ ಬಗ್ಗೆ ಕೆವಿಕೆಯ ಮುಖ್ಯಸ್ಥರಾದ ಡಾ॥ ಅರುಣ್ ಬಳಮಟ್ಟಿಯರವರು ಉಪನ್ಯಾಸ ನೀಡುತ್ತಿರುವುದು